ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸಂಚಿಕೆ 8 • ಸಂಪುಟ 1 • ಜೂನ್ 2025 • ಬೆಲೆ ರೂ. 18/–

# ಬಿಳುಪು

VENMAI

ಕನ್ನಡ ಮಾಸಿಕ



## ಅಪ್ಪಂದಿರ ದಿನದ

### ವಿಶೇಷಾಂಕ

RAMRAJ ©
COTTON
WHITE SHIRTS

# CLASSICS EMIT PURE PRESENCE.

When the sun blazes, tradition steps up in style. Ramraj Cotton's 100% Pure Cotton White Shirts are a timeless style statement, cool to wear and cooler to flaunt. This is heritage, tailored for the heat.





Available at Ramraj Showrooms and All Leading Textile Shops | Shop Online at www.ramrajcotton.in

ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಅಪ್ಪಂದಿರ ವಾತ್ಸಲ್ಯವನ್ನು ಅರ್ಥ ಮಾಡಿಕೊಂಡು, ಅವರಿಗೆ ತಕ್ಕ ಮರ್ಯಾದೆ ನೀಡಿ ಅವರಿಂದ ಬದುಕಿನ ಅನುಭವಗಳನ್ನು ಕಲಿತು ಅತ್ಯುತ್ತಮ ತಂದೆಯಾಗಿ ರೂಪುಗೊಳ್ಳಲು ದಾರಿ ತೋರಿಸುವ

# ಅಪ್ಪಂದಿರ ದಿನದ

## ವಿಶೇಷಾಂಕ




ಎನ್ನುವ ಈ ಸುಮಧುರ ಸಂಚಿಕೆಯನ್ನು
ನಿಮಗೆ ನೀಡಲು ನಾವು
ಹೆಮ್ಮೆ ಪಡುತ್ತೇವೆ.

# ಗೌರವಾನ್ವಿತರಿಗೆ...

**ನಮಸ್ಕಾರ.**

ರಾಮರಾಜ್ ಕಾಟನ್ ಕಂಪನಿಯು ಉತ್ತಮ ಗುಣಮಟ್ಟದ ಉಡುಪುಗಳನ್ನು ಉತ್ಪಾದಿಸುವುದರ ಮೂಲಕ ನೇಕಾರರ ಶ್ರೇಷ್ಠತೆಯನ್ನು ಜನಸಾಮಾನ್ಯರಿಗೆ ತಲುಪಿಸುತ್ತಿದೆ. ಅಷ್ಟು ಮಾತ್ರವಲ್ಲದೆ, ನೇಯ್ಗೆಯ ಸೊಬಗನ್ನು ಸಂಗೀತದ ರೂಪದಲ್ಲೂ ಜನರಿಗೆ ತಲುಪಿಸಲು ನಾವು ಬಯಸಿದ ಪರಿಣಾಮವಾಗಿ ನೇಕಾರರ ಬದುಕನ್ನು ಕೊಂಡಾಡುವಂತಹ ಐದು ಹಾಡುಗಳ ಆಲ್ಬಂ ಅನ್ನು ಬಿಡುಗಡೆ ಮಾಡಿದ್ದೇವೆ. ಇದರಲ್ಲಿ, ಒಬ್ಬ ನೇಕಾರ ತಂದೆಯ ಬಗೆಗಿನ ವಿಶೇಷವಾದ ಹಾಡೂ ಇದೆ. ದಿನವೂ ಬೇರೆಯವರಿಗೆ ಹೊಸ ಬಟ್ಟೆ ನೇಯ್ದು ಕೊಟ್ಟು ತಾನು ಕೊಳಕು ಬಟ್ಟೆಯನ್ನೇ ತೊಟ್ಟರೂ ಮಗಳಿಗೆ ಮಾತ್ರ ಆತ ಹೇಗೆ ಅತ್ಯುತ್ತಮ ಅಪ್ಪನಾಗಿ ಬದುಕುತ್ತಿದ್ದಾನೆ ಎಂಬುದನ್ನು ಸಾರುವ ಹಾಡು ಅದು.



'ನನ್ನ ತಂದೆಯೇ ನನಗೆ ದೇವರು...
ನನ್ನನ್ನು ಹೊತ್ತು ನಡೆದ ಭೂಮಿ ಅವರು...
ಅಪ್ಪ ಎಂಬ ಪದ ಚಿಕ್ಕದು...
ಅದರಲ್ಲಿರುವ ಅರ್ಥ ಮಾತ್ರ ದೊಡ್ಡದು..
ಎಲ್ಲ ಸಂಬಂಧಗಳನ್ನೂ ಅದು ಒಳಗೊಂಡಿದೆ....
ಅವರ ಪ್ರೀತಿಯನ್ನು ಅಳೆಯಲಾಗದು....
ಅಪ್ಪ ಜೊತೆಯಲ್ಲಿದ್ದರೆ ಭಯವೇ ಇಲ್ಲ...
ಅವರಂತೆ ಇಲ್ಲಿ ಯಾರೂ ಇಲ್ಲ'

ಎಂದು ಆರಂಭವಾಗುವ ಹಾಡಿನಲ್ಲಿ, 'ಐದು ವರ್ಷದ ತನಕ ತಂದೆಯ ಮಡಿಲು ಕೂಡ ಒಂದು ಗರ್ಭವೇ!' ಎಂಬ ಒಂದು ಸಾಲು ಬರುತ್ತದೆ. ಮಕ್ಕಳು ಬೆಳೆದಂತೆ ಇವರ ನಡುವಿನ ಅಂತರವೂ ಹೆಚ್ಚುತ್ತದೆ ಎಂಬುದನ್ನು ಸೂಚಿಸುವ ಸಾಲು ಅದು.

ಮಕ್ಕಳು ತಮ್ಮ ತಂದೆಯೊಂದಿಗೆ ನಿಕಟವಾಗಿರುವ ದಿನಗಳು ಅವರು ಬೆಳೆಯುತ್ತಾ ಹೋದಂತೆ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಅವರ ಮಾತಿನಲ್ಲಿ ತಾಯಿಯ ಪ್ರೀತಿ ಎದ್ದು ಕಾಣುತ್ತದೆ. ಅದನ್ನು ಅವರು ಬಹಿರಂಗವಾಗಿಯೇ ಹೇಳುತ್ತಾರೆ. ಆದರೆ ತಂದೆಯ ಬಳಿ ಹೊರಗೆ ತೋರಿಸದ ಅಘೋಷಿತ ಮತ್ತು ವ್ಯಕ್ತಪಡಿಸದ ಪ್ರೀತಿ ಹೆಚ್ಚಾಗಿರುತ್ತದೆ. 'ನಾನು ನನ್ನ ಮಗಳನ್ನು, ನನ್ನ ಮಗನನ್ನು ತುಂಬಾ ಪ್ರೀತಿಸುತ್ತೇನೆ' ಎಂದು ಹೇಳಿಕೊಳ್ಳುವ ಅವಕಾಶ ತಂದೆಗೆ ಹೆಚ್ಚಾಗಿ ಸಿಗುವುದೇ ಇಲ್ಲ. ತಂದೆ ಯಾವುದೋ ಒಂದು ಇಕ್ಕಟ್ಟಿನಲ್ಲಿದ್ದಾಗ ಮಕ್ಕಳು ಮತ್ತು ತಂದೆಯ ನಡುವಿನ ಆತ್ಮೀಯತೆ ಸಹಜವಾಗಿ ಪ್ರಕಟವಾಗುತ್ತದೆ.

ಒಂದು ದಿನ ಬಿಡುವು ಮಾಡಿಕೊಂಡು ಯಾವುದೇ ಆತಂಕವೂ ಇಲ್ಲದೆ, 'ನಮಗೆ ಈ ಜಗತ್ತನ್ನು ಪರಿಚಯ ಮಾಡಿಸಿ ಕೊಟ್ಟು, ನಮ್ಮನ್ನೇ ನಿನ್ನ ಲೋಕವನ್ನಾಗಿ ಭಾವಿಸಿಕೊಂಡು ಬದುಕುತ್ತಿರುವ ಅಪ್ಪಾ...! ನಾನು ನಿಮ್ಮ ಮಗುವಾಗಿ ಜನಿಸಿರುವುದಕ್ಕೆ ಧನ್ಯನಾಗಿದ್ದೇನೆ' ಎಂದು ನಮ್ಮ ಪ್ರೀತಿಯನ್ನು ನಮ್ಮ ತಂದೆಗೆ ವ್ಯಕ್ತಪಡಿಸುವುದಕ್ಕಾಗಿಯೇ ಜೂನ್ ತಿಂಗಳಿನಲ್ಲಿ ತಂದೆಯಂದಿರ ದಿನಾಚರಣೆಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ.

ಗರ್ಭದಲ್ಲಿ ಹೊತ್ತುಕೊಂಡು ಜೀವ ನೀಡುವವಳು ತಾಯಿಯಾದರೆ, ಹೆಗಲ ಮೇಲೆ ಹೊತ್ತುಕೊಂಡು ಜಗತ್ತನ್ನು ಪರಿಚಯಿಸುವವರು ತಂದೆ. ಸಾಮಾನ್ಯವಾಗಿ ಪುರುಷರ ಪ್ರಪಂಚವು ತ್ಯಾಗ ಮತ್ತು ಶ್ರಮದಿಂದ ತುಂಬಿರುತ್ತದೆ. ದೇಶವನ್ನು ಸೈನಿಕರು ಸುರಕ್ಷಿತವಾಗಿ ಕಾಪಾಡುವಂತೆ, ಜವಾಬ್ದಾರಿಯುತ ತಂದೆ ಮನೆಯ ರಕ್ಷಣೆಗೆ ತನ್ನ ಬದುಕನ್ನು ಮುಡಿಪಾಗಿಡುತ್ತಾನೆ.

ತಮ್ಮ ಮಕ್ಕಳಿಗಾಗಿ, ಅವರ ಬೆಳವಣಿಗೆಗಾಗಿ, ಅವರ ಔನ್ನತ್ಯಕ್ಕಾಗಿ ಮೇಣದಂತೆ ಕರಗಿ ಮಕ್ಕಳ ಬದುಕಿಗೆ ಬೆಳಕು ನೀಡುವ ಅಪ್ಪಂದಿರ ಅಸಂಖ್ಯಾತ ಲಿಖಿತ ಮತ್ತು ಅಲಿಖಿತ ಕಥೆಗಳಿವೆ. ತಾಯಿ, ತಂದೆ, ಗುರು, ದೇವರು ಹೀಗೆ ನಾವು ಯಾರಿಗೆಲ್ಲ ಗೌರವ

ನೀಡಬೇಕು ಎಂಬ ಒಂದು ಪಟ್ಟಿ ಇದೆ. ಇದರಲ್ಲಿ, ದೇವರಿಗಿಂತಲೂ ಮೊದಲು ನಾವು ಸ್ತುತಿಸಬೇಕಾದವರು ತಂದೆ–ತಾಯಿಗಳೇ! ಭಾರತೀಯ ಸಂಪ್ರದಾಯದಲ್ಲಿ ನಾವು ಇದನ್ನು ಅರಿತು ನಡೆದುಕೊಳ್ಳುತ್ತೇವೆ.

ಒಬ್ಬ ಅಮೇರಿಕನ್ ಸೈನಿಕನ ಮಗಳೇ, ತಂದೆಯಂದಿರ ದಿನವನ್ನು ಆಚರಿಸಲು ಕಾರಣವಾಗಿದ್ದುದು. ಸೋನಾರಾ ಎಂಬ ಆ ಅಮೇರಿಕನ್ ಬಾಲಕಿ ತನ್ನ 16ನೇ ವಯಸ್ಸಿನಲ್ಲಿ ತನ್ನ ತಾಯಿಯನ್ನು ಕಳೆದುಕೊಂಡಾಗ, ಆಕೆಯ ತಂದೆ ವಿಲಿಯಂ ಜಾಕ್ಸನ್ ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡರು. ಸೋನಾರಾ ಅವರನ್ನು ತಂದೆ ತಮ್ಮ ಕಣ್ಣಿನಂತೆ ಜೋಪಾನವಾಗಿ ನೋಡಿಕೊಂಡರು. ತನ್ನ ತಾಯಿಯಾಗಿಯೇ ಬದಲಾದ ತಂದೆಯ ಪ್ರೀತಿಗೆ ಮನಸೋತ ಮಗಳು, ಪ್ರತಿ ವರ್ಷವೂ ಎಲ್ಲರೂ ತಾಯಂದಿರ ದಿನವನ್ನು ಆಚರಿಸುವಂತೆಯೇ 'ತಂದೆಯಂದಿರ ದಿನ'ವನ್ನೂ ಆಚರಿಸಬೇಕು ಎಂದು ವಾಷಿಂಗ್ಟನ್ ದೇಶದ ಅಧ್ಯಕ್ಷರಲ್ಲಿ ಮನವಿ ಮಾಡಿ ಕೊಂಡಳು.

ಅಮೆರಿಕದಲ್ಲಿ ಸೋನಾರಾ ಪ್ರಾರ್ಥನೆ ಸಲ್ಲಿಸುವ ಚರ್ಚ್‌ನವರು ಮೊದಲು, ಬಾಲಕಿಯ ಮನವಿಯನ್ನು ಪರಿಗಣಿಸಿ, ವಿಲಿಯಂ ಜಾಕ್ಸನ್ ಅವರನ್ನು ಚರ್ಚ್‌ನಲ್ಲಿ ಗೌರವಿಸಿದರು. ಅದರ ನಂತರ ವಾಷಿಂಗ್ಟನ್ ರಾಜ್ಯವು ತಂದೆಯಂದಿರ ದಿನಾಚರಣೆಯನ್ನು ಆಚರಿಸಲು ಒಪ್ಪಿಕೊಂಡಿತು ಮತ್ತು ಅದರ ನಂತರ ಅಮೇರಿಕದ ಯುನೈಟೆಡ್ ಸ್ಟೇಟ್ಸ್‌ನಾದ್ಯಂತ ಇದನ್ನು ಆಚರಿಸುವ ಪದ್ಧತಿ ರೂಢಿಗೆ ಬಂತು ಎಂದೂ ಹೇಳಲಾಗುತ್ತದೆ. ಈಗ ಪ್ರಪಂಚದಾದ್ಯಂತ 'ತಂದೆಯ ದಿನ'ವನ್ನು ಆಚರಿಸಲಾಗುತ್ತಿದೆ. ಎಂದರೆ ತಂದೆಯಂದಿರ ದಿನವನ್ನು ಆಚರಿಸುವ ಪದ್ಧತಿ ಆರಂಭವಾದ್ದು ಪಾಶ್ಚಾತ್ಯರಿಂದಲೇ. ಆದರೇನಂತೆ. ಒಳ್ಳೆಯದನ್ನು ಎಲ್ಲಿಂದ ತೆಗೆದುಕೊಂಡರೇನು? ಅಲ್ಲವೇ?


ಒಬ್ಬ ಮಗ ಅಥವಾ ಮಗಳಿಗೆ ತಂದೆಯೇ ಮೊದಲ ಹೀರೋ. ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ, ಸಮಸ್ಯೆಗಳನ್ನು ಎದುರಿಸುವ ಧೈರ್ಯ, ಕುಟುಂಬವನ್ನು ಬೆಂಬಲಿಸುವ ಸದ್ಗುಣಗಳು, ಎಲ್ಲವೂ ತಂದೆಯಿಂದ ಮಕ್ಕಳಿಗೆ ಬರುತ್ತವೆ. ಹಾಗೆಯೇ ತಂದೆಗೆ ಕೆಟ್ಟ ಚಟಗಳಿದ್ದರೆ ಮಕ್ಕಳೂ ಅದನ್ನು ಕಲಿಯುವುದನ್ನು ನೋಡಬಹುದು. ಕೆಟ್ಟ ಪದಗಳನ್ನು ಬಳಸುವ ಮಕ್ಕಳು ತಮ್ಮ ತಂದೆಯಿಂದ ಆ ಪದಗಳನ್ನು ಕಲಿಯುತ್ತಾರೆ ಎಂದು ಒಂದು ಅಧ್ಯಯನವು ತಿಳಿಸುತ್ತದೆ. 'ಅಪ್ಪನ ಮಾತಿಗೆ ಮಿಕ್ಕ ಮಂತ್ರವಿಲ್ಲ' ಎಂಬ ಗಾದೆ ಅಪ್ಪನ ಮಾತು ಎಷ್ಟು ಮುಖ್ಯವಾದುದು ಎಂಬುದನ್ನು ತೋರಿಸುತ್ತದೆ.

ತಂದೆಯ ಮಾತುಗಳೇ ಮಕ್ಕಳಲ್ಲಿ ಪ್ರತಿಧ್ವನಿಸುತ್ತಿದೆ ಎಂದಾದರೆ ಇನ್ನು ಅವರು ಮಾಡುವ ಕೆಲಸಗಳ ಬಗ್ಗೆ ಬೇರೆ ಹೇಳಬೇಕಾಗಿಲ್ಲ. ತಂದೆಯು ತನ್ನ ಮಕ್ಕಳಿಗೆ ಕೊಡುವ ಶಾಶ್ವತವಾದ ಸಂಪತ್ತು ಸದ್ಗುಣಗಳಿಂದ ಕೂಡಿದ ಜೀವನವೇ ಆಗಿದೆ. ಅದನ್ನು ಮಾತುಗಳಲ್ಲಿ ಹೇಳುವುದಕ್ಕಿಂತಲೂ ಬದುಕಿ ತೋರಿಸಿದಾಗ ಅದನ್ನು ಮಕ್ಕಳೂ ತಮ್ಮ ಜೀವನದಲ್ಲಿ ಅನುಸರಿಸಲು ಸಾಧ್ಯವಾಗುತ್ತದೆ.

ಮಕ್ಕಳು ಪ್ರೀತಿ ಮತ್ತು ಸಂತೋಷದಿಂದ ತುಂಬಿದ ಜೀವನವನ್ನು ಸಾಗಿಸಲು ತಂದೆಯ ಕೊಡುಗೆಯೇ ಮುಖ್ಯವಾಗಿರುತ್ತದೆ. ಮಕ್ಕಳು ತಮ್ಮ ತಂದೆಯಿಂದ ಮನೆ, ದೇಶ ಮತ್ತು ಸಮಾಜಕ್ಕೆ ತಮ್ಮ ಕರ್ತವ್ಯವೇನು ಎಂಬುದನ್ನು ಕಲಿಯುತ್ತಾರೆ. ಪ್ರೀತಿಯನ್ನು ಹಂಚಿಕೊಳ್ಳುವುದು ಮಾತ್ರವಲ್ಲದೆ ಜವಾಬ್ದಾರಿಯನ್ನು ಅರಿಯಬೇಕಾದುದು ಕೂಡ ಈ ವಿಶೇಷ ದಿನದಲ್ಲಿ ಅವಶ್ಯಕವಾಗಿರುತ್ತದೆ.

ತಾಯಂದಿರನ್ನು ಗೌರವಿಸಲು ತಾಯಂದಿರ ದಿನವನ್ನು ಆಚರಿಸಿದರೂ, ತಂದೆಯನ್ನು ಗೌರವಿಸಲು ತಂದೆಯಂದಿರ ದಿನವನ್ನು ಆಚರಿಸಿದಾಗಲೇ ಇಬ್ಬರೂ 'ಪೋಷಕರ' ಗೃಹಜೀವನವು ಪರಿಪೂರ್ಣತೆಯನ್ನು ಪಡೆದುಕೊಂಡಂತಾಗುತ್ತದೆ.





The Culturepreneur

ಪ್ರಾಮಾಣಿಕವಾಗಿ ವ್ಯಾಪಾರ ಮಾಡಲು, ಕುಟುಂಬವನ್ನು ಪ್ರಾಮಾಣಿಕವಾಗಿ ಪ್ರೀತಿಸಲು ಮತ್ತು ಸಮಾಜದ ಅಭಿವೃದ್ಧಿಗೆ ಸಾಧ್ಯವಾದಷ್ಟು ಕೊಡುಗೆ ನೀಡಲು ನಾನು ನನ್ನ ತಂದೆಯಿಂದ ಸಾಕಷ್ಟು ಕಲಿತಿದ್ದೇನೆ. ಈ ಜವಾಬ್ದಾರಿಯ ಪ್ರಜ್ಞೆಯು ಅವರು ನನಗೆ ನೀಡಿದ ದೊಡ್ಡ ಆಸ್ತಿ ಮತ್ತು ನನ್ನ ಹೆಣ್ಣುಮಕ್ಕಳಿಗೆ ಉತ್ತಮ ತಂದೆಯಾಗಿ ನಾನು ಅದೇ ಜವಾಬ್ದಾರಿಯ ಪ್ರಜ್ಞೆಯೊಂದಿಗೆ ಬದುಕಬೇಕು ಎಂದು ನಾನು ಯಾವಾಗಲೂ ಅರಿತುಕೊಂಡಿದ್ದೇನೆ.

'ವಿಶ್ವ ತಂದೆಯಂದಿರ ದಿನ'ವು ಅವರಿಗೆ ಪ್ರೀತಿಯನ್ನು ತೋರಿಸುವ ಮತ್ತು ಜವಾಬ್ದಾರಿಯನ್ನು ಅನುಭವಿಸುವ ದಿನವಾಗಲಿ. ಕುಟುಂಬದ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿರುವ ಎಲ್ಲ ಅಪ್ಪಂದಿರಿಗೆ ರಾಮರಾಜ್ ಕಾಟನ್ ಕಂಪನಿಯ ಶುಭಾಶಯಗಳು.

ಗುರುಕೃಪೆ

ಬಾಳ್ಗೆ ಭೂಮಂಡಲ –ಬಾಳ್ಗೆ ಸಮೃದ್ಧಿಯೊಂದಿಗೆ !

**ಕೆ.ಆರ್. ನಾಗರಾಜನ್**

ಸಂಸ್ಥಾಪಕರು – ರಾಮ್‌ರಾಜ್ ಕಾಟನ್



# ಅತ್ಯುತ್ತಮ ತಂದೆಯಾಗಿರಿ!

ಮಗ ಕೆಲಸ ಹುಡುಕುವ ತನ್ನ ಪ್ರಯತ್ನದಲ್ಲಿ ಇಂದು ಒಂಬತ್ತನೇ ಸಂದರ್ಶನಕ್ಕೆ ಹಾಜರಾಗಿ ಸುಸ್ತಾಗಿ ಮನೆಗೆ ಮರಳಿದ. ಈ ಬಾರಿಯೂ ಅವನನ್ನು ತಿರಸ್ಕರಿಸಲಾಗಿತ್ತು. ಕಾಲೇಜು ವ್ಯಾಸಂಗ ಮುಗಿಸಿದಂದಿನಿಂದಲೂ ಸೂಕ್ತ ಉದ್ಯೋಗ ಸಿಗದೆ ಆತ ಪರದಾಡುತ್ತಿದ್ದ. ಲಭ್ಯವಾಗುವ ತಾತ್ಕಾಲಿಕ ಉದ್ಯೋಗಗಳು ಕೆಲವೇ ದಿನಗಳವರೆಗೆ ಮಾತ್ರವೇ ಸೀಮಿತವಾಗಿರುತ್ತಿದ್ದವು.

'ಅವನು ಯಾವುದಕ್ಕೂ ಉಪಯೋಗವಿಲ್ಲದವನು. ಅವನ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಿರುವುದೆಲ್ಲ ವ್ಯರ್ಥ ಹಣ. ಅವನು ಯಾವುದೇ ಕೆಲಸ ಮಾಡುವುದಕ್ಕೂ ಲಾಯಕ್ಕಿಲ್ಲ' ಎಂದು ಸಂಬಂಧಿಕರು ವ್ಯಂಗ್ಯವಾಗಿ ಮಾತನಾಡಿಕೊಂಡರು. ಬ್ಯಾಂಕ್‌ನಲ್ಲಿ ತೆಗೆದುಕೊಂಡಿದ್ದ ಶಿಕ್ಷಣದ ಸಾಲದ ಕಂತು ಪಾವತಿಸಲು ಬ್ಯಾಂಕ್ ಅಧಿಕಾರಿಗಳು ಬೇರೆ ಒತ್ತಾಯಿಸ ತೊಡಗಿದರು. ಮನೆಯಲ್ಲಿ ಯಾರಿಗೂ ಗೊತ್ತಿಲ್ಲದಂತೆ ಗುಟ್ಟಾಗಿ ಪ್ರೀತಿಸುತ್ತಿರುವ ಹುಡುಗಿ ಕೂಡ, 'ನಮ್ಮ ಮನೆಯಲ್ಲಿ ನನ್ನ ಮದುವೆಗೆ ಅವಸರ ಮಾಡುತ್ತಿದ್ದಾರೆ. ನೀನು ಯಾವುದೇ ಕೆಲಸಕ್ಕೆ ಹೋಗದಿದ್ದರೆ ನಿನ್ನ ಬಗ್ಗೆ ನಾನು ನಮ್ಮ ಮನೆಯಲ್ಲಿ ಹೇಗೆ ಮಾತನಾಡುವುದು? ಹೀಗೇ ಮುಂದುವರೆದರೆ ಬೇರೆ ದಾರಿಯಿಲ್ಲದೆ ಮನೆಯಲ್ಲಿ ನೋಡುವ ಹುಡುಗನಿಗೆ ಕತ್ತು ನೀಡಬೇಕಾಗುತ್ತದೋ ಏನೋ?' ಎಂದು ಹೆದರಿಸುತ್ತಿದ್ದಾಳೆ.

ಈ ಪರಿಸ್ಥಿತಿಯಲ್ಲಿ ಅವನು ಇನ್ನೊಂದು ಸಂದರ್ಶನದಲ್ಲೂ ನಿರಾಕರಣೆಗೊಳಗಾಗಿ ಬೇಸರದಿಂದ ಮನೆಗೆ ಹಿಂದಿರುಗಿ ಬಂದಿದ್ದ. ಅವನು ನೇರವಾಗಿ ತನ್ನ ತಂದೆಯ ಬಳಿಗೆ ಹೋಗಿ, 'ನನ್ನನ್ನು ಕ್ಷಮಿಸಿ ಅಪ್ಪಾ! ನೀವು ನಿರೀಕ್ಷಿಸಿದಂತೆ ಬದುಕಿನಲ್ಲಿ ಯಶಸ್ವಿಯಾಗಲು ನನ್ನಿಂದ ಸಾಧ್ಯವಾಗುತ್ತಿಲ್ಲ. ನನಗೆ ಯಾವ ಕೆಲಸವೂ ಸಿಗುತ್ತಿಲ್ಲ. ನಾನು ನಿಜವಾಗಿಯೂ ಅಸಹಾಯಕನಾಗಿದ್ದೇನೆ' ಎಂದು ಬೇಸರದಿಂದ ಹೇಳಿಕೊಂಡ.

ಅಪ್ಪ ಅವನನ್ನು ಪಕ್ಕದಲ್ಲಿ ಕೂರಿಸಿಕೊಂಡು ಅವನ ಭುಜವನ್ನು ಸವರಿ ಸಾಂತ್ವನ ಮಾಡಿ, 'ಜೀವನದಲ್ಲಿ ಸುಖವೂ ಇರುತ್ತದೆ, ಕಷ್ಟವೂ ಇರುತ್ತದೆ. ಆದರೆ ಯಾವುದೂ ಶಾಶ್ವತವಲ್ಲ. ಸಂದರ್ಶನದಲ್ಲಿ ನಿನ್ನನ್ನು ತಿರಸ್ಕರಿಸಲು ಕಾರಣಗಳೇನು ಎಂದು ಮೊದಲು ನೋಡು. ತಪ್ಪುಗಳಾಗಿದ್ದಲ್ಲಿ ಅದಕ್ಕಾಗಿ ನಾಚಿಕೆ ಪಡಬೇಕಾಗಿಲ್ಲ, ಆ ತಪ್ಪುಗಳಿಂದ ಪಾಠ ಕಲಿ. ನಿನ್ನ ಸಂತೋಷಕ್ಕೆ ಸದಾ ನೀನೇ ಕಾರಣವಾಗಿರುತ್ತೀಯಾ. ನಿನ್ನ ಕೈಲಾದಷ್ಟು ಪ್ರಯತ್ನ ಮಾಡು. ಇಲ್ಲಿ ನಿನ್ನನ್ನು ತಿರಸ್ಕರಿಸಿದ್ದರೆ ಇದಕ್ಕಿಂತ ಒಳ್ಳೆಯ ಕೆಲಸ ಬೇರೆಡೆ ಸಿಗುತ್ತದೆ ಎಂದು ನಂಬು. ಕಠಿಣ ಪರಿಶ್ರಮ ಮತ್ತು ಆಸಕ್ತಿ ನಿನಗೆ ಉತ್ತಮವಾದ

ಅವಕಾಶಗಳನ್ನು ನೀಡುತ್ತದೆ. ಈ ಜಗತ್ತಿನಲ್ಲಿರುವ ಕೋಟ್ಯಂತರ ಜನರಲ್ಲಿ ನೀನೂ ಒಬ್ಬನಾಗಿರಬಹುದು. ಆದರೆ ನನಗೆ ನೀನು ಮಾತ್ರವೇ ಜಗತ್ತು. ನಾನು ಯಾವಾಗಲೂ ನಿನ್ನೊಂದಿಗಿರುತ್ತೇನೆ' ಎಂದು ಹೇಳಿದರು.

ಮುಂದಿನ ಸಂದರ್ಶನದಲ್ಲೇ ಅವನಿಗೆ ಒಳ್ಳೆಯ ಕೆಲಸ ದೊರೆಯಿತು. ಅವನು ತನ್ನ ತಂದೆಗೆ ಮನಸ್ಸಿನಲ್ಲೇ ಧನ್ಯವಾದ ಅರ್ಪಿಸಿದ.

ಅವರಂತೆ ಒಳ್ಳೆಯ ತಂದೆಯಾಗುವುದು ಸುಲಭವಲ್ಲ. ಮಗ ಅಥವಾ ಮಗಳಿಗೆ ಎಷ್ಟೇ ವಯಸ್ಸಾದರೂ ತಂದೆಯ ಮಾರ್ಗದರ್ಶನ ಎಂದಿಗೂ ಕೊನೆಗೊಳ್ಳುವುದಿಲ್ಲ. ಮಕ್ಕಳ ಅಗತ್ಯಗಳಿಗೆ ಯಾವಾಗಲೂ ಸಂವೇದನಾಶೀಲರಾಗಿ, ಅತ್ಯುತ್ತಮ ಮಾರ್ಗದರ್ಶಕರಾಗಿ ಮತ್ತು ಪರಿಪೂರ್ಣವಾದ ಆಲ್ ಇನ್ ಒನ್ ತಂದೆಯಾಗಲು ಇಲ್ಲಿ ಕೆಲವು ಮಾರ್ಗಗಳಿವೆ :

● ಮಕ್ಕಳೊಂದಿಗೆ ಸಾಕಷ್ಟು ಸಮಯ ಕಳೆಯಿರಿ. ನೀವು ಕಚೇರಿಯಲ್ಲಿ ಬಡ್ತಿಯನ್ನು ಪಡೆದಿದ್ದೀರಿ ಅಥವಾ ಪ್ರಮೋಷನ್ ಪಡೆದಿದ್ದೀರಿ, ನಿಮ್ಮ ಸಂಬಳದಲ್ಲಿ ಏರಿಕೆಯಾಗಿದೆ, ನೀವು ದುಬಾರಿ ಕಾರು ಖರೀದಿಸಿದ್ದೀರಿ, ಸ್ವಂತ ಮನೆಯನ್ನು ಖರೀದಿಸಿದ್ದೀರಿ... ಇವ್ಯಾವುವೂ ಮಕ್ಕಳಿಗೆ ಮುಖ್ಯವಲ್ಲ. ನೀವು ಅವರೊಂದಿಗೆ ಹೇಗೆ ಸಮಯ ಕಳೆಯುತ್ತೀರಿ ಎಂಬುದನ್ನು ಮಾತ್ರವೇ ಅವರು ಗಮನಿಸುತ್ತಾರೆ. ನೀವು ಎಷ್ಟೇ ಬ್ಯುಸಿ ಇದ್ದರೂ ಅವರೊಂದಿಗೆ ಸಮಯ ಕಳೆಯಿರಿ. ದಿನವೂ ಕುಟುಂಬದವರೊಂದಿಗೆ ಕುಳಿತು ಊಟ ಮಾಡಿ. ರಜಾ ದಿನಗಳಲ್ಲಿ ಆಟವಾಡಲು ಅವರನ್ನು ಹೊರಗೆ ಕರೆದೊಯ್ಯಿರಿ. ಕುಟುಂಬಕ್ಕಾಗಿ ಮೀಡಲಿಡುವ ಆ ಸಮಯದಲ್ಲಿ ಬೇರೆ ಯಾವುದೇ ಕೆಲಸವನ್ನು ಮಾಡಬೇಡಿ.

● ನಿಮಗೆ ಇಬ್ಬರು ಮಕ್ಕಳಿದ್ದರೆ ಇಬ್ಬರಿಗೂ ಸಮಾನ ಆದ್ಯತೆ ನೀಡಿ. ಅವರಿಗಾಗಿ ಸಮಯ ಮೀಸಲಿಡಿ. ಪ್ರತಿಯೊಬ್ಬರೊಂದಿಗೂ ನಿಮ್ಮ ಸಂಬಂಧವು ಅನನ್ಯವಾಗಿ ಅರಳಬೇಕು. ಮಗ ಅಥವಾ ಮಗಳು ಇಬ್ಬರಲ್ಲಿ ಯಾರೊಬ್ಬರೂ ತಮಗೆ ತಾರತಮ್ಯ ಮಾಡುತ್ತಿದ್ದಾರೆ ಎಂದು ಭಾವಿಸಬಾರದು. ಕೆಲಸ ಮುಗಿಸಿ ಸುಸ್ತಾಗಿ ಮನೆಗೆ ಬಂದರೂ, ನಿಮಗೆ ಸಿಗುವ ಕೆಲವು ನಿಮಿಷಗಳನ್ನು ಇಬ್ಬರಿಗೂ ಸಮನಾಗಿ ನೀಡಿ.


● ಮಕ್ಕಳ ಹೆಮ್ಮೆಯ ಪ್ರಮುಖ ಕ್ಷಣಗಳಲ್ಲಿ ಅವರೊಂದಿಗೆ ಇರಿ. ನೀವು ಅವರನ್ನು ಉತ್ತರ ಭಾರತ ಪ್ರವಾಸಕ್ಕೆ ಕರೆದೊಯ್ಯುವುದಕ್ಕಿಂತಲೂ ಹೆಚ್ಚು ಮುಖ್ಯವಾದುದು, ಶಾಲೆ ಆರಂಭವಾಗುವ ಮೊದಲ ದಿನ ಅವರನ್ನು ಕರೆದುಕೊಂಡು ಹೋಗಿ ಶಾಲೆಗೆ ಬಿಡುವುದು. ಅವರಿಗೆ ದುಬಾರಿ ಉಡುಗೊರೆಯನ್ನು ಖರೀದಿಸುವುದಕ್ಕಿಂತಲೂ ಮುಖ್ಯವಾದುದು, ಶಾಲೆಯಲ್ಲಿ ನಡೆಯುವ ಕ್ರೀಡೆಗಳಲ್ಲಿ ಅವರು ಭಾಗವಹಿಸುವುದನ್ನು ವೀಕ್ಷಕರಾಗಿ ನೀವು ಹೋಗಿ ನೋಡುವುದು ಮತ್ತು ಅವರು ಭಾಗವಹಿಸುವಾಗ ಅವರನ್ನು ಹುರಿದುಂಬಿಸುವುದು. ಪ್ರವಾಸ ಹೋದದ್ದನ್ನು ಅಥವಾ ನೀವು ಉಡುಗೊರೆ ಖರೀದಿಸಿ ನೀಡಿದ್ದನ್ನು ಕೆಲವು ದಿನಗಳಲ್ಲಿ ಅವರು ಮರೆತು ಬಿಡಬಹುದು. ಆದರೆ, 'ಅಪ್ಪ ಆ ಸಮಯದಲ್ಲಿ ನನ್ನ ಜೊತೆಗಿದ್ದರು' ಎಂಬುದು ಜೀವಮಾನವಿಡೀ ಅವರ ನೆನಪಿನಲ್ಲಿ ಉಳಿಯುತ್ತದೆ.

● ಮಕ್ಕಳಿಗೆ ಜೀವನದಲ್ಲಿ ಕೆಲವು ಮೂಲಭೂತ ಅಭ್ಯಾಸಗಳನ್ನು ಕಲಿಸಿ. ಚಿಕ್ಕ ಮಗುವಾಗಿದ್ದಾಗಲೇ, ಎದ್ದ ಕೂಡಲೇ ಹಲ್ಲುಜ್ಜುವುದನ್ನು ಕಲಿಸಿ. ಹಾಗೆಯೇ ಅವರಿಗೆ ಅಗತ್ಯ ವಿಷಯಗಳನ್ನೂ ಹೇಳಿಕೊಡಿ. ಸ್ವಲ್ಪ ದೊಡ್ಡವರಾದ ಮೇಲೆ ಸೈಕಲ್ ಓಡಿಸುವುದನ್ನು ರೂಢಿಸಿಕೊಳ್ಳಲಿ. ಹದಿಹರೆಯದಲ್ಲಿ ಕ್ಷೌರ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ಕಲಿಸಿ. ಇಂತಹ ಸರಳ ಅಭ್ಯಾಸಗಳಿಂದ ಜೀವನದ ದೊಡ್ಡ ಪಾಠಗಳಿಗೆ ಮಾರ್ಗದರ್ಶನ ನೀಡಿ.

● ಮಕ್ಕಳು ತಪ್ಪು ಮಾಡುವುದರ ಮೂಲಕ ಯಾವುದು ಸರಿ ಎಂಬುದನ್ನು ಕಲಿಯುತ್ತಾರೆ. ಅವರು ತಪ್ಪುಗಳನ್ನು ಮಾಡಿದಾಗ ಅದರಿಂದ ಕಲಿಯಲು ನೀವು ಮಾರ್ಗದರ್ಶನ ನೀಡಿ. ಅವರ ಅಭ್ಯಾಸಗಳಲ್ಲಿ ಏನಾದರೂ ತಪ್ಪುಗಳಿದ್ದರೆ ಅದನ್ನು ಕೈ ಬಿಡುವುದು ಹೇಗೆ ಎಂದು ಅವರೊಂದಿಗೆ ಮಾತನಾಡಿ. ಅವರನ್ನು ಶಿಕ್ಷಿಸುವುದು ಇದಕ್ಕಿರುವ ಪರಿಹಾರವಲ್ಲ. ನಿಮ್ಮ ಟೀಕೆಗಳು ಮೃದುವಾಗಿರಲಿ ಮತ್ತು ಮಕ್ಕಳ ಸಣ್ಣ ಸಾಧನೆಗಳನ್ನೂ ಮನದಾರೆ ಪ್ರಶಂಸಿಸಿ. ಆಗ ಮಾತ್ರ ಅವರ ಆತ್ಮವಿಶ್ವಾಸ ಹೆಚ್ಚುತ್ತದೆ.

● ಮಕ್ಕಳೊಂದಿಗೆ ಸಂವಹನ ಬಹಳ ಮುಖ್ಯ. ಅವರು ತಮ್ಮ ಗೊಂದಲಗಳನ್ನು ಸರಿಪಡಿಸಿಕೊಳ್ಳಲೂ, ತಮ್ಮ ಅನುಮಾನಗಳನ್ನು ಪರಿಹರಿಸಿಕೊಳ್ಳಲೂ ಮೊದಲು ತಮ್ಮ ತಂದೆಯ ಬಳಿಗೆ ಓಡಿ ಬರುತ್ತಾರೆ. ಅವರೊಂದಿಗೆ ಮಾತನಾಡಿ ಅವರ ಸಂದೇಹಗಳನ್ನು ಸ್ಪಷ್ಟಪಡಿಸಿ. ಮಾಮೂಲಿ ಸಮಯದಲ್ಲಿ ಕೂಡ ಅವರು ಸುಮ್ಮನೆ ಏನಾದರೂ ಮಾತನಾಡಿದರೂ 'ಇದೇನು ನಾನ್ಸೆನ್ಸ್' ಎಂದು ಅವರನ್ನು ರೇಗಬೇಡಿ. ಏಕೆಂದರೆ ನಿಮಗೆ ಮುಖ್ಯ ಅನ್ನಿಸದಿರುವ ಯಾವುದೋ ಒಂದು ವಿಷಯ ಅವರಿಗೆ ಹೆಚ್ಚು ಮುಖ್ಯ ಅನ್ನಿಸಬಹುದು. ಏನನ್ನೇ ಆಗಲಿ ಅವರ ಸ್ಥಾನದಲ್ಲಿ ನಿಂತು ನೋಡಿ.

● ಮಕ್ಕಳು ಬೆಳೆದಂತೆ ಅವರೊಂದಿಗೆ ತಂದೆಯ ಮಾತು ಕಡಿಮೆಯಾಗುತ್ತಾ ಹೋಗುತ್ತದೆ. ಔಪಚಾರಿಕ ಮಾತುಗಳನ್ನು ಹೊರತುಪಡಿಸಿ ಬೇರೇನೂ ಇರುವುದಿಲ್ಲ. ನೀವು ಹಾಗಿರಬೇಡಿ. ನಿಮ್ಮ ಮಕ್ಕಳಿಗೆ ಆಸಕ್ತಿಯಿರುವ ಯಾವುದೇ ವಿಷಯಗಳ ಬಗ್ಗೆ ಅವರೊಂದಿಗೆ ಮಾತನಾಡಿ. ಅದು ಕ್ರಿಕೆಟ್, ಸಂಗೀತ ಅಥವಾ ಕಾರು ಹೀಗೆ ಯಾವುದೇ ವಿಷಯವಾಗಿರಬಹುದು. 'ಅಪ್ಪ ನನ್ನೊಂದಿಗೆ ಚೆನ್ನಾಗಿ ಮಾತನಾಡುತ್ತಾರೆ' ಎಂದು ಅವರಿಗೆ ಅನ್ನಿಸಬೇಕು. ಅಷ್ಟು ಸಾಕು. ●



## ತಂದೆಯನ್ನು ಅರ್ಥ ಮಾಡಿಕೊಳ್ಳಲು...

ಬೆಳೆಯುತ್ತಾ ಹೋದಂತೆ ಪ್ರತಿಯೊಂದು ಮಗುವಿನೊಳಗೂ ತನ್ನ ತಂದೆಯ ಬಗೆಗೆ ಇರುವ ಚಿತ್ರಣವೂ ಬದಲಾಗುತ್ತಾ ಹೋಗುತ್ತದೆ. ಜೀವನವು ಪೂರ್ಣ ವೃತ್ತಾಕಾರದಲ್ಲಿ ಸಂಚರಿಸುತ್ತಾ ಬಂದು ಮತ್ತೆ ತಾನು ಪ್ರಾರಂಭವಾದ ಸ್ಥಳದಲ್ಲೇ ನಿಂತಂತಹ ನೆನಪುಗಳು ಅವು!

**4 ನೇ ವಯಸ್ಸಿನಲ್ಲಿ :** ನಾನು ನನ್ನ ತಂದೆಯನ್ನು ಪ್ರೀತಿಸುತ್ತೇನೆ. ಅವರೇ ನನ್ನ ಹೀರೋ.

**7 ನೇ ವಯಸ್ಸಿನಲ್ಲಿ :** ಅಪ್ಪನಿಗೆ ತಿಳಿಯದ ವಿಷಯವೇ ಇಲ್ಲ.

**10 ನೇ ವಯಸ್ಸಿನಲ್ಲಿ :** ತಂದೆ ಒಳ್ಳೆಯವರು. ಆದರೆ, ಅವರು ಆಗಾಗ್ಗೆ ಕೋಪಗೊಳ್ಳುತ್ತಾರೆ.

**14 ನೇ ವಯಸ್ಸಿನಲ್ಲಿ :** ನಾನು ಮಗುವಾಗಿದ್ದಾಗ ತಂದೆ ನನ್ನ ಮೇಲೆ ತುಂಬ ಪ್ರೀತಿ ತೋರುತ್ತಿದ್ದರು. ಆದರೆ ಈಗ ಹಾಗಿಲ್ಲ.

**17 ನೇ ವಯಸ್ಸಿನಲ್ಲಿ :** ಅಪ್ಪ, ಈ ಕಾಲಕ್ಕೆ ತಕ್ಕಂತೆ ಇಲ್ಲ. ಅವರು ಸ್ವಲ್ಪ ಹಳೆಯ ಕಂದಾಚಾ–ರಿಯಂತೆ ವರ್ತಿಸುತ್ತಾರೆ.

**20 ನೇ ವಯಸ್ಸಿನಲ್ಲಿ :** ಈ ಮನುಷ್ಯ ನನ್ನ ಮೇಲೆ ಅಸಹನೆಯಿಂದ ಏಕೆ ಉರಿದು ಬೀಳುತ್ತಾನೆ? ಇವರಿಂದಾಗಿ, ಪ್ರತಿದಿನವೂ ನನಗೆ ನರಕದಂತೆ ಭಾಸವಾಗುತ್ತದೆ.

**23 ನೇ ವಯಸ್ಸಿನಲ್ಲಿ :** ಅಮ್ಮ ಈ ಮನುಷ್ಯನನ್ನು ಅದು ಹೇಗೆ ತಾನೇ ಸಹಿಸಿಕೊಂಡಿದ್ದಾರೋ! ನಾನು ಇವರನ್ನು ಎಂದಿಗೂ ಕ್ಷಮಿಸುವುದಿಲ್ಲ.

**26 ನೇ ವಯಸ್ಸಿನಲ್ಲಿ :** ನಾನು ಏನು ಮಾಡಿದರೂ ಸರಿಯಲ್ಲ ಎಂದು ಹೇಳುತ್ತಾರೆ. ಇವರು ಅದೇಕೆ ಹೀಗಿದ್ದಾರೋ ಏನೋ?!

**30 ನೇ ವಯಸ್ಸಿನಲ್ಲಿ :** ನಾನು ಯಾವುದರಲ್ಲೂ ತಂದೆಯೊಂದಿಗೆ ಹೊಂದಿಕೊಳ್ಳಲು ಸಾಧ್ಯವೇ ಇಲ್ಲ. ಅವರು ಮಾಡುವ ಯಾವುದನ್ನೂ ನಾನು ಇಷ್ಟಪಡುವುದಿಲ್ಲ. ಅವರನ್ನು ಕಂಡರೇನೇ ನನಗೆ ಬೇಸರವಾಗುತ್ತದೆ.

**35 ನೇ ವಯಸ್ಸಿನಲ್ಲಿ :** ನನ್ನ ಮಕ್ಕಳನ್ನು ನಿಭಾಯಿಸಲು ನನ್ನಿಂದ ಸಾಧ್ಯವಾಗುತ್ತಿಲ್ಲ. ನಾನು ಕೂಡ ಮಗುವಾಗಿದ್ದಾಗ ಹೀಗೇ ಹಠ ಮಾಡುತ್ತಿದ್ದೆನೋ ಏನೋ!

**40 ನೇ ವಯಸ್ಸಿನಲ್ಲಿ :** ಅಪ್ಪ ನನ್ನ ಎಲ್ಲಾ ತಪ್ಪುಗಳನ್ನು ಸರಿಪಡಿಸಿ ನನ್ನನ್ನು ತಿದ್ದಿ, ಶಿಸ್ತಾಗಿ ಬೆಳೆಸಿದರು. ನಾನೇ ಅವರಿಗೆ ಹೆಚ್ಚು ತೊಂದರೆ ಕೊಟ್ಟಿರುವುದು.

**45 ನೇ ವಯಸ್ಸಿನಲ್ಲಿ :** ನನ್ನ ಮಕ್ಕಳನ್ನು ನೋಡಿದರೆ ನನಗೆ ಭಯವಾಗುತ್ತಿದೆ. ಅಪ್ಪ ನಮ್ಮನ್ನೆಲ್ಲ ಅದು ಹೇಗೆ ನಿಭಾಯಿಸಿದರೋ ಏನೋ!

**50 ನೇ ವಯಸ್ಸಿನಲ್ಲಿ :** ಅಪ್ಪ ನಮಗಾಗಿ ಎಲ್ಲವನ್ನೂ ಯೋಜಿಸಿದರು ಮತ್ತು ಸರಿಯಾಗಿ ಮಾಡಿದರು. ಕಷ್ಟಗಳನ್ನು ಸಹಿಸಿಕೊಂಡು ನಾವು ಕೇಳಿದ್ದನ್ನೆಲ್ಲಾ ನಮಗೆ ಕೊಟ್ಟರು. ಅವರು ಅದೆಷ್ಟು ಸೌಮ್ಯ ಸ್ವಭಾವದಿಂದ ನಮ್ಮೊಂದಿಗೆ ನಡೆದುಕೊಂಡರೋ ಹಾಗೆ ನಾನು ನನ್ನ ಮಕ್ಕಳೊಂದಿಗೆ ಇರಲು ಸಾಧ್ಯವಾಗುತ್ತಿಲ್ಲ.

**60 ನೇ ವಯಸ್ಸಿನಲ್ಲಿ :** ಮತ್ತೆ ಅಪ್ಪನನ್ನು ಪ್ರೀತಿಸುತ್ತಿದ್ದೇನೆ. ಅವರೇ ನನ್ನ ಹೀರೋ.



## ಬದಲಾಗದ ದೃಶ್ಯ

**ಮಗ ಐದು ವರ್ಷದವನಾಗಿದ್ದಾಗ :** ಅಪ್ಪಾ, ನೀನು ಯಾವಾಗ ಬರುತ್ತೀಯಾ?

**ಅಪ್ಪ :** ನಾನು ಸಂಜೆ 6 ಗಂಟೆಗೆ ಬರುತ್ತೇನೆ, ಹೊರಗೆ ಹೋಗೋಣ.

**ಮಗ :** ನೀವು ಯಾವಾಗಲೂ ಇದನ್ನೇ ಹೇಳುತ್ತೀರಿ. ಆದರೆ ನೀವು ಎಂದೂ ಬೇಗನೆ ಬಂದದ್ದೇ ಇಲ್ಲ!

**ಮಗನಿಗೆ 30 ವರ್ಷ ತುಂಬಿದ ಮೇಲೆ**

**ತಂದೆ :** ನನಗೆ ಮನೆಯಲ್ಲಿ ತುಂಬಾ ಬೋರ್ ಹೊಡೀತಿದೆ ಕಣೋ!

**ಮಗ :** ನಾನು ಸಂಜೆ ಬೇಗ ಬಂದು ಹೊರಗೆ ಕರೆದುಕೊಂಡು ಹೋಗುತ್ತೇನೆ.

**ಅಪ್ಪ :** ನೀನು ಯಾವಾಗ್ಲೂ ಹೀಗೇ ಹೇಳೋದು. ಆದರೆ ಎಂದೂ ಬೇಗ ಮನೆಗೆ ಬಂದದ್ದೇ ಇಲ್ಲ!





## ನನಗೆ ಇಷ್ಟ!

ಒಬ್ಬ ಹುಡುಗ ಮನೆಯಲ್ಲಿ ಒಬ್ಬನೇ ಓದುತ್ತಿದ್ದ. ಕೆಲಸಕ್ಕೆ ಹೋಗಿದ್ದ ಪೋಷಕರು ರಾತ್ರಿ ಮನೆಗೆ ಮರಳಿದರು. ತಾಯಿ ತರಾತುರಿಯಲ್ಲಿ ಅಡುಗೆ ಮಾಡಿದರು. ಎಲ್ಲರೂ ಊಟಕ್ಕೆ ಕುಳಿತರು. ಅಮ್ಮ ತಾನು ಸುಟ್ಟ ರೊಟ್ಟಿಯನ್ನು ತಂದೆಗೆ ಬಡಿಸಿದಳು. ತಂದೆ ಯಾವ ಮಾತೂ ಆಡದೆ ರೊಟ್ಟಿಯನ್ನು ತಿಂದರು. ರೊಟ್ಟಿ ಸುಟ್ಟು ಸೀದು ಹೋಗಿದೆ ಎಂದು ಅಮ್ಮ ಬೇಸರ ವ್ಯಕ್ತಪಡಿಸಿದಳು. 'ಸುಟ್ಟ ಕರಕು ರೊಟ್ಟಿ ನನಗೆ ತುಂಬಾ ಇಷ್ಟ' ಎಂದು ಹೇಳಿ ಅಪ್ಪ ಅದನ್ನು ತಿಂದು ಮುಗಿಸಿದರು.

ರಾತ್ರಿ ಮಲಗುವ ಮುನ್ನ ಮಗ ತಂದೆಯ ಬಳಿ ಏಕಾಂತದಲ್ಲಿ ಕೇಳಿದ: "ಅಪ್ಪಾ, ನಿನಗೆ ಸುಟ್ಟ ಕರಕು ರೊಟ್ಟಿ ನಿಜವಾಗಿಯೂ ಇಷ್ಟವಾಯಿತೇ?' ಎಂದು. ಸ್ವಲ್ಪ ಹೊತ್ತು ಸುಮ್ಮನಿದ್ದ ತಂದೆ, 'ಮಗನೇ! ನಿನ್ನ ತಾಯಿ ದಿನವೂ ಕೆಲಸಕ್ಕೆ ಹೊರಗೆ ಹೋಗಿ ಬರುತ್ತಾಳೆ ಮತ್ತು ಮನೆಯಲ್ಲಿ ನಮಗಾಗಿ ಕಷ್ಟ ಪಡುತ್ತಾಳೆ. ಪಾಪ, ಅವಳು ಇಂದು ತುಂಬಾ ಸುಸ್ತಾಗಿದ್ದಳು ಮತ್ತು ಆತಂಕದಿಂದಿದ್ದಳು. ಅದಕ್ಕಾಗಿಯೇ ರೊಟ್ಟಿ ಸುಟ್ಟು ಕರಕಾಗಿದೆ. ಸುಟ್ಟ ರೊಟ್ಟಿಯು ಯಾರನ್ನೂ ನೋಯಿಸುವುದಿಲ್ಲ. ಆದರೆ ಕಠೋರವಾದ ಮಾತುಗಳು ನೋವುಂಟು ಮಾಡುತ್ತವೆ. ಅಂತಹ ಮಾನಸಿಕ ನೋವನ್ನು ತಪ್ಪಿಸುವುದು ಕುಟುಂಬಕ್ಕೇ ಒಳ್ಳೆಯದು' ಎಂದರು. ಈ ಮಾತುಗಳು ಹುಡುಗನ ಮನಸ್ಸಿನಲ್ಲಿ ಆಳವಾಗಿ ಬೇರೂರಿದವು. ಅವನು ತನ್ನ ಜೀವನದುದ್ದಕ್ಕೂ ಅದನ್ನು ಅನುಸರಿಸಿದನು.



## ಮಾತಿನ ರುಚಿ!



ಅಪ್ಪ ಹಾಲ್‌ನಲ್ಲಿ ಪುಸ್ತಕ ಓದುತ್ತಾ ಕುಳಿತಿದ್ದರೆ, ಮಗ ಎದುರಿನ ಇನ್ನೊಂದು ಸೋಫಾದಲ್ಲಿ ಕುಳಿತು ಫೋನ್‌ನಲ್ಲಿ ಏನನ್ನೋ ನೋಡುತ್ತಿದ್ದ. ಎರಡು ಗಂಟೆ ಕಳೆಯಿತು. ಇಬ್ಬರೂ ಅಕ್ಕಪಕ್ಕದಲ್ಲಿದ್ದರೂ ಒಬ್ಬರಿಗೊಬ್ಬರು ಏನೂ ಮಾತನಾಡಲಿಲ್ಲ ಎಂದು ಮಗನಿಗೆ ಅರ್ಥವಾಯಿತು. ತಕ್ಷಣ ಅಪ್ಪನಿಗೆ 'ಸಾರಿ' ಅಂದ. ಅಪ್ಪ ಮುಗುಳ್ನಗುತ್ತಾ, 'ಮಸಾಲೆ ದೋಸೆ ರುಚಿಯಾಗಿದ್ದರೆ ಅದಕ್ಕೆ ಚಟ್ನಿಯೇ ಬೇಕಾಗಿಲ್ಲ. ಸುಮ್ಮನೆ ಅಕ್ಕಪಕ್ಕ ಕುಳಿತಿರುವುದೇ ಹಿತವಾಗಿದ್ದರೆ ಮಾತಿನ ಅಗತ್ಯವೂ ಇಲ್ಲ' ಎಂದರು.

## ಅಪ್ಪ ಮತ್ತು ಮಕ್ಕಳು

➲ ತುಂಬಾ ಜನ ಮಕ್ಕಳು, ತಮ್ಮ ತಂದೆಯ ಆದಾಯದಲ್ಲೇ ತಾವು 25 ವರ್ಷಗಳ ಕಾಲ ಬದುಕಿದ್ದೇವೆ ಎಂಬುದನ್ನು ಮರೆತುಬಿಡುತ್ತಾರೆ. ಆದರೆ ಕೇವಲ 15 ವರ್ಷಗಳ ಕಾಲ ತಮ್ಮ ಆದಾಯದಲ್ಲಿ ಅವರು ಬದುಕುತ್ತಾರೆ ಎಂಬುದು ಮಾತ್ರ ಅವರಿಗೆ ಚೆನ್ನಾಗಿ ನೆನಪಿರುತ್ತದೆ.

➲ ಒಬ್ಬ ತಂದೆ ಹತ್ತು ಮಕ್ಕಳನ್ನು ಕಾಪಾಡಬಲ್ಲ. ಆದರೆ ಹತ್ತು ಮಕ್ಕಳು ಒಬ್ಬ ತಂದೆಯನ್ನು ಕಾಪಾಡುತ್ತಾರೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ.



## ಇದುವರೆಗೂ ಕೊಡದಿದ್ದುದು!

ಒಬ್ಬ ಮಗ ಬೆಳೆದು ಕೆಲಸಕ್ಕೆ ಹೋದ ಕೂಡಲೇ ತನ್ನ ತಂದೆಯ ಬಳಿ, 'ಅಪ್ಪಾ! ನನಗೆ ಸಿಗುವ ಅರ್ಹತೆಯಿರುವ ಒಂದು ವಿಷಯವನ್ನು, ನೀವು ಇದುವರೆಗೂ ನನಗೆ ಕೊಡದೇ ಹೋದದ್ದು ಉಂಟೇ?' ಎಂದು ಕೇಳಿದ. ಅಪ್ಪ ಮಂದಹಾಸ ಬೀರುತ್ತಾ, 'ಅದನ್ನು ಈಗ ನಾನು ನಿನಗೆ ಕೊಡುತ್ತೇನೆ' ಎಂದು ಹೇಳಿ ಮೃದುವಾಗಿ ಮಗನ ಕೆನ್ನೆಗೆ ಒಂದು ಏಟು ಹೊಡೆದರು. ತನ್ನ ತಪ್ಪುಗಳನ್ನು ಖಂಡಿಸದೆ ಅಪ್ಪ ಇಷ್ಟು ದಿನ ಸಹಿಸಿಕೊಂಡಿದ್ದುದನ್ನು ಮಗ ಅರ್ಥ ಮಾಡಿಕೊಂಡ!





# ಮುದ್ದು ತಂದೆ... ಖಂಡಿಸುವ ತಂದೆ...!

ಶಾಲೆಯಲ್ಲಿ ಶಿಕ್ಷಕರು ಮತ್ತು ಪೋಷಕರ ನಡುವೆ ಸಭೆ ನಡೆಯಿತು. ಅರ್ಧವಾರ್ಷಿಕ ಪರೀಕ್ಷೆ ಮುಗಿದ ನಂತರ ಪೋಷಕರಿಗೆ ರ‍್ಯಾಂಕ್ ಕಾರ್ಡ್ ನೀಡಿ ಶಿಕ್ಷಕರು ಮಕ್ಕಳ ಶೈಕ್ಷಣಿಕ ಸ್ಥಿತಿಯನ್ನು ಅವರಿಗೆ ವಿವರಿಸುತ್ತಾರೆ. ಇಂದು ತಂದೆಯೊಂದಿಗೆ ಶಾಲೆಗೆ ಬಂದಿದ್ದ ಅರುಣ್ ಆತಂಕಗೊಂಡಿದ್ದ. ಸಾಮಾನ್ಯವಾಗಿ ಅವನು ಯಾವಾಗಲೂ ಇಂತಹ ಸಭೆಗಳಿಗೆ ಸಂತೋಷದಿಂದ ಬರುತ್ತಿದ್ದ. ತರಗತಿಯಲ್ಲಿ ಯಾವಾಗಲೂ ಮೊದಲ ರ‍್ಯಾಂಕ್ ತೆಗೆದುಕೊಳ್ಳುವ ಅವನನ್ನು ಅವನ ತರಗತಿಯ ಶಿಕ್ಷಕರು ತಂದೆಯ ಮುಂದೆ ಹೊಗಳುತ್ತಿದ್ದರು. ಅದನ್ನು ಕೇಳಿ ಅವನ ಅಪ್ಪ ಹೆಮ್ಮೆ ಪಡುತ್ತಿದ್ದರು ಮತ್ತು ಶಾಲೆಯಿಂದ ನೇರವಾಗಿ ಐಸ್ ಕ್ರೀಮ್ ಅಂಗಡಿಗೆ ಕರೆದುಕೊಂಡು ಹೋಗಿ ಅವನಿಗಿಷ್ಟವಾದ ಬಟರ್ ಸ್ಕಾಚ್ ಐಸ್ ಕ್ರೀಂ ಕೊಡಿಸುತ್ತಿದ್ದರು.

ಆದರೆ ಪರಿಸ್ಥಿತಿ ಇಂದು ಭಿನ್ನವಾಗಿತ್ತು. 12ನೇ ತರಗತಿಯಲ್ಲಿ ಓದುತ್ತಿದ್ದ ಅವನು ಏಕಕಾಲದಲ್ಲಿ ತನ್ನ ತರಗತಿಯ ಪರೀಕ್ಷೆಗಳಿಗೂ, ಐ.ಐ.ಟಿ.ಯ ಪ್ರವೇಶ ಪರೀಕ್ಷೆಗೂ ಒಟ್ಟಿಗೇ ಅಧ್ಯಯನ ಮಾಡಿದ್ದ. ಐಐಟಿ ಪ್ರವೇಶಾವಕಾಶಕ್ಕಾಗಿ ಅವನು ಪ್ರತಿದಿನ ಗಂಟೆಗಟ್ಟಲೆ ಅಧ್ಯಯನ ಮಾಡಿದ್ದ. ಅಲ್ಲಿ ಮಾದರಿ ಪರೀಕ್ಷೆಗಳನ್ನು ಬರೆಯಬೇಕಾಗಿದ್ದುದರಿಂದ ತರಗತಿಯ ಪರೀಕ್ಷೆಗಳ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಲು ಅವನಿಂದ ಸಾಧ್ಯವಾಗಲಿಲ್ಲ. ಸಾಮಾನ್ಯವಾಗಿ ಪ್ರತಿ ಸಲ ತರಗತಿಯಲ್ಲಿ ಮೊದಲ ರ‍್ಯಾಂಕ್ ಬರುತ್ತಿದ್ದ ಈತ ಈ ಬಾರಿ 20ನೇ ರ‍್ಯಾಂಕ್ ಪಡೆದಿದ್ದ.

ತಂದೆಗೆ ತಾನು ಎದುರಿಸುತ್ತಿರುವ ಬಿಕ್ಕಟ್ಟುಗಳು ಮತ್ತು ತನ್ನ ಸಮಸ್ಯೆಗಳು ತಿಳಿದಿರುವ ಸಾಧ್ಯತೆಯಿಲ್ಲ. ಸೇಲ್ಸ್‌ಗೆ ಸಂಬಂಧಿಸಿದಂತೆ ಕೆಲಸ ಮಾಡುವ ಅಪ್ಪ ವಾರವಿಡೀ ಎಲ್ಲೆಲ್ಲೋ ಓಡಾಡುತ್ತಿರುತ್ತಾರೆ. ರಾತ್ರಿ ಮನೆಗೆ ತಡವಾಗಿ ಬರುತ್ತಾರೆ ಮತ್ತು ಬೆಳಿಗ್ಗೆ ತಡವಾಗಿ ಏಳುತ್ತಾರೆ. ಅವರು ಮನೆಗೆ ಬರುವಷ್ಟರಲ್ಲಿ ಅರುಣ್ ನಿದ್ದೆಗೆ ಜಾರಿರುತ್ತಿದ್ದ. ಅವನು ರಾತ್ರಿ ಒಂಬತ್ತು ಗಂಟೆಗೆ ಮಲಗಿ ಬೆಳಗಿನ ಜಾವ ನಾಲ್ಕು ಗಂಟೆಗೆಲ್ಲ ಎದ್ದು ಓದುತ್ತಿದ್ದ. ಹಾಗೆ ಓದುವುದು ಅವನಿಗೆ ಅಭ್ಯಾಸವಾಗಿತ್ತು. ಅವನು ಹೀಗೆ ಓದುತ್ತಿರುವುದು ಕೂಡ ಅವರಿಗೆ ತಿಳಿದಿರುವ ಸಾಧ್ಯತೆಯಿಲ್ಲ. ರ‍್ಯಾಂಕ್ ಕಾರ್ಡ್ ಕೈಗೆ ಬಂದಾಗ ಅಪ್ಪ ಏನು ಹೇಳುತ್ತಾರೋ ಎಂಬ ಭಯ ಅರುಣನಿಗೆ.

ಅರುಣ್ ಮತ್ತು ಅವನ ತಂದೆಯನ್ನು ನೋಡಿದ ಕ್ಲಾಸ್ ಟೀಚರ್ ಕುರ್ಚಿಯಿಂದ ಎದ್ದರು. ‘ಅರುಣ್ ಮೊದಲಿನಂತಿಲ್ಲ, ಓದಿನಲ್ಲಿ ಆಸಕ್ತಿ ಕಳೆದುಕೊಂಡಿದ್ದಾನೆ. ಯಾವಾಗಲೂ ಫಸ್ಟ್ ರ‍್ಯಾಂಕ್ ತೆಗೆದುಕೊಳ್ಳುತ್ತಿದ್ದ ಹುಡುಗ, ಈಗ 20ನೇ ರ‍್ಯಾಂಕ್ ಬಂದಿದ್ದಾನೆ. ಗಣಿತದಲ್ಲಿ ತುಂಬಾ ಹುಡುಗರು ಸೆಂಟಮ್ ಪಡೆದಿದ್ದಾರೆ. ಆದರೆ ಇವನು ಮಾತ್ರ 60 ಅಂಕ ಪಡೆದಿದ್ದಾನೆ. ನನಗೆ ಚಿಂತೆಯಾಗಿದೆ. ಇವನು ಹೀಗೆ ಬದಲಾಗುತ್ತಾನೆಂದು ಶಾಲೆಯಲ್ಲಿ ಯಾರೂ ನಿರೀಕ್ಷಿಸಿರಲಿಲ್ಲ. ಮೂರು ತಿಂಗಳಲ್ಲಿ ಪಬ್ಲಿಕ್ ಎಕ್ಸಾಮ್ ಬೇರೆ ಇದೆ. ಫೇಲಾದರೆ ಶಾಲೆಗೆ ಕೆಟ್ಟ ಹೆಸರು ಬೇರೆ ಬರುತ್ತದೆ’ ಎಂದು ಅವನ ತಂದೆಯ ಬಳಿ ಹೇಳಿದರು.

ಅಲ್ಲಿದ್ದ ಹಲವು ಪಾಲಕರು ಅರುಣ್‌ನ ಕಡೆ ಆತಂಕದಿಂದ ನೋಡಿ–

ದರು. ಅಪ್ಪ ಅರುಣನ ಮುಖ ನೋಡಿದರು. ಅವನ ತಲೆ ತಗ್ಗಿಸಿ ನಿಂತುಕೊಂಡ. ಶಿಕ್ಷಕರು ಮತ್ತು ಸಹ ವಿದ್ಯಾರ್ಥಿಗಳ ಪೋಷಕರ ಮುಂದೆ ತಂದೆ ತನ್ನನ್ನು ಬೈಯ್ಯಬಹುದು ಎಂದು ಅವನು ಹೆದರಿದ. ಆದರೆ ಅಪ್ಪ ಅವನನ್ನು ಮೃದುವಾಗಿ ಅಪ್ಪಿಕೊಂಡರು. 'ಚಿಂತೆ ಮಾಡಬೇಡಿ ಶಿಕ್ಷಕರೇ, ಅವನು ಕಷ್ಟಪಟ್ಟು ಓದುತ್ತಿದ್ದಾನೆ, ಅದು ನನಗೆ ತಿಳಿದಿದೆ. ಇವನು ಖಂಡಿತವಾಗಿಯೂ ಈ ಶಾಲೆಗೆ ಕೀರ್ತಿ ತರುತ್ತಾನೆ' ಎಂದು ಶಿಕ್ಷಕರಿಗೆ ಹೇಳಿದರು.

ಇಂತಹ ಪ್ರತಿಕ್ರಿಯೆಯನ್ನು ನಿರೀಕ್ಷಿಸದಿದ್ದ ಶಿಕ್ಷಕರಿಗೆ ನಿರಾಶೆಯಾಯಿತು. ಸದ್ದಿಲ್ಲದೆ ಅರುಣನ ರ್‍ಯಾಂಕ್ ಕಾರ್ಡ್ ಅನ್ನು ಅವರ ಕೈಗೆ ಕೊಟ್ಟರು. ಅಪ್ಪ ಅರುಣನ ಭುಜದ ಮೇಲೆ ಕೈ ಹಾಕಿ, 'ಬಟರ್ ಸ್ಕಾಚ್ ಐಸ್ ಕ್ರೀಂ ತಿನ್ನೋಣ ಬಾ!' ಎಂದು ಹೇಳಿ ಅಂಗಡಿಗೆ ಕರೆದು–ಕೊಂಡು ಹೋದರು. ಅವನ ಓದಿನ ಬಗ್ಗೆ ಏನನ್ನೂ ಕೇಳಲಿಲ್ಲ. ಐಸ್ ಕ್ರೀಂ ತಿನ್ನುವಾಗ ಅರುಣ್‌ನ ಕಣ್ಣಲ್ಲಿ ಒಂದು ಹನಿ ಕಣ್ಣೀರು ಇಣುಕಿತು!

ಅವನು ಮೊದಲಿಗಿಂತ ಹೆಚ್ಚು ಶ್ರಮ ಪಟ್ಟು ಓದಿದ. ಇದಾದ ಕೆಲವೇ ತಿಂಗಳುಗಳಲ್ಲಿ ನಡೆದ ಪಬ್ಲಿಕ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾದ. ಅದಕ್ಕಿಂತ ಮುಖ್ಯವಾಗಿ, ಅವನು ಐಐಟಿ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯನ್ನು ಪಡೆದಿದ್ದ. ಅವನು ಭಾರತದ ಪ್ರತಿಷ್ಠಿತ ಐಐಟಿ ಸಂಸ್ಥೆಯಲ್ಲಿ ಓದುವ ಅವಕಾಶವನ್ನು ಗಿಟ್ಟಿಸಿದ. 'ನನಗೆ ಬಟರ್‌ಸ್ಕಾಚ್ ಐಸ್ ಕ್ರೀಮ್ ಕೊಡಿಸಿ ಅಪ್ಪಾ!' ಎಂದು ಅವನು ತನ್ನ ತಂದೆಯನ್ನು ಅಂಗಡಿಗೆ ಕರೆದೊಯ್ದ. ಈ ಬಾರಿ ಐಸ್ ಕ್ರೀಂ ತಿನ್ನುವಾಗ ಅಪ್ಪನ ಕಣ್ಣುಗಳಿಂದ ಸಂತೋಷದ ಹನಿಯೊಂದು ಇಣುಕಿತು.

ಅನೇಕ ತಂದೆಯಂದಿರು ತಮ್ಮ ಮಕ್ಕಳ ಜೊತೆ ತಾವು ಖಡಾಖಂಡಿತವಾಗಿ ನಡೆದುಕೊಂಡರೆ ಮಾತ್ರವೇ ಅವರು ಶಿಸ್ತುಬದ್ಧರಾಗಿರುತ್ತಾರೆ ಎಂದು ಭಾವಿಸುತ್ತಾರೆ. 'ದಂಡಂ ದಶ ಗುಣಂ ಭವೇತ್' ಎಂಬ ಗಾದೆ ಮಾತನ್ನು ಹೇಳುವ ಮೂಲಕ, ಅವರು ಇಂತಹ ಶಿಕ್ಷೆಯನ್ನು ಸಮರ್ಥಿಸಿ ಕೊಳ್ಳುತ್ತಾರೆ. 'ಮುದ್ದು ಮಾಡಿ ಮಕ್ಕಳನ್ನು ಹಾಳು ಮಾಡಬೇಡಿ' ಎಂದು ಹಲವರು ವಿವಿಧ ಸಲಹೆ ನೀಡುತ್ತಾರೆ. ಮುದ್ದು ಮತ್ತು ಶಿಸ್ತು ಎರಡನ್ನೂ ಹೇಗೆ ಮಕ್ಕಳಿಗೆ ನೀಡುವುದು?



- ಶಿಸ್ತು ಎಂದರೆ ಕೇವಲ ಶಿಕ್ಷೆಯಲ್ಲ. ಮಕ್ಕಳು ತಪ್ಪು ಮಾಡಿದಾಗ ಶಿಕ್ಷಿಸುವಂತೆಯೇ, ಒಳ್ಳೆಯದನ್ನು ಮಾಡಿದಾಗ ಅವರನ್ನು ಪುರಸ್ಕರಿಸಿ ಪ್ರಶಂಸಿಸಬೇಕು. ಒಮ್ಮೆ ಶಿಕ್ಷಿಸಿದರೆ, ಅದರ ನಂತರ ಅವರಲ್ಲಿ ಕನಿಷ್ಠ ಮೂರು ಒಳ್ಳೆಯ ವಿಷಯಗಳನ್ನು ಹುಡುಕಿ ಮತ್ತು ಅದಕ್ಕಾಗಿ ಅವರನ್ನು ಹೊಗಳಿ. ಆಗಾಗ್ಗೆ ಹೊಗಳಿದಾಗ ಅವರು ಹೆಚ್ಚು ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ ಮತ್ತು ಕಡಿಮೆ ತಪ್ಪುಗಳನ್ನು ಮಾಡುತ್ತಾರೆ.

- ಒಳ್ಳೆಯದನ್ನು ಮಾಡಿದರೆ ಉಡುಗೊರೆಗಳನ್ನು ನೀಡುವುದು ಸರಿ. ಆದರೆ ಮಕ್ಕಳು ಏನಾದರೂ ಒಳ್ಳೆಯ ಕೆಲಸ ಮಾಡಿದರೆ ಮಾತ್ರ ಆಟಿಕೆಗಳು, ಚಾಕಲೇಟ್‌ಗಳು, ಡ್ರೆಸ್‌ಗಳು ಇತ್ಯಾದಿಗಳು ದೊರಕುತ್ತವೆ ಎಂಬ ವಾತಾವರಣವನ್ನು ಸೃಷ್ಟಿಸಬೇಡಿ. ಸ್ವಾಭಾವಿಕವಾಗಿಯೇ ಅವರಿಗೆ ಬೇಕಾದುದನ್ನು ಖರೀದಿಸಿ. ಚೆನ್ನಾಗಿ ಮಾಡಿದಾಗ ಹೆಚ್ಚುವರಿಯಾಗಿ ಒಂದನ್ನು ಖರೀದಿಸಿ, ಅಷ್ಟು ಸಾಕು. ಆದರೆ ಮನೆಗೆಲಸದಲ್ಲಿ ಸಹಾಯ ಮಾಡುವುದು, ಆಟವಾಡಿದ ನಂತರ ಅವರ ಆಟಿಕೆಗಳನ್ನು ತೆಗೆದಿಟ್ಟುಕೊಳ್ಳುವುದು ಇತ್ಯಾದಿ ಸಾಮಾನ್ಯ ಚಟುವಟಿಕೆಗಳಿಗೆಲ್ಲ ಅವರಿಗೆ ಉಡುಗೊರೆ ನೀಡುವುದನ್ನು ರೂಢಿ ಮಾಡಿಸಬೇಡಿ. ಹಾಗೆ ಮಾಡುವುದರಿಂದ ಅವರು ನಿಮಗೆ ಸಹಾಯ ಮಾಡುತ್ತಿದ್ದಾರೆ ಎಂಬ ಭಾವನೆ ಅವರಲ್ಲಿ ಮೂಡುತ್ತದೆ. ಅದು ಅವರ ಕೆಲಸ ಎಂಬುದನ್ನು ಅವರಿಗೆ ಮನಗಾಣಿಸಿ.

- ತಪ್ಪು ಮಾಡಿದಾಗ ಶಿಕ್ಷಿಸಿ. ಆದರೆ ಅದು, ಕ್ರೂರವಾಗಿ ಹೊಡೆಯುವುದು, ಒದೆಯುವಂತಹ ಹಿಂಸಾತ್ಮಕ ಶಿಕ್ಷೆಯಾಗದಿರಲಿ. ಇದು ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಅವರಿಗೆ ನೋವುಂಟು ಮಾಡಬಹುದು. ಇದರಿಂದ ಮಕ್ಕಳು ನಿಮ್ಮಿಂದ ದೂರವಾಗುತ್ತಾರೆ. ನಿಮ್ಮ ಮೇಲಿನ ಗೌರವವೂ ಕಡಿಮೆಯಾಗುತ್ತದೆ.

- ಮಕ್ಕಳು ಮಾಡುವ ಕೆಲವು ಕೆಲಸಗಳಿಂದ ನಿಮಗೆ ಕೋಪ ಬಂದರೂ ಕಟುವಾದ ಮಾತುಗಳಿಂದ ಅವರನ್ನು ಬೈಯಬೇಡಿ. ನೀವು ತಾಳ್ಮೆ ಕಳೆದುಕೊಂಡು ಧ್ವನಿ ಎತ್ತಿದರೆ ಅವರು ಹೆದರುತ್ತಾರೆ. ಅದರ ಬದಲಿಗೆ, 'ನೀನು ತಪ್ಪು ಮಾಡಿದ್ದರಿಂದ ಇವತ್ತು ನಿನ್ನ ಜೊತೆ ಮಾತನಾಡುವುದಿಲ್ಲ', 'ಇವತ್ತು ನೀನು ಹೊರಗೆ ಹೋಗಿ ಆಟವಾಡಲು ಬಿಡುವುದಿಲ್ಲ' ಎಂಬ ಸೌಮ್ಯವಾದ ಶಿಕ್ಷೆಯ ಮೂಲಕ ಅವರ ತಪ್ಪುಗಳನ್ನು ಅವರಿಗೆ ಅರ್ಥ ಮಾಡಿಸಿ.

- ಶಿಕ್ಷೆ ನೀಡುವುದಾಗಲೀ, ಉಡುಗೊರೆಗಳನ್ನು ನೀಡುವುದನ್ನಾಲೀ ನಿರಂತರವಾಗಿಯೂ ನಿಯಮಿತವಾಗಿಯೂ ಮಾಡಿ. ನೀವು ಕಾರ್ಯನಿರತರಾಗಿರುವ ಕಾರಣ ಕೆಲವೊಮ್ಮೆ ಅದನ್ನು ಕಡೆಗಣಿಸುವ ಅಥವಾ ನಿರ್ಲಕ್ಷಿಸುವುದನ್ನು ಮಾಡಬೇಡಿ. ಒಳ್ಳೆಯದನ್ನು ಮಾಡಿದರೆ ತಂದೆ ಹೊಗಳುತ್ತಾರೆ, ತಪ್ಪು ಮಾಡಿದರೆ ಛೀಮಾರಿ ಹಾಕುತ್ತಾರೆ ಎಂಬ ಭಾವನೆ ಸದಾ ಅವರಲ್ಲಿರಬೇಕು. ಅದು ಒಳ್ಳೆಯದನ್ನು ಮಾಡಲು ಮತ್ತು ತಪ್ಪುಗಳನ್ನು ತಪ್ಪಿಸಲು ಅವರನ್ನು ಪ್ರೇರೇಪಿಸುತ್ತದೆ. ●

## ಅವರೇ ಮೊದಲ ಹೀರೋ!

ಪ್ರತಿ ಮಗುವಿನ ಮೊದಲ ಹೀರೋ ಅದರ ತಂದೆಯೇ ಆಗಿರುತ್ತಾರೆ. ಅನೇಕ ತಂದೆಯಂದಿರು ಹೇಗೆ ಬದುಕಬೇಕು ಎಂಬುದಕ್ಕೆ ಉದಾಹರಣೆಯಾಗಿರುತ್ತಾರೆ ಮತ್ತು ಕೆಲವು ತಂದೆಯಂದಿರು ಹೇಗೆ ಬದುಕಬಾರದು ಎಂಬುದಕ್ಕೆ ಉದಾಹರಣೆಯಾಗಿರುತ್ತಾರೆ. 'ನನ್ನನ್ನು ಹಿಂಬಾಲಿಸುವ ಆ ಚಿಕ್ಕ ಹುಡುಗ' ಎಂಬ ಒಂದು ಕವಿತೆ, ತಂದೆ ಹೇಗೆ ರೋಲ್ ಮಾಡೆಲ್ ಆಗುತ್ತಾರೆ ಎಂಬುದನ್ನು ಮನವರಿಕೆ ಮಾಡಿಸುತ್ತದೆ,.

'ನಾನು ಜಾಗರೂಕರಾಗಿರಲು ಬಯಸುತ್ತೇನೆ... ಒಬ್ಬ ಹುಡುಗ ನನ್ನನ್ನು ಹಿಂಬಾಲಿಸುತ್ತಿದ್ದಾನೆ. ತಪ್ಪು ಮಾಡುವ ಧೈರ್ಯ ನನಗಿಲ್ಲ. ಅವನು ಅದೇ ದಾರಿಯಲ್ಲಿ ಸಾಗುತ್ತಾನೆ ಎಂಬ ಭಯದಿಂದ. ನಾನು ಅವನ ನೋಟದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ನಾನು ಏನು ಮಾಡುತ್ತೇನೋ ಅವನೂ ಅದನ್ನೇ ಮಾಡಲು ಪ್ರಯತ್ನಿಸುತ್ತಾನೆ. ನನ್ನಂತೆಯೇ ಆಗುತ್ತೇನೆ ಎಂದು ಹೇಳುತ್ತಿದ್ದಾನೆ ಆ ಹುಡುಗ. ಅವನ ಭವಿಷ್ಯಕ್ಕಾಗಿ ನಾನೀಗ ಒಂದು ಮಾರ್ಗವನ್ನು ರಚಿಸುತ್ತಿದ್ದೇನೆ, ನನ್ನನ್ನು ಹಿಂಬಾಲಿಸುವ ಆ ಹುಡುಗನಿಗಾಗಿ!' ಎಂಬುದು ಆ ಕವಿತೆಯ ಅರ್ಥ.

ತನ್ನ ಮಗನನ್ನು ಸಾಧಕನಾಗುವಂತೆ ಪ್ರಚೋದಿಸುವ ತಂದೆಗಿಂತಲೂ, ಬದುಕಿನಲ್ಲಿ ಎದುರಾಗುವ ಪ್ರತಿ ಸವಾಲನ್ನೂ ಸಾಧನೆಯಾಗಿ ಪರಿವರ್ತಿಸಿ ತೋರಿಸುವ ತಂದೆಯೇ ಆದರ್ಶ ತಂದೆಯಾಗುತ್ತಾನೆ.



## ಸಣ್ಣ ಸಣ್ಣ ತ್ಯಾಗಗಳು !

ದೊಡ್ಡ ದೊಡ್ಡ ವಿಷಯಗಳನ್ನು ಬಿಟ್ಟುಕೊಡುವುದನ್ನೇ ತ್ಯಾಗ ಎಂದು ಭಾವಿಸಬೇಕಾಗಿಲ್ಲ. ಅಪ್ಪ ಮಾಡುವ ನೂರಾರು ಸಣ್ಣ ಸಣ್ಣ ತ್ಯಾಗಗಳಲ್ಲಿ ಯಾವುದರ ಮೌಲ್ಯವೂ ಕಡಿಮೆಯಲ್ಲ.

❖ ಮನೆಗೆ ಹಿಂದಿರುಗಿದ ಕೂಡಲೇ ಅಪ್ಪ ಕೇಳುವ ಮೊದಲ ಪ್ರಶ್ನೆ: 'ಮಕ್ಕಳು ಊಟ ಮಾಡಿದರಾ?' ಎಂಬುದೇ. ಅದು ಮಕ್ಕಳ ಬಗ್ಗೆ ಅವರಿಗಿರುವ ಕಾಳಜಿ! ತಾಯಿ ಮಕ್ಕಳಿಗೆ ಇಷ್ಟವಾದ ಅಡುಗೆ ಮಾಡಿದ್ದಾಗ ಮಕ್ಕಳು ಹೆಚ್ಚಾಗಿ ತಿನ್ನಲಿ ಎಂದು ಭಾವಿಸಿ ಅಪ್ಪ ಸ್ವಲ್ಪವೇ ತೆಗೆದುಕೊಳ್ಳುತ್ತಾರೆ.

❖ ತನಗೆ ಹುಷಾರಿಲ್ಲದಿದ್ದರೂ ಅಪ್ಪ ಕಚೇರಿಗೆ ಹೋಗುತ್ತಾರೆ. ಆದರೆ ಮಕ್ಕಳಿಗೆ ಏನಾದರೂ ಆದರೆ ಮಾತ್ರ ಗಾಬರಿಗೊಂಡು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ.

❖ ಅಪ್ಪನ ಬಟ್ಟೆಗಳು ಬಣ್ಣ ಕಳೆದುಕೊಂಡಿದ್ದರೂ ಅವರು ಚಿಂತಿಸುವುದಿಲ್ಲ. ಆದರೆ ತನ್ನ ಮಕ್ಕಳಿಗೆ ಹೊಸ ಬಟ್ಟೆಗಳನ್ನು ಖರೀದಿಸಲು ಮರೆಯುವುದಿಲ್ಲ.

❖ ತನ್ನ ಬಳಿ ಹಣವಿಲ್ಲದಿದ್ದರೂ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ತಂದೆ ಬಯಸುತ್ತಾನೆ. ಮಕ್ಕಳ ಶಿಕ್ಷಣವೇ ಅವರ ಜೀವನದ ಮಹತ್ವಾಕಾಂಕ್ಷೆಯಾಗಿರುತ್ತದೆ.





## ಸಿಗದಿದ್ದುದನ್ನು ನೀಡಿದರು!

ಅವರಿಗೆ ಇಂಗ್ಲಿಷ್ ಓದಲು ಬರುವುದಿಲ್ಲ. ಆದರೂ ಬದುಕಿನಲ್ಲಿ ಉತ್ತಮ ಅವಕಾಶಗಳು ಸಿಗಲಿ ಎಂದು ಮಗನನ್ನು ಆಂಗ್ಲ ಮಾಧ್ಯಮ ಶಾಲೆಗೆ ಸೇರಿಸಿದರು. ತನ್ನ ಮಕ್ಕಳು ಎಸಿ ರೂಮಿನಲ್ಲಿ ಮಲಗಬೇಕು ಎಂಬುದಕ್ಕಾಗಿ ತಾನು ದಿನವಿಡೀ ಬಿಸಿಲಿನಲ್ಲಿ ಕಷ್ಟಪಡುತ್ತಿದ್ದರು. ಬಟನ್‌ಗಳ ಮೇಲೆ ಅಕ್ಷರಗಳು ಅಳಿಸಿ ಹೋಗಿರುವ ಸಾಮಾನ್ಯ ಹಳೆಯ ಸೆಲ್ ಫೋನ್ ಅನ್ನು ಇಟ್ಟುಕೊಂಡಿರುವ ಅವರು ತಮ್ಮ ಮಗ ಕಾಲೇಜಿಗೆ ಸೇರಿದ ಮೊದಲ ದಿನಗಳಲ್ಲಿ ಅವನಿಗಾಗಿ ಖರೀದಿಸಿದ್ದು ಇತ್ತೀಚಿನ ಹೊಚ್ಚ ಹೊಸ ಮಾದರಿಯ ಸ್ಮಾರ್ಟ್ ಫೋನನ್ನು. ತನ್ನ ಸ್ವಂತ ರಾಜ್ಯದ ಗಡಿಯನ್ನೂ ದಾಟದ ಅವರು ತನ್ನ ಮಕ್ಕಳನ್ನು ವಿದೇಶಕ್ಕೆ ಕಳುಹಿಸಿ ಓದಿಸಿದರು. ತನಗೆ ಏನೂ ಸಿಗದಿದ್ದರೂ ತನ್ನ ಮಕ್ಕಳಿಗೆ ಎಲ್ಲವೂ ಸಿಗುವಂತೆ ನೋಡಿಕೊಂಡರು. ಅಪ್ಪಂದಿರು ಯಾವಾಗಲೂ ಹೀಗೆಯೇ ಇರುವುದು!



## ಅಪ್ಪನ ಸಲಹೆಗಳು

❖ 'ಅಪ್ಪಾ! ಈ ಸಂದರ್ಶನದಲ್ಲೂ ಆಯ್ಕೆಯಾಗುವುದಿಲ್ಲವೋ ಏನೋ ಎಂದು ಭಯವಾಗುತ್ತಿದೆ. ಓದುವುದು ಕಷ್ಟವಾಗುತ್ತಿದೆ. ಎಲ್ಲವನ್ನೂ ಕಳೆದುಕೊಂಡು ಬಿಟ್ಟೆ ಎನ್ನಿಸುತ್ತಿದೆ' ಎಂದು ಮಗ ದುಃಖದಿಂದ ಹೇಳಿದ. 'ಅಂದರೆ, ನೀನು ಒಂದು ಖಾಲಿ ಪಾತ್ರೆಯಂತಿರುವೆಯೇನು?' ಎಂದು ತಂದೆ ಕೇಳಿದರು. 'ಆ ಪಾತ್ರೆ ಖಾಲಿಯಾಗಿದೆ ಮತ್ತು ಕಪ್ಪಾಗಿದೆ' ಎಂದು ಮಗ ಹೇಳಿದ. 'ಹಾಗಾದರೆ ನೀನು ಅದರಲ್ಲಿ ನಿನಗಿಷ್ಟವಾದ ಏನನ್ನು ಬೇಕಾದರೂ ತುಂಬಬಹುದು. ಆದ್ದರಿಂದ ಅದರಲ್ಲಿ ಜ್ಞಾನ ಮತ್ತು ಬೆಳಕನ್ನು ತುಂಬು' ಎಂದು ಅಪ್ಪ ಹೇಳಿದರು. ಮಗನಿಗೆ ತಂದೆ ಏನು ಹೇಳುತ್ತಿದ್ದಾರೆ ಎಂಬುದು ಅರ್ಥವಾಯಿತು. ಶ್ರದ್ಧೆ ಮತ್ತು ಉತ್ಸಾಹದಿಂದ ಓದಿ ಪರೀಕ್ಷೆಯಲ್ಲಿ ತೇರ್ಗಡೆಯಾದ.

❖ ಮುಂದಿನ ಸಲ ಇನ್ನೊಂದು ಗೊಂದಲದೊಂದಿಗೆ ಮಗ ಅಪ್ಪನ ಬಳಿಗೆ ಬಂದ. "ನನಗೆ ಈಗ ಎರಡು ಕೆಲಸ ಸಿಕ್ಕಿದೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಗೊಂದಲದಲ್ಲಿ ಇದ್ದೇನೆ" ಎಂದು ಅವನು ಹೇಳಿದ. "ಎರಡಕ್ಕೂ ಏನು ವ್ಯತ್ಯಾಸವಿದೆ ಹೇಳು" ಎಂದು ತಂದೆ ಕೇಳಿದರು. ಮೊದಲ ಕೆಲಸದಲ್ಲಿ ಕೆಲಸ ಜಾಸ್ತಿ ಇರುತ್ತದೆ ಮತ್ತು ಅಲ್ಲಿ ತುಂಬಾ ಜನ ಅನುಭವಿಗಳು ಇರುತ್ತಾರೆ. ಹಾಗಾಗಿ ಅಲ್ಲಿ ಪ್ರಮೋಷನ್ ದೊರಕುವುದು ತಡವಾಗುತ್ತದೆ. ಎರಡನೇ ಕೆಲಸದಲ್ಲಿ ಕೆಲಸ ಕಡಿಮೆ. ಕೆಲಸ ಗೊತ್ತಿರುವವರು ಕೂಡ ಅಲ್ಲಿ ಕಡಿಮೆ. ಆದ್ದರಿಂದ ಅಲ್ಲಿ ಬೇಗ ಬಡ್ತಿ ಸಿಗುತ್ತದೆ' ಎಂದು ಮಗ ಹೇಳಿದ. 'ನೀನು ಮೊದಲು ಕೆಲಸ ಕಲಿತುಕೊಳ್ಳಬೇಕು ಎಂದು ಬಯಸು. ಕೆಲಸ ಮಾಡುವುದು ಗೊತ್ತಿಲ್ಲದ ಜನರ ನಡುವೆ ಇರುವುದರಿಂದ ನೀನು ಸೋಮಾರಿಯಾಗುವ ಸಾಧ್ಯತೆ ಇರುತ್ತದೆ. ಯಾವಾಗಲೂ ಅನುಭವಿಗಳ ನಡುವೆ ಇರುವುದನ್ನು ರೂಡಿಸಿಕೋ. ಸ್ಪರ್ಧೆ ಇದ್ದಲ್ಲಿ ಹೆಚ್ಚು ಕಲಿಯಬಹುದು. ಅದು ನಿನ್ನನ್ನು ಬೆಳೆಸುತ್ತದೆ' ಎಂದು ತಂದೆ ಹೇಳಿದರು.

## ಅಪ್ಪ ಹೇಳಿದ ಸುಳ್ಳುಗಳು!

ತಂದೆಯ ಬಗ್ಗೆ ಒಬ್ಬ ಮಗನ ದೂರು ಇದು! ಇದು ಬಹುಶಃ ಹೆಚ್ಚಿನ ಅಪ್ಪಂದಿರಿಗೆ ಅನ್ವಯಿಸುತ್ತದೆ.

❖ ಬಾಲ್ಯದಿಂದಲೂ ನೋಡುತ್ತಿದ್ದೇನೆ. ಅಪ್ಪ ತುಂಬಾ ಸುಳ್ಳು ಹೇಳ್ತಾರೆ. ಅವರು ಬಹುತೇಕ ಎಲ್ಲ ವಿಷಯಗಳಲ್ಲೂ ಸುಳ್ಳು ಹೇಳುತ್ತಾರೆ.

❖ ನಮಗೆ ಬೇಕಾದುದೆಲ್ಲ ಇದೆ ಎಂದು ಸುಳ್ಳು ಹೇಳುತ್ತಾರೆ. ಹೇಗೋ ಅವುಗಳನ್ನು ಖರೀದಿಸಿಯೂ ಕೊಡುತ್ತಾರೆ.

❖ ನಮ್ಮ ಎಲ್ಲ ಖರ್ಚುಗಳಿಗೂ ಹಣವಿದೆ ಎಂದು ಸುಳ್ಳು ಹೇಳುತ್ತಾರೆ ಮತ್ತು ಅದಕ್ಕಾಗಿ ಹೇಗಾದರೂ ಮಾಡಿ ಹಣ ಹೊಂದಿಸುತ್ತಾರೆ.

❖ ನಮ್ಮನ್ನು ಹೊರಗೆಲ್ಲಾದರೂ ಊಟಕ್ಕೆ ಕರೆದುಕೊಂಡು ಹೋದರೆ, 'ತನಗೆ ಹಸಿವಿಲ್ಲ' ಎಂದು ಸುಳ್ಳು ಹೇಳಿ ತಾವು ಏನನ್ನೂ ತಿನ್ನುವುದಿಲ್ಲ. ಆದರೆ ನಮಗೆ ಬೇಕಾದುದನ್ನು ಕೊಡಿಸುತ್ತಾರೆ.

❖ ನಮಗಾಗಿ ತುಂಬಾ ಕಷ್ಟಪಟ್ಟು ದುಡಿದು ಬಂದರೂ 'ನನಗೇನೂ ದಣಿವಾಗಿಲ್ಲ' ಎಂದು ಸುಳ್ಳು ಹೇಳುತ್ತಾರೆ.

❖ ತಾವು ಮಾಡುವುದು ಎಷ್ಟೇ ಕಷ್ಟದ ಕೆಲಸವಾಗಿರಲಿ, ಬಿಸಿಲಲ್ಲಿ ಅಲೆದು ಮಾಡುವ ಕೆಲಸವಾಗಿರಲಿ, 'ತಾನು ಮಾಡುವ ಕೆಲಸ ಸೂಪರ್ ಆದ ಕೆಲಸ' ಎಂದು ಸುಳ್ಳು ಹೇಳುತ್ತಾರೆ.

❖ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ, ಮುಖದಲ್ಲಿ ಹುಸಿ ನಗುವನ್ನು ತೋರಿಸುತ್ತಾ ತಾವು ಸಂತಸದಿಂದ ಇರುವುದಾಗಿ ಹೇಳುತ್ತಾರೆ. ಹೀಗೆ ನಮ್ಮ ಸಂತೋಷಕ್ಕಾಗಿ ತಮ್ಮ ಸಂತೋಷವನ್ನು ಕಳೆದುಕೊಂಡವರು ಅಪ್ಪ!



# ರೋಲ್ ಮಾಡೆಲ್ ಅಪ್ಪಾ!

➲ ಮುಂಜಾನೆ ರೈಲಿನಿಂದ ಮಗನೊಂದಿಗೆ ಇಳಿದ ಒಬ್ಬ ತಂದೆ ನಿಲ್ದಾಣದಿಂದ ಹೊರಗೆ ಬರುತ್ತಾರೆ. ಹಲಸಿನ ಹಣ್ಣಿಗೆ ಮುತ್ತಿಕೊಳ್ಳುವ ನೊಣಗಳಂತೆ ಹೊರಗೆ ಕಾದು ನಿಂತಿದ್ದ ಆಟೋ ಚಾಲಕರು ಪ್ರಯಾಣಿಕರನ್ನೆಲ್ಲ ಮುತ್ತಿಕೊಳ್ಳುತ್ತಾರೆ. ತನ್ನನ್ನು ಸದ್ದಿಲ್ಲದೆ ಮೌನವಾಗಿ ಕರೆದ ಮೊದಲ ಆಟೋ ಡ್ರೈವರ್ ಹಿಂದೆ ನಡೆದು ಹೋದರು ಅಪ್ಪ. ಅಲ್ಲಿ ಯಾವ ಚೌಕಾಸಿಯೂ ಇರಲಿಲ್ಲ. ಚಾಲಕ ತಂದೆ ಮತ್ತು ಮಗನ ಕೈಯಿಂದ ಪೆಟ್ಟಿಗೆಗಳನ್ನು ತೆಗೆದುಕೊಂಡು ಆಟೋದಲ್ಲಿ ಹಾಕಿದ. ಅಪ್ಪ ಎಲ್ಲಿಗೆ ಹೋಗಬೇಕು ಅಂತ ಹೇಳಿದ ಮೇಲೆ ಆತ ಆಟೋ ಸ್ಟಾರ್ಟ್ ಮಾಡಿದ.

ಅದೇ ರೈಲು ನಿಲ್ದಾಣದಲ್ಲಿ ಮತ್ತೊಬ್ಬ ತಂದೆ ಕೂಡ ತನ್ನ ಮಗನ ಜೊತೆ ಬಂದಿದ್ದರು. ಅವರು ತಮ್ಮನ್ನು ಮುತ್ತಿಕೊಂಡ ಆಟೋ ಡ್ರೈವರ್‌ಗಳನ್ನು ದಾಟಿಕೊಂಡು ಮುಂದೆ ಸಾಗಿದರು. ಅಲ್ಲಿದ್ದ ಪ್ರಿಪೇಯ್ಡ್ ಆಟೋ ಸ್ಟ್ಯಾಂಡ್‌ಗೆ ಅವರು ಹೋದರು. ಅಲ್ಲಿ ಪ್ರೀ ಪೇಯ್ಡ್ ಆಟೋಗೆ ಹಣ ಪಾವತಿಸಿ ತಮಗಾಗಿ ಮೀಸಲಾದ ಆಟೋ ಹತ್ತಿ ಹೊರಟರು. ಸಮಂಜಸವಾದ ಶುಲ್ಕವನ್ನು ಪಾವತಿಸಿ ಅವರು ಮನೆ ತಲುಪಿದರು.

ಈ ಇಬ್ಬರೂ ತಂದೆಯಂದಿರೂ ತಮ್ಮ ಮಕ್ಕಳಿಗೆ ಜೀವನದ ಬಗ್ಗೆ ಪಾಠ ಕಲಿಸುತ್ತಾರೆ. ಮೊದಲ ತಂದೆ ಹಣವನ್ನು ಅಜಾಗರೂಕತೆಯಿಂದ ಖರ್ಚು ಮಾಡಲು ಕಲಿಸುತ್ತಾನೆ. ಯಾವುದೇ ಸ್ಥಳದಲ್ಲಾಗಲೀ ವೆಚ್ಚವನ್ನು ಹೇಗೆ ಕಡಿತಗೊಳಿಸುವುದು ಎಂಬುದನ್ನು ಎರಡನೆಯ ತಂದೆ ಕಲಿಸುತ್ತಾನೆ. ಹಣವನ್ನು ಅಜಾಗರೂಕತೆಯಿಂದ ಖರ್ಚು ಮಾಡುವುದು ಶ್ರೀಮಂತಿಕೆಯಲ್ಲ. ಅದನ್ನು ಬುದ್ಧಿವಂತಿಕೆಯಿಂದ ಖರ್ಚು ಮಾಡುವುದೇ ಶ್ರೀಮಂತಿಕೆಯ ಗುಣ.

➲ ಬೆಳಿಗ್ಗೆ ಟ್ರಾಫಿಕ್ ತುಂಬಿದ ರಸ್ತೆಯಲ್ಲಿ ತನ್ನ ಮಕ್ಕಳನ್ನು ಶಾಲೆಗೆ ಬಿಡಲು ಒಬ್ಬ ತಂದೆ ವಾಹನ ಓಡಿಸುತ್ತಿದ್ದಾನೆ. ಮನೆಯಿಂದ ಹೊರಡುವಾಗಲೇ ತಡವಾಗಿರುತ್ತದೆ. ಹಾಗಾಗಿ ವೇಗವಾಗಿ ಅಡ್ಡಾದಿಡ್ಡಿಯಾಗಿ ಆತ ವಾಹನ ಓಡಿಸುತ್ತಾನೆ. ಸಿಗ್ನಲ್‌ನಲ್ಲಿದ್ದ ಕೆಂಪು ದೀಪವನ್ನೂ ಲೆಕ್ಕಿಸದೆ ನಿಯಮಗಳನ್ನು ಮುರಿದು ಧಾವಿಸುತ್ತಾನೆ. ಮಕ್ಕಳು ಭಯಪಡುವುದನ್ನೂ ಅವನು ಗಮನಿಸುವುದಿಲ್ಲ.

ಎರಡನೆಯ ತಂದೆ ತನ್ನ ಮಗನನ್ನು ಕರೆದುಕೊಂಡು ಸಮುದ್ರತೀರಕ್ಕೆ ಹೋಗಿ ಮನೆಗೆ ಹಿಂದಿರುಗುತ್ತಾನೆ. ರಜೆಯ ದಿನವಾದ ಕಾರಣ ರಸ್ತೆಯಲ್ಲಿ ಜನಸಂದಣಿ ಇರಲಿಲ್ಲ. ಸಿಗ್ನಲ್ ಮೇಲೆ ಕೆಂಪು ದೀಪ ಮಿಂಚುತ್ತದೆ. ಹಸಿರು ದೀಪದ ರಸ್ತೆಯಲೂ ವಾಹನವಿಲ್ಲ. ನಿಗಾ

ವಹಿಸಲು ಸಂಚಾರಿ ಪೊಲೀಸರೂ ಕೂಡ ಅಲ್ಲಿಲ್ಲ. ಆದರೂ ಕೆಂಪು ದೀಪ ಹಸಿರು ಬಣ್ಣಕ್ಕೆ ತಿರುಗುವವರೆಗೂ ಅವರು ಕಾದು ನಂತರ ಮುಂದೆ ಸಾಗುತ್ತಾರೆ. ಮೊದಲ ತಂದೆ ತನ್ನ ಮಕ್ಕಳಿಗೆ ಅಜಾಗರೂಕತೆ ಮತ್ತು ಆತುರವನ್ನು ಕಲಿಸುದರೆ, ಯಾರೂ ನೋಡದಿದ್ದರೂ ಸಹ ನಿಯಮಗಳನ್ನು ಗೌರವಿಸಲು ಮತ್ತು ಪ್ರಾಮಾಣಿಕವಾಗಿರಲು ಎರಡನೇ ತಂದೆ ಕಲಿಸುತ್ತಾರೆ.

ಮಕ್ಕಳಿಗೆ ತಂದೆಯೇ ಮೊದಲ ಆದರ್ಶ ವ್ಯಕ್ತಿ. ಅಪ್ಪಂದಿರು, ತಮ್ಮ ಮಕ್ಕಳು ಹೇಗೆ ಬೆಳೆಯಬೇಕೆಂದು ಬಯಸುತ್ತಾರೋ ಆ ರೀತಿಯಲ್ಲಿ ತಾವೂ ಇರಬೇಕು. ಅದಕ್ಕಾಗಿ ಏನು ಮಾಡಬಹುದು?

➲ ಹೇಳುವುದು ಒಂದು ಮತ್ತು ಮಾಡುವುದು ಇನ್ನೊಂದು ಆಗಬಾರದು. ನಿಮ್ಮ ಮಕ್ಕಳಿಗೆ ಏನೇ ಸಲಹೆ ನೀಡಿದರೂ ಅದನ್ನು ಮೊದಲು



ನೀವು ಅನುಸರಿಸಿ. ಕೆಟ್ಟ ಮಾತುಗಳನ್ನಾಡದೆ, ಕೋಪದಲ್ಲಿ ಯಾರನ್ನೂ ಬೈಯದೆ, ಯಾರೊಂದಿಗೂ ಜಗಳವಾಡದೆ ತನ್ನ ಮಕ್ಕಳು ಬೆಳೆಯಬೇಕು ಎಂದು ಬಯಸುವ ತಂದೆಗೂ ಇದೇ ಗುಣಗಳಿರಬೇಕು. ನಿಮ್ಮ ಮಗುವು ಸರಳವಾಗಿರುವ ಅಪರಿಚಿತರನ್ನು ಸಹ ದಯೆ ಮತ್ತು ಗೌರವದಿಂದ ನಡೆಸಿಕೊಳ್ಳಬೇಕೆಂದು ನೀವು ಬಯಸಿದರೆ, ನೀವೂ ಹಾಗೇ ಮಾಡಬೇಕು. ಯಾವುದೇ ಕೆಟ್ಟ ಚಟಗಳಿಗೆ ದಾಸರಾಗದ ಅಪ್ಪನನ್ನು ನೋಡಿ ಮಕ್ಕಳೂ ಹಾಗೆ ಬೆಳೆಯುತ್ತಾರೆ.



➲ ತಂದೆಯು ತನ್ನ ಕುಟುಂಬ ಮತ್ತು ಸಂಬಂಧಿಕರನ್ನು ಪ್ರೀತಿಯಿಂದ ಮತ್ತು ಗೌರವದಿಂದ ನೋಡಿಕೊಂಡರೆ, ಮಕ್ಕಳು ಕೂಡ ಅದೇ ರೀತಿಯಲ್ಲಿ ಬೆಳೆಯುತ್ತಾರೆ, ಪೋಷಕರನ್ನು ಗೌರವಿಸುತ್ತಾರೆ, ಸಂಗಾತಿಯನ್ನು ಪ್ರೀತಿಯಿಂದ ಆಲಂಗಿಸುತ್ತಾರೆ ಮತ್ತು ಮನೆಗೆಲಸವನ್ನು ಹಂಚಿಕೊಳ್ಳುತ್ತಾರೆ. ತಮ್ಮ ಬೆನ್ನ ಹಿಂದೆ ಬಂಧುಗಳ ಬಗ್ಗೆ ಕೆಟ್ಟದಾಗಿ ಮಾತನಾಡದಿರುವುದು, ಸ್ನೇಹಿತರ ಒಳ್ಳೆಯ ಕಾರ್ಯಗಳನ್ನು ಮೆಚ್ಚುವ ತಂದೆಯನ್ನು ನೋಡುತ್ತಾ ಬೆಳೆಯುವ ಮಕ್ಕಳು ಕೂಡ ಅದೇ ರೀತಿಯ ಗುಣಗಳನ್ನು ಹೊಂದಿರುತ್ತಾರೆ. ಅತ್ಯಂತ ನಕಾರಾತ್ಮಕ ಯೋಚನೆಯಿರುವ ವ್ಯಕ್ತಿಯಲ್ಲಿಯೂ ಯಾವುದಾದರೂ ಒಂದು ಒಳ್ಳೆಯ ಗುಣವನ್ನು ಕಂಡು ಮೆಚ್ಚುವ ತಂದೆ ತನ್ನ ಮಕ್ಕಳಿಗೆ ಅತ್ಯುತ್ತಮ ಮಾದರಿಯಾಗುತ್ತಾನೆ. ವ್ಯಕ್ತಿಗಳ ಎದುರಿನಲ್ಲಿ ಒಂದು ರೀತಿಯಲ್ಲಿ, ಬೆನ್ನ ಹಿಂದೆ ಇನ್ನೊಂದು ರೀತಿಯಲ್ಲಿ ಮಾತನಾಡುವ ಅಪ್ಪಂದಿರು, ಅವರು ಮಕ್ಕಳನ್ನು ಗೊಂದಲ ಮತ್ತು ಒತ್ತಡದಲ್ಲಿ ಸಿಲುಕಿಸುತ್ತಾರೆ.

➲ ನೀವು ಏನಾದರೂ ತಪ್ಪು ಮಾಡಿದರೆ, ಅದನ್ನು ಒಪ್ಪಿಕೊಳ್ಳಿ ಮತ್ತು ಹಿಂಜರಿಕೆಯಿಲ್ಲದೆ ಕ್ಷಮೆ ಯಾಚಿಸಿ. ನೀವು ನಿಮ್ಮ ಮಕ್ಕಳನ್ನು ಎಲ್ಲಿಗಾದರೂ ಕರೆದುಕೊಂಡು ಹೋಗುವುದಾಗಿ ಹೇಳಿದ್ದರೆ ಮತ್ತು ಸಮಯಕ್ಕೆ ಸರಿಯಾಗಿ ಬರದಿದ್ದರೆ ಅಥವಾ ಅವರು ಕೇಳಿದ ಏನನ್ನಾದರೂ ತರಲು ನೀವು ಮರೆತರೆ, ಅವರಲ್ಲಿ ಕ್ಷಮೆ ಯಾಚಿಸಿ 'ಕ್ಷಮಿಸಿ' ಎಂದು ಹೇಳಿ. ಇದರಿಂದ ಅವರು ತಪ್ಪು ಮಾಡಿದರೆ ಕ್ಷಮೆ ಕೇಳುವ ಮನೋಭಾವ ಹೊಂದುತ್ತಾರೆ. ತಪ್ಪುಗಳನ್ನು ಹೇಗೆ ಸರಿಪಡಿಸುವುದು ಎಂದು ಅವರು ಕಲಿಯುತ್ತಾರೆ. ಇದರಿಂದ ಅವರು ಪ್ರತಿ ಬಾರಿಯೂ ಸರಿಯಾದ ಕೆಲಸವನ್ನು ಮಾಡುವ ಬಗ್ಗೆ ಯೋಚಿಸುತ್ತಾರೆ.

➲ ನೀವು ಆಫೀಸ್‌ನಲ್ಲಿ ಪಡುವ ಕಷ್ಟಗಳ ಬಗ್ಗೆ ಮಕ್ಕಳಿಗೆ ಏನೂ ತಿಳಿದಿರುವುದಿಲ್ಲ. ಆದರೆ ನೀವು ಮನೆಯಲ್ಲಿ ಏನು ಮಾಡುತ್ತಿದ್ದೀರಿ ಎಂದು ಅವರು ನೋಡುತ್ತಾರೆ. ಅಡುಗೆ ಮಾಡುವುದು ಹೆಂಡತಿಯ ಕೆಲಸ ಎಂದು ಭಾವಿಸದೆ, ಮನೆಯನ್ನು ಶುಚಿಗೊಳಿಸುವುದು ಸೇವಕಿಯ ಕರ್ತವ್ಯ ಎಂದು ಭಾವಿಸದೆ ತಂದೆಯೂ ಮನೆಗೆಲಸದಲ್ಲಿ ಸಹಾಯ ಮಾಡುವುದನ್ನು ಮಕ್ಕಳು ನೋಡಬೇಕು. ತಾಯಿಯ ಕೆಲಸವನ್ನು ಹಂಚಿಕೊಂಡು ಅವಳನ್ನು ತಂದೆ ಸಂತೋಷಪಡಿಸುವುದನ್ನು ನೋಡಿದ ನಂತರ ಮಕ್ಕಳೂ ಮನೆಗೆಲಸದ ಜವಾಬ್ದಾರಿಯನ್ನು ಪಡೆಯುತ್ತಾರೆ.

➲ ನಮ್ಮ ಗೌರವವನ್ನು ನಾವು ಯಾರಿಂದಲೂ ಕೇಳಿ ಪಡೆಯಬಾರದು. ನಮ್ಮ ಕಾರ್ಯಗಳನ್ನು ನೋಡಿ ಅವರಾಗಿಯೇ ಸ್ವತಃ ನೀಡಿದಾಗಷ್ಟೇ ಗೌರವಕ್ಕೆ ಬೆಲೆ. ತಂದೆ ಎಂಬ ಕಾರಣಕ್ಕಾಗಿಯೇ ಮಕ್ಕಳು ಅವರಿಗೆ ಗೌರವ ಕೊಡಬೇಕೆಂದೇನೂ ಇಲ್ಲ. ತಂದೆಯ ಕಾರ್ಯಗಳು ಪ್ರಾಮಾಣಿಕ, ಸತ್ಯ ಮತ್ತು ಪರಿಪೂರ್ಣವಾಗಿದ್ದಲ್ಲಿ ಮಕ್ಕಳು ಸಹಜವಾಗಿಯೇ ಅವರನ್ನು ಗೌರವಿಸುತ್ತಾರೆ.

➲ ಸಮುದ್ರ ತೀರದಲ್ಲಿರುವ ದೀಪಸ್ತಂಭವು ಹಡಗುಗಳಿಗೆ ಮಾರ್ಗದರ್ಶನ ಮಾಡುತ್ತದೆ. ಹಾಗೆಯೇ ತಂದೆಯು ನಿರ್ದಿಷ್ಟ ಅಂತರದಲ್ಲಿ ಉಳಿದು ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು ಎಂದೇನೂ ಇಲ್ಲ. ನೀವು ಅವರನ್ನು ಪ್ರೀತಿಯಿಂದ ಮುದ್ದಾಡಿದಾಗ ಮಾತ್ರ ಅವರು ನಿಮ್ಮನ್ನು ಸಮೀಪಿಸಲು ಮತ್ತು ನಿಮ್ಮಿಂದ ಕಲಿಯಲು ಬಯಸುತ್ತಾರೆ. ಪ್ರೀತಿಗಾಗಿ ಹಾತೊರೆಯುವ ಮಕ್ಕಳನ್ನು ಮುದ್ದಿಸಿ, 'ನೀನೇ ನನ್ನ ಪ್ರಪಂಚ' ಎಂದು ಅವರಿಗೆ ಅರ್ಥ ಮಾಡಿಸಿದರೆ, ಅವರು ಸಂತೋಷ ಪಡುತ್ತಾರೆ. ಅವರ ಪ್ರತಿಯೊಂದು ಪ್ರಯತ್ನವನ್ನೂ ಪ್ರಶಂಸಿಸಿ ಅವರಿಗೆ ಮಾರ್ಗದರ್ಶನ ಮಾಡಿದರೆ, ಅವರು ತಮ್ಮ ತಂದೆಗಿಂತಲೂ ಉತ್ತಮ ವ್ಯಕ್ತಿಯಾಗುತ್ತಾರೆ. ●

# ದೂರ ತಳ್ಳಿದ ಮಗನೂ ಅರ್ಥ ಮಾಡಿಕೊಂಡ ಮಗನೂ!



ತನ್ನ ಸ್ವಂತ ಪರಿಶ್ರಮದಿಂದ ಮೇಲೆ ಬಂದಿದ್ದ ಮಧ್ಯಮ ವರ್ಗದ ಕುಟುಂಬದ ಮುಖ್ಯಸ್ಥ ಆತ. ತಾನು ಕನಸು ಕಂಡಂತೆ ಸ್ವಂತ ಮನೆ ಕಟ್ಟಿಕೊಂಡು, ಒಬ್ಬನೇ ಮಗನಿಗೆ ಒಳ್ಳೆಯ ವಿದ್ಯಾಭ್ಯಾಸ ಮಾಡಿಸಿ, ಒಳ್ಳೆಯ ಕೆಲಸಕ್ಕೆ ಸೇರಿಸಿ ಮದುವೆ ಕೂಡ ಮಾಡಿದ. ಇಬ್ಬರು ಮೊಮ್ಮಕ್ಕಳು ಕೂಡ ಜನಿಸಿದರು. ಅವರು ಆಹ್ಲಾದಕರವಾದ ಅವಿಭಕ್ತ ಕುಟುಂಬವಾಗಿ ವಾಸಿಸುತ್ತಿದ್ದರು.

ವೃದ್ಧಾಪ್ಯದಲ್ಲಿ ಒಂಟಿತನವು ಕ್ರೂರವಾಗಿರುತ್ತದೆ. ಶೀಘ್ರದಲ್ಲೇ ಅದು ಆತನಿಗೆ ಸಂಭವಿಸಿತು. ಆತನ ಪತ್ನಿ ಅಸ್ವಸ್ಥಳಾಗಿ ಹಠಾತ್ ನಿಧನಳಾದಳು. ಆ ದುರಂತದಿಂದ ಆತನಿಗೆ ಚೇತರಿಸಿಕೊಳ್ಳಲಾಗಲಿಲ್ಲ.

ಅತ್ತೆ ಸತ್ತಾಗ ಸೊಸೆ ತನ್ನ ಸ್ವಯರೂಪ ತೋರಿದಳು. ಮನೆ ನಿರ್ಮಿಸುವಾಗ, ಆ ಮನೆಯ ಮುಖ್ಯಸ್ಥ ತನಗಾಗಿ ಮತ್ತು ತನ್ನ ಹೆಂಡತಿಗಾಗಿ ದೊಡ್ಡ ಮಲಗುವ ಕೋಣೆಯನ್ನೂ, ಮಗ ಮತ್ತು ಸೊಸೆಗೆ ಒಂದು ಮಲಗುವ ಕೋಣೆಯನ್ನೂ, ಮೊಮ್ಮಕ್ಕಳು ದೊಡ್ಡವರಾದ ಮೇಲೆ ಅವರಿಗೂ ಪ್ರತ್ಯೇಕ ಕೊಠಡಿ ಇರಲಿ ಎಂದೂ ಯೋಜನೆ ರೂಪಿಸಿ ಮನೆ ಕಟ್ಟಿಸಿದ್ದ. ಕಾರ್ ಶೆಡ್‌ಗೆ ಹೊಂದಿಕೊಂಡಂತೆ ಡ್ರೈವರ್‌ಗೆ ಹಾಗೂ ದೂರದ ಸಂಬಂಧಿಕರು ಯಾರಾದರೂ ಬಂದರೆ ತಂಗಲು ಒಂದು ಚಿಕ್ಕ ಕೊಠಡಿ ಇತ್ತು. ಅತ್ತೆ ಸತ್ತ ಮೇಲೆ ಸೊಸೆ ತನ್ನ ಗಂಡನ ಬಳಿ, 'ಈಗ ಅತ್ತೆ ಇಲ್ಲವಲ್ಲ... ಇನ್ನೇಕೆ ನಿಮ್ಮ ತಂದೆಗೆ ಅಷ್ಟೊಂದು ದೊಡ್ಡ ಕೋಣೆ. ಆ ಕೋಣೆ ನಮ್ಮ ಮಕ್ಕಳಿಗೆ ಆಟವಾಡುವುದಕ್ಕೆ ದೊಡ್ಡದಾಗಿದೆ. ಅವರು ಇನ್ನು ಅಲ್ಲಿ ಇರುವುದೇನೂ ಬೇಡ. ಆ ಚಿಕ್ಕ ಕೊಠಡಿ ಅವರಿಗೆ ಸಾಕು' ಎಂದು ಹೇಳಿದಳು.

ಅವನೂ ಹೆಂಡತಿಯ ಪ್ರಸ್ತಾಪವನ್ನು ನಿರಾಕರಿಸದೆ ತನ್ನ ತಂದೆಯ ಬಳಿಗೆ ಹೋದ. 'ಅಪ್ಪಾ. ಅಮ್ಮನ ಹಠಾತ್ ಸಾವಿನಿಂದ ನನ್ನ ಹೆಂಡತಿಯೇ ಮನೆಗೆಲಸವನ್ನೆಲ್ಲಾ ಮಾಡಬೇಕಾಗಿದೆ. ನಿಮ್ಮ ಮುಂದೆ ಕ್ಯಾಶುಯಲ್ ಆಗಿ ನೈಟಿ ಧರಿಸಲು ಅವಳಿಗೆ ಮುಜುಗರವಾಗುತ್ತಿದೆ' ಎಂದ. 'ನನ್ನ ಸೊಸೆ ತನಗೆ ಇಷ್ಟವಾದ ಉಡುಪನ್ನು ಧರಿಸಲು ನನ್ನ ಅಭ್ಯಂತರವೇನಿಲ್ಲ' ಎಂದು ತಂದೆ ಹೇಳಿದರು. ಆದರೆ ಮಗ ಬಿಡಲಿಲ್ಲ. 'ಹಾಗೆ ಅವಳು ನಿಮ್ಮ ಮುಂದೆ ರಿಲ್ಯಾಕ್ಸ್ ಆಗಿ ನಡೆದಾಡಲು ಆಗುವುದಿಲ್ಲ ಅಪ್ಪ. ದಯವಿಟ್ಟು ಅರ್ಥ ಮಾಡಿಕೊಳ್ಳಿ. ಕಾರ್ ಶೆಡ್ ಬಳಿ ಇರುವ ಚಿಕ್ಕ ಕೊಠಡಿಗೆ ನೀವು ಹೋದರೆ ಎಲ್ಲ ಸಮಸ್ಯೆಗಳೂ ಬಗೆಹರಿಯುತ್ತವೆ' ಎಂದ.

ಮುದುಕ ಪ್ರತಿಭಟಿಸದೆ ಆ ಕೋಣೆಗೆ ತೆರಳಿದ. ತನ್ನ ಬಗೆಗೆ ಅವರ ಕಾಳಜಿ ಮತ್ತು ತನಗೆ ನೀಡುತ್ತಿರುವ ಆಹಾರ ಕ್ರಮೇಣ ಕಡಿಮೆಯಾಗುತ್ತಿದೆ ಎಂಬುದನ್ನು ಅವರು ಗಮನಿಸಿದರು. ಮೊಮ್ಮಕ್ಕಳೂ ಕೂಡ ಅವರ ಹತ್ತಿರ ಸುಳಿಯದಂತೆ ನೋಡಿಕೊಂಡಳು ಸೊಸೆ. ಅವರಿಗೆ ವಾಸ್ತವ ಅರ್ಥವಾಯಿತು.

ಎರಡು ತಿಂಗಳು ಕಳೆಯಿತು. ಅವರು ಒಂದು ದಿನ ಮಗನನ್ನು ಕರೆದು ಅವನ ಕೈಗೆ ವಿಮಾನದ ಟಿಕೆಟ್‌ಗಳನ್ನು ಕೊಟ್ಟು, 'ನಿಮಗೆ ನಾರ್ತ್ ಇಂಡಿಯನ್ ಟೂರ್ ಅರೇಂಜ್ ಮಾಡಿದ್ದೇನೆ. 10 ದಿನ ಕುಟುಂಬ ಸಮೇತ ಹೋಗಿ ಬನ್ನಿ' ಎಂದರು. 'ನೀವು ನಮ್ಮೊಂದಿಗೆ ಬರುವುದಿಲ್ಲವೇ?' ಎಂದು ಕೇವಲ ಬಾಯಿ ಮಾತಿಗೆ ಕೂಡ ಮಗನಾಗಲಿ, ಸೊಸೆಯಾಗಲಿ ಅವರನ್ನು ಕೇಳಲಿಲ್ಲ. ಸಂತೋಷದಿಂದ ಹೊರಟರು.

ಮೊದಲೇ ಎಲ್ಲ ಚರ್ಚಿಸಿ ವ್ಯವಸ್ಥೆ ಮಾಡಿಕೊಂಡಿದ್ದಂತೆ, ಆ ಮನೆಯನ್ನು ಅವರು ಐದು ಕೋಟಿ ರೂಪಾಯಿಗೆ ಮಾರಿದರು ಮತ್ತು ತನಗಾಗಿ ತಕ್ಷಣವೇ ಒಂದು ಚಿಕ್ಕ ಮನೆಯನ್ನು ಖರೀದಿಸಿದರು. ತಮ್ಮ ವಸ್ತುಗಳನ್ನೆಲ್ಲ ಅಲ್ಲಿಗೆ ಸ್ಥಳಾಂತರಿಸಿಕೊಂಡರು. ಅಲ್ಲದೆ, ಮಗನಿಗಾಗಿ ಕೂಡ ಒಂದು ಬಾಡಿಗೆ ಮನೆಯನ್ನು ನೋಡಿ ಅಲ್ಲಿಗೆ ಅವರ ಸಾಮಾನುಗಳನ್ನೆಲ್ಲ ಕಳುಹಿಸಿದರು.

ಪ್ರವಾಸ ಮುಗಿಸಿ ಹಿಂದಿರುಗಿದ ಮಗ, ತಮ್ಮ ಮನೆಗೆ ಬೀಗ ಹಾಕಿರುವುದನ್ನು ಮತ್ತು ಬಾಗಿಲಲ್ಲಿ ವಾಚ್‌ಮನ್ ನಿಂತಿರುವುದನ್ನು ಕಂಡು ಆಘಾತಕ್ಕೊಳಗಾದ. ಕಾವಲುಗಾರ ಅವರನ್ನು ಒಳಗೆ ಬಿಡಲು ಒಪ್ಪದಿದ್ದಾಗ ಸಿಟ್ಟಿನಿಂದ ತಂದೆಗೆ ಫೋನ್ ಮಾಡಿ ಕೂಗಾಡಿದ. 'ನೀವು ಕಾರಿನಲ್ಲೇ ಇರಿ. ನಾನು ಬರುತ್ತಿದ್ದೇನೆ' ಎಂದು ಹೇಳಿ ಅರ್ಧ ಗಂಟೆಯಲ್ಲಿ ಅಲ್ಲಿಗೆ ಬಂದು ಸೇರಿದ ಆತ.

ಮಗನ ಕೈಗೆ ಒಂದು ಬೀಗದ ಕೀ ಕೊಟ್ಟು ನಡೆದದ್ದನ್ನೆಲ್ಲ ಹೇಳಿ, 'ನಾನು ಸಂಪಾದಿಸಿ ಕಟ್ಟಿಸಿದ ಮನೆ ಇದು. ಇದರಲ್ಲಿ ನಾನೇ ಬೇರೆ



ಯಾರೋ ಅನ್ಯ ವ್ಯಕ್ತಿಯಂತೆ ಬದುಕಲು ನನ್ನಿಂದಾಗದು. ಆದುದರಿಂದ ಇದನ್ನು ಮಾರಿ ಬಿಟ್ಟೆ. ನಾನು ಇನ್ನು ಮುಂದೆ ಬೇರೆಯಾಗಿ ವಾಸಿಸುತ್ತೇನೆ. ನಿನಗಾಗಿ ಬೇರೆ ಮನೆಯನ್ನು ನೋಡಿ ಅಡ್ವಾನ್ಸ್ ಕೊಟ್ಟು, ಒಂದು ವರ್ಷದ ಬಾಡಿಗೆಯನ್ನೂ ನಾನೇ ಪಾವತಿಸಿದ್ದೇನೆ. ಅದರ ನಂತರ ಆ ಮನೆಯಲ್ಲೇ ಇರುವುದೂ, ಬೇರೆ ಮನೆಗೆ ಹೋಗುವುದೂ ನಿಮಗೆ ಬಿಟ್ಟಿದ್ದು. ಆ ಮನೆಯಲ್ಲಿ ನಿನ್ನ ಹೆಂಡತಿ ತನಗೆ ಅನುಕೂಲವಾದಂತೆ ಉಡುಪು ಧರಿಸಿಕೊಂಡು ಇರಬಹುದು' ಎಂದು ಹೇಳಿ ಅವರು ಅಲ್ಲಿಂದ ಹೊರಟು ಬಿಟ್ಟರು.

ತಂದೆಯನ್ನು ದೂರ ತಳ್ಳಲು ನೋಡಿದ ತನಗೆ ಇದು ತಕ್ಕ ಶಿಕ್ಷೆಯೇ ಸರಿ ಎಂದು ಮಗ ಅಂದುಕೊಂಡ. ಸೊಸೆ ತಲೆ ತಗ್ಗಿಸಿದಳು.

ಇದು ಇನ್ನೊಬ್ಬ ಮಗನ ಕಥೆ. ರಾಘವನ್ ಅವರಿಗೆ 45 ವರ್ಷ ವಯಸ್ಸಾಗಿದ್ದಾಗ ಅವರ ಪತ್ನಿ ನಿಧನರಾದರು. ಅನೇಕ ಸಂಬಂಧಿಕರು ಮತ್ತು ಸ್ನೇಹಿತರು ಮರುಮದುವೆಯಾಗಲು ಒತ್ತಾಯಿಸಿದರೂ, ಅವರು ನಿರಾಕರಿಸಿದರು. 'ನನ್ನ ಹೆಂಡತಿ ನನಗೆ ಒಬ್ಬ ಮಗನನ್ನು ಬಿಟ್ಟು ಹೋಗಿದ್ದಾಳೆ. ಅವನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡುವುದು ನನ್ನ ಜವಾಬ್ದಾರಿ. ನಾನು ಅವನ ತಾಯಿಯಾಗಿಯೂ ತಂದೆಯಾಗಿಯೂ ಅವನನ್ನು ಬೆಳೆಸುತ್ತೇನೆ. ನಾನು ಮರುಮದುವೆಯಾದರೆ ನನಗೆ ಒಳ್ಳೆಯ ಹೆಂಡತಿ ಸಿಗಬಹುದು. ಆದರೆ ಅವನಿಗೆ ಒಳ್ಳೆಯ ತಾಯಿ ಸಿಗುತ್ತಾರೋ ಇಲ್ಲವೋ ಎಂದು ನನಗೆ ಸಂದೇಹವಿದೆ. ಹಾಗಾಗಿ, ಇಂದಿನಿಂದ ನಾನು ಅವನಿಗಾಗಿ ಬದುಕುತ್ತೇನೆ. ನನಗೆ ಬೇರೆ ಸಂಗಾತಿಯ ಅಗತ್ಯವಿಲ್ಲ' ಎಂದು ಅವರು ಹೇಳಿದರು.

ವರ್ಷಗಳು ಮುಂದೆ ಸಾಗಿದವು. ಮಗ ಓದಿ, ಪದವಿ ಪಡೆದು ತಂದೆಯ ವ್ಯವಹಾರವನ್ನು ನೋಡಿಕೊಳ್ಳುವಷ್ಟು ಬೆಳೆದ. ಅವರು ತಮ್ಮ ಮನೆ ಮತ್ತು ವ್ಯವಹಾರವನ್ನು ಮಗನಿಗೆ ಬಿಟ್ಟುಕೊಟ್ಟು ವಿಶ್ರಾಂತ ಜೀವನ ನಡೆಸಲು ಬಯಸಿದರು. ಎಲ್ಲವನ್ನೂ ಅವನ ಹೆಸರಿಗೆ ಬರೆದುಕೊಟ್ಟು, ಮಗನಿಗೆ ಮದುವೆ ಕೂಡ ಮಾಡಿ, ಅವರೊಂದಿಗೆ ವಾಸಿಸತೊಡಗಿದರು.

ಒಂದು ವರ್ಷ ಕಳೆಯಿತು. ಒಂದು ದಿನ ವಾಕಿಂಗ್‌ನಿಂದ ಹಿಂದಿರುಗುವುದರೊಳಗೆ ವಿಪರೀತ ಹಸಿವಾಯಿತು. 'ತಿಂಡಿ ಸಿದ್ಧವಾಗಿದೆಯೇ, ಅಮ್ಮ?' ಎಂದು ತಮ್ಮ ಸೊಸೆಯ ಬಳಿ ಕೇಳಿದರು. 'ನಿನ್ನೆ ರಾತ್ರಿ ಉಳಿದ ಇಡ್ಲಿಯಿಂದ ಇಡ್ಲಿ ಉಪ್ಪಿಟ್ಟು ಮಾಡಿದ್ದೇನೆ. ಅದೇ ಇವತ್ತಿನ ತಿಂಡಿ ಮಾವಾ!' ಎಂದಳು ಸೊಸೆ. ಅವರೂ ಅದನ್ನೇ ತಿಂದು ಮುಗಿಸಿ ತಮ್ಮ ಕೋಣೆಗೆ ಹೋದ ನಂತರ ಅವರ ಮಗ ತಿಂಡಿ ತಿನ್ನಲು ಬಂದ. ಹೆಂಡತಿ ಅವನಿಗೆ ಮತ್ತು ತನಗಾಗಿ ಪೂರಿಯನ್ನು ತೆಗೆದುಕೊಂಡು ಬಂದಳು.

ಅವನು ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡಿದ್ದ. ಅಪ್ಪನಿಗೆ ಪೂರಿ ತುಂಬಾ ಇಷ್ಟ. ಅದು ಅವನ ಹೆಂಡತಿಗೂ ಗೊತ್ತು. ಆದರೆ ಅವಳು ಹಳೆಯ ಇಡ್ಲಿ ಉಪ್ಪಿಟ್ಟನ್ನು ಅವರಿಗೆ ಕೊಟ್ಟು ಪೂರಿಯನ್ನು ತಮಗಾಗಿ ಮಾಡಿರುವುದನ್ನು ಗಮನಿಸಿದ. ಅವನು ಏನೂ ಮಾತನಾಡದೆ ಕಚೇರಿಗೆ ಹೊರಟು ಹೋದ. ಆ ವಿಷಯವೇ ದಿನವಿಡೀ ಅವನ ಮನಸ್ಸಿನಲ್ಲಿ ಓಡುತ್ತಿತ್ತು.

ಮರುದಿನ ಬೆಳಿಗ್ಗೆ ವಕೀಲರು ಅವನ ಮನೆಗೆ ಬಂದರು. ಅವನು ತನ್ನ ತಂದೆಯನ್ನು ಕರೆದ. 'ಇದೇನಪ್ಪಾ ಇದು? ವಕೀಲರು ಇಲ್ಲಿಗೆ ಯಾಕೆ ಬಂದಿದ್ದಾರೆ?' ಎಂದು ಅಪ್ಪ ಕೇಳಿದರು. 'ನನ್ನ ಹೆಸರಿನಲ್ಲಿ ಬರೆದಿರುವ ಎಲ್ಲವನ್ನೂ ನಿಮ್ಮ ಹೆಸರಿಗೇ ಬದಲಾಯಿಸಿಕೊಳ್ಳಿ. ನಾನು ಇನ್ನು ಮುಂದೆ ಮನೆ ಅಥವಾ ವ್ಯವಹಾರದ ಮಾಲೀಕತ್ವವನ್ನು ತೆಗೆದುಕೊಳ್ಳುವುದಿಲ್ಲ. ನಾನು ಇನ್ನು ಮುಂದೆ ಮಾಸಿಕ ಸಂಬಳ ಪಡೆಯುವ ಸರಾಸರಿ ಕೆಲಸಗಾರನಾಗಿ ಮಾತ್ರ ಇರುತ್ತೇನೆ. ನನ್ನ ಹೆಂಡತಿ ಮತ್ತು ನಾನು ಇನ್ನು ಮುಂದೆ ಬಾಡಿಗೆ ಮನೆಗೆ ಹೋಗುತ್ತಿದ್ದೇವೆ' ಎಂದು ಅವನು ಹೇಳಿದ.

'ಯಾಕೆ ಈ ದಿಢೀರ್ ನಿರ್ಧಾರ?' ಅಪ್ಪ ಗಾಬರಿಯಾದರು. 'ಇಲ್ಲ ಅಪ್ಪಾ! ನಿಮ್ಮ ಬೆಲೆ ಏನು ಎಂಬುದನ್ನು ನಾನು ನನ್ನ ಹೆಂಡತಿಗೆ ತೋರಿಸಬೇಕು. ನಿಮ್ಮ ಇಷ್ಟದ ಆಹಾರ ತಿನ್ನುವುದಕ್ಕಾಗಿ ಇನ್ನು ನೀವು ಕೈಚಾಚಬೇಕಾಗಿಲ್ಲ' ಎಂದು ಮಗ ಹೇಳಿದ.

ನಮಗೆ ಗುರುತು ನೀಡಿದವರನ್ನು ನಾವು ನಿರ್ಲಕ್ಷಿಸಬಾರದು.

●

ಸಾಮಾನ್ಯವಾಗಿ ಹೆಚ್ಚಾಗಿ ತಾಯಿ ಮಕ್ಕಳಿಗೆ ಹತ್ತಿರವಾಗಿರುವುದರಿಂದ ಮಕ್ಕಳು ತಾಯಿಯ ಪ್ರೀತಿ ಮತ್ತು ತ್ಯಾಗವನ್ನು ಮೆಚ್ಚುತ್ತಾರೆ ಮತ್ತು ಅದರ ಬಗ್ಗೆ ಮಾತನಾಡುತ್ತಾರೆ. ಅನೇಕ ಮಕ್ಕಳಿಗೆ ತಮ್ಮ ತಂದೆ ಏನು ಮಾಡುತ್ತಾರೆಂದೇ ತಿಳಿದಿರುವುದಿಲ್ಲ. ಅನೇಕ ತಾಯಂದಿರು ಅವರ ಬಗ್ಗೆ ಮಕ್ಕಳಿಗೆ ಏನೂ ಹೇಳುವುದೂ ಇಲ್ಲ. ಕೆಲವು ತಾಯಂದಿರು ತಂದೆಯೊಂದಿಗಿನ ತಮ್ಮ ಮನಸ್ತಾಪಗಳನ್ನು ಮಕ್ಕಳಿಗೆ ಹೇಳುತ್ತಾ ಅವರ ಮನಸ್ಸಿನಲ್ಲಿ ತಮಗೇ ಅರಿವಿಲ್ಲದೆ ತಂದೆಯ ಬಗ್ಗೆ ತದ್ವಿರುದ್ಧವಾದ ಆಲೋಚನೆಗಳನ್ನು ಹುಟ್ಟು ಹಾಕುತ್ತಾರೆ. ಆದರೆ ಮಾತೇ ಆಡದ ತಂದೆಯ ತ್ಯಾಗಗಳೂ ಶ್ರೇಷ್ಠವಾದವು.

● ತಾಯಿಯು ಮಗುವನ್ನು ತನ್ನ ಹೊಟ್ಟೆಯಲ್ಲಿ ಹತ್ತು ತಿಂಗಳವರೆಗೆ ಹೊರುತ್ತಾಳೆ. ಆದರೆ ತಂದೆ ಜೀವಮಾನವಿಡೀ ತನ್ನ ಎದೆಯಲ್ಲಿ ಹೊತ್ತುಕೊಳ್ಳುತ್ತಾನೆ. ಇಬ್ಬರೂ ಸಮಾನರು. ಆದರೂ ತಂದೆಯ ಪ್ರೀತಿ ಮತ್ತು ತ್ಯಾಗವನ್ನು ಗೌಣವಾಗಿ ನೋಡಲಾಗುತ್ತದೆ.

● ತಾಯಿ ಸಂಬಳವಿಲ್ಲದೆ ಕುಟುಂಬಕ್ಕಾಗಿ ದುಡಿಯುತ್ತಾಳೆ. ತಂದೆ ಕಷ್ಟಪಟ್ಟು ತಾನು ದುಡಿದ ಸಂಬಳವನ್ನೆಲ್ಲ ಕುಟುಂಬಕ್ಕಾಗಿ ಖರ್ಚು ಮಾಡುತ್ತಾನೆ. ಇವರಿಬ್ಬರ ಪ್ರಯತ್ನ ಸಮಾನ. ಆದರೆ, ತಂದೆಯ ತ್ಯಾಗದ ಬಗ್ಗೆ ಯಾರೂ ಮಾತನಾಡುವುದಿಲ್ಲ.

● ಮಕ್ಕಳಿಗೆ ಏನು ಬೇಕೋ ಅದನ್ನು ಅಮ್ಮ ಅಡುಗೆ ಮಾಡಿ ಕೊಡುತ್ತಾಳೆ. ಮಕ್ಕಳು ಕೇಳಿದ್ದನ್ನು ತಂದೆ ಖರೀದಿಸಿ ತಂದು ಕೊಡುತ್ತಾರೆ. ಇಬ್ಬರ ಪ್ರೀತಿ ಸಮಾನ. ಆದರೆ ತಾಯಿಯ ವಾತ್ಸಲ್ಯವನ್ನು ಅತ್ಯುನ್ನತವಾಗಿ ತೋರಿಸಲಾಗಿದೆ. ಅಪ್ಪ ಇಲ್ಲಿಯೂ ಹಿಂದುಳಿಯುತ್ತಾರೆ.

● ವಿದೇಶಕ್ಕೆ ಹೋಗುವ ಮಕ್ಕಳು ಮೊದಲು ತಮ್ಮ ತಾಯಿಯೊಂದಿಗೆ ಫೋನ್‌ನಲ್ಲಿ ಮಾತನಾಡುತ್ತಾರೆ. ಏನಾದರೂ ನೋವಾದರೆ 'ಅಮ್ಮ' ಎಂದು ಅಳುತ್ತಾರೆ. ತಮಗೆ ಹಣ ಮತ್ತು ವಸ್ತುವಿನ ಅಗತ್ಯವಿದ್ದಾಗ ಮಾತ್ರ ಅವರು ತಮ್ಮ ತಂದೆಯನ್ನು ನೆನಪಿಸಿಕೊಳ್ಳುತ್ತಾರೆ. ಇತರ ಸಮಯದಲ್ಲಿ ಮಕ್ಕಳು ತನ್ನನ್ನು ನೆನಪಿಸಿಕೊಳ್ಳುವುದಿಲ್ಲ ಎಂದು ತಂದೆ ಯಾವಾಗಲೂ ಕೊರಗುವುದಿಲ್ಲ. ಆದರೆ ಮಕ್ಕಳಿಂದ ಪ್ರೀತಿಯನ್ನು ಪಡೆಯುವ ವಿಷಯಕ್ಕೆ ಬಂದಾಗ, ತಂದೆಯಂದಿರು ಯಾವಾಗಲೂ ಹಿಂದುಳಿದಿರುತ್ತಾರೆ.

● ಅಲಮಾರಿನ ತುಂಬ ಅಮ್ಮನ ಬಣ್ಣಬಣ್ಣದ ಬಟ್ಟೆಗಳೂ, ಮಕ್ಕಳ ಉಡುಪುಗಳೂ ಹೇರಳವಾಗಿರುತ್ತವೆ. ಆದರೆ ತಂದೆಯ ಬಟ್ಟೆಗಳು ಬಹಳ ಕಡಿಮೆ ಇರುತ್ತವೆ. ಏಕೆಂದರೆ ಅವರು ಯಾವಾಗಲೂ ತನ್ನ ಸ್ವಂತ ಅಗತ್ಯಗಳ ಬಗ್ಗೆ ಚಿಂತಿಸುವುದಿಲ್ಲ. ಆದರೂ ಅವರ ಪ್ರೀತಿ, ಮೆಚ್ಚುಗೆ ಪಡೆಯುವಲ್ಲಿ ಅಪ್ಪ ಹಿಂದೆ ಬಿದ್ದಿದ್ದಾರೆ.

● ಅಮ್ಮನಿಗೆ ಅನೇಕ ಬಂಗಾರದ ಆಭರಣಗಳಿರುತ್ತವೆ. ಮಕ್ಕಳು ಕೂಡ ಆಭರಣಗಳನ್ನು ಹಾಕಿಕೊಂಡು ಸುಂದರವಾಗಿ ಕಾಣುತ್ತಾರೆ. ಆದರೆ ತಂದೆಯ ಬಳಿ ಯಾವುದೇ ಆಭರಣಗಳಿರುವುದಿಲ್ಲ. ಅವರು ತನಗಾಗಿ ಏನನ್ನೂ ಖರೀದಿಸುವುದಿಲ್ಲ. ಆದರೂ ತಂದೆಯ ತ್ಯಾಗದ ಬಗ್ಗೆ ಯಾರೂ ಮಾತನಾಡುವುದಿಲ್ಲ.

● ಕುಟುಂಬ ನಿರ್ವಹಣೆಗಾಗಿ ತಂದೆ ದಿನವೂ ಕಷ್ಟಪಡುತ್ತಾರೆ. ಆದರೆ ಗುರುತಿಸುವಿಕೆಯ ವಿಷಯಕ್ಕೆ ಬಂದಾಗ, ಅವರು ಯಾವಾಗಲೂ ಹಿಂದುಳಿದಿರುತ್ತಾರೆ.

● ಮಕ್ಕಳಿಗೆ ಶಾಲಾ ಕಾಲೇಜು ಶುಲ್ಕ ಕಟ್ಟುವ ಸಮಯ ಬಂದಾಗ ತಾಯಿ ತನ್ನ ಅಗತ್ಯಗಳನ್ನು ತಾನೇ ಕಡಿಮೆ ಮಾಡಿಕೊಂಡು ಸಹಾಯ ಮಾಡುತ್ತಾಳೆ. ತಾಯಿ ಅವರಿಗೆ ಇಷ್ಟವಾದ ಆಹಾರ ತಯಾರು ಮಾಡಿದರೆ ಮಕ್ಕಳು ಹೆಚ್ಚಾಗಿ ತಿನ್ನಲಿ ಎಂದು ಭಾವಿಸಿ ಅಪ್ಪ ತನಗೆ ಹಸಿವಿಲ್ಲ ಎಂದು ಬೇಗ ಕೈತೊಳೆದುಕೊಳ್ಳುತ್ತಾರೆ.. ಇಬ್ಬರ ತ್ಯಾಗವೂ ಸಮಾನವಾದುದು. ಆದರೆ, ತಂದೆಯ ತ್ಯಾಗದ ಬಗ್ಗೆ ಯಾರೂ ಮಾತನಾಡುವುದಿಲ್ಲ.

● ಹೆತ್ತವರಿಗೆ ವಯಸ್ಸಾದ ಮೇಲೆ, 'ತಾಯಿ ಮನೆಗೆಲಸ ಮಾಡುವುದಕ್ಕೆ ಉಪಯೋಗಕ್ಕೆ ಬರುತ್ತಾಳೆ. ಆದರೆ ಅಪ್ಪ ನಿಷ್ಪ್ರಯೋಜಕ' ಎನ್ನುತ್ತಾರೆ ಮಕ್ಕಳು. ಮೊಮ್ಮಕ್ಕಳನ್ನು ಬೆಳೆಸುವಲ್ಲಿ ಮತ್ತು ಹೊರಗಿನ ಕೆಲಸದಲ್ಲಿ ಅವರ ಪಾತ್ರದ ಬಗ್ಗೆ ಯಾರೂ ಮಾತನಾಡುವುದಿಲ್ಲ.

ಹೀಗೆ ಯಾವಾಗಲೂ ಹಿಂದೆಯೇ ಉಳಿದುಕೊಳ್ಳುವ ತಂದೆಯೇ ಕುಟುಂಬದ ಬೆನ್ನೆಲುಬು. ಅದಕ್ಕೇ ಅವರು ಯಾವಾಗಲೂ ಹಿಂದೆ-ಯೇ ಇರುವುದು. ಬೆನ್ನುಮೂಳೆಯು ನಮ್ಮನ್ನು ನೆಟ್ಟಗೆ ಇಡುತ್ತದೆ. ಹಾಗೆಯೇ ಕುಟುಂಬವನ್ನು ನೆಟ್ಟಗೆ ಇಡುವುದು ತಂದೆಯ ತ್ಯಾಗ. ●




# ಮಾತಾಡದ ತ್ಯಾಗ!



RAMRAJ ©
LITTLE STARS ®
KIDS DHOTIS • SHIRTS • KURTAS
The Brand Trust Report - India Study 2021
Power of Trust
India's Most Trusted Dhotis Brands
Available at Ramraj Showrooms & All leading Textile Shops | Shop Online at www.ramrajcotton.in



Available at Ramraj Showrooms & All leading Textile Shops | Shop Online at www.ramrajcotton.in




Available at Ramraj Showrooms & All leading Textile Shops | Shop Online at www.ramrajcotton.in


The Brand Trust Report - India Study 2021
Power of Trust
India's Most Trusted
Dhotis Brands
Culture India™
TRADITIONAL KURTAS ● DHOTIS
BY
RAMRAJ©
Shop Online @ www.ramrajcotton.in

ನಿಮ್ಮ ಮನೆಗೇ ಬರಬೇಕೇ?

# ಬಿಳುಪು

## ಚಂದಾದಾರರಾಗಿ!



'ಉನ್ನತವಾದ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯ ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

**ವಾರ್ಷಿಕ ಚಂದಾ ರೂ. 200**
**ದ್ವೈವಾರ್ಷಿಕ ಚಂದಾ ರೂ. 380**

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No:1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

**ವಿಳಾಸ :** Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.

**ಫೋನ್ : 0421-4304106, 9842274137.**

## ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಫೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

**ಬ್ಯಾಂಕ್ ಖಾತೆಯ ವಿವರ Venmaii**
**A/C No: 1809135000000299**
**Karur Vysya Bank,Tirupur SR Nagar Branch**
**IFSC Code: KVBL0001809.**



## ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

| ವಾರ್ಷಿಕ ಚಂದಾ | | ದ್ವೈವಾರ್ಷಿಕ ಚಂದಾ | |
|---|---|---|---|
| ರೂ.~~200~~ | ರೂ.125 ಮಾತ್ರ | ರೂ.~~380~~ | ರೂ.250 ಮಾತ್ರ |



## ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

| ವಾರ್ಷಿಕ ಚಂದಾ | | ದ್ವೈವಾರ್ಷಿಕ ಚಂದಾ | |
|---|---|---|---|
| ರೂ.~~200~~ | ರೂ.125 ಮಾತ್ರ | ರೂ.~~380~~ | ರೂ.250 ಮಾತ್ರ |

**ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.**

# ಅರ್ಥ ಮಾಡಿಕೊಳ್ಳುವ ತಂದೆಯಾಗಿರಿ!



ಅಮ್ಮ ಕಾಫಿ ತಂದು ಕೊಟ್ಟಾಗ ಮಗ ಮುಖ ಕಿವುಚಿಕೊಂಡು, 'ಈ ಕಾಫಿಯ ರುಚಿ ಚೆನ್ನಾಗಿಲ್ಲ, ನನಗೆ ಇದನ್ನು ಕುಡಿಯಲು ಇಷ್ಟವಿಲ್ಲ' ಎಂದ. ಅವನು ಮತ್ತೊಂದು ಕಾಫಿ ಪುಡಿಯ ಬ್ರಾಂಡ್ ಹೆಸರನ್ನು ಪ್ರಸ್ತಾಪಿಸಿ, 'ಅದು ಚೆನ್ನಾಗಿರುತ್ತದೆ ಗೊತ್ತಾ?' ಎಂದು ಕೇಳಿದ.

'ಇದರಲ್ಲೇನು ಕೊರತೆ ಇದೆ?' ಎಂದು ತಾಯಿ ಕೇಳಿದಳು. 'ಅದು ಸರಿ ಬಿಡು, ಆ ಕಾಫಿಯನ್ನು ನೀನೆಂದಾದರೂ ಕುಡಿದಿದ್ದರೆ ತಾನೇ?' ಎಂದು ಅಪಹಾಸ್ಯ ಮಾಡಿದ ಮಗ. 'ಕಳೆದ ವಾರ ಕುಡಿದಿದ್ದೆ. ಒಳ್ಳೆ ಸುವಾಸನೆ ಇದೆ, ಅದೆಂಥಾ ರುಚಿ ಅಂತೀಯಾ. ಕುಡಿದ ಮೇಲೆ ತುಂಬಾ ಹೊತ್ತಿನವರೆಗೂ ನಾಲಗೆಯ ಮೇಲೆ ಆ ರುಚಿ ಹಾಗೇ ಇತ್ತು' ಎಂದ ಮಗ. 'ಆ ಕಾಫಿ ಪುಡಿ ಎಲ್ಲ ದುಪ್ಪಟ್ಟು ಬೆಲೆ. ನಮ್ಮ ಕುಟುಂಬಕ್ಕೆ ಅದೆಲ್ಲ ಸರಿ ಬರುವುದಿಲ್ಲ' ಎಂದು ತಾಯಿ ನಿರ್ಣಾಯಕವಾಗಿ ಹೇಳಿದರು.

ಮರುದಿನ ಬೆಳಿಗ್ಗೆ ಮಗನಿಗೆ ಆಶ್ಚರ್ಯ. ಅವನು ಹೇಳಿದ್ದ ಕಾಫಿ ಪುಡಿ ಹಾಕಿ ಅಮ್ಮ ಕಾಫಿ ತಂದು ಕೊಟ್ಟಳು! 'ಬೆಲೆ ಜಾಸ್ತಿ ಅಂತ ಹೇಳಿದ್ದೆ... ಮತ್ತೆ ಇದು ಹೇಗೆ ಬಂತು?' ಎಂದು ಅವನು ಕೇಳಿದ. 'ಅಪ್ಪ ನೀನು ಮಾತನಾಡಿದ್ದನ್ನು ಕೇಳಿಸಿಕೊಂಡಿದ್ದಾರೆ. ನಿನ್ನೆ ರಾತ್ರಿಯೇ ಇದನ್ನು ಕೊಂಡುತಂದರು' ಎಂದಳು ಅಮ್ಮ.

ದುಪ್ಪಟ್ಟು ಖರ್ಚಾದರೂ ಮಗನ ಆಸೆಯೇ ಮುಖ್ಯ ಎಂಬ ಭಾವನೆಯೇ ಅಪ್ಪನ ವಿಶೇಷತೆ! ಮಕ್ಕಳನ್ನು ಅರ್ಥ ಮಾಡಿಕೊಳ್ಳುವ ತಂದೆಯಾಗಿರುವುದು ಹೇಗೆ?

❖ ನಾವು ಅಂದುಕೊಂಡಂತೆ ನಮ್ಮ ಮಕ್ಕಳು ಬೆಳೆಯುವುದಿಲ್ಲ. ಅವರು ನಮ್ಮ ಆಸೆ ಮತ್ತು ಬಯಕೆಗಳನ್ನು ಪೂರೈಸಲು ಅವರು ಹುಟ್ಟಿಲ್ಲ. ತಾವೇನಾಗಬೇಕು ಎಂಬುದರ ಬಗ್ಗೆ ಅವರಿಗೂ ಕನಸುಗಳಿರುತ್ತವೆ. ಆ ಬಗ್ಗೆ ಅವರು ಕೆಲವು ಆಸೆಗಳನ್ನೂ ಹೊಂದಿರುತ್ತಾರೆ. ಅದನ್ನು ಮೊದಲು ಅರ್ಥ ಮಾಡಿಕೊಳ್ಳಿ. ಅವರ ಗುರಿಗಳನ್ನು ಸಾಧಿಸಲು ಅವರಿಗೆ ಸಹಾಯ ಮಾಡಿ.

❖ 'ನನ್ನ ಮಕ್ಕಳು ನಾನು ಬಯಸಿದ ರೀತಿಯಲ್ಲಿ ಬದುಕಿದರೆ ಅವರಿಗೂ ಸಂತೋಷವಾಗುತ್ತದೆ' ಎಂದು ಅವರನ್ನು ಒತ್ತಾಯ ಮಾಡಬೇಡಿ. ಯಾವುದು ಸಂತೋಷ ಎಂಬುದರ ಬಗ್ಗೆಯೇ ಅವರು ವಿಭಿನ್ನ ಆಲೋಚನೆಗಳನ್ನು ಹೊಂದಿರಬಹುದು.

❖ 'ಇದು ನಿಮ್ಮ ಭವಿಷ್ಯಕ್ಕೆ ಉತ್ತಮ' ಎಂದು ಯಾವುದನ್ನೂ ಅವರ ಮೇಲೆ ಹೇರಬೇಡಿ. ಅವರನ್ನು ನಿಯಂತ್ರಿಸಬೇಡಿ. ನೀವು ಅವರ ಸ್ವಾತಂತ್ರ್ಯವನ್ನು ಕಸಿದುಕೊಂಡರೆ, ಅವರು ಸ್ವಲ್ಪಮಟ್ಟಿಗೆ ನಿಮ್ಮಿಂದ ದೂರ ಸರಿಯುತ್ತಾರೆ. ಅವರ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ವಿಶ್ಲೇಷಿಸಿ. ತಪ್ಪಿದ್ದರೆ ಸರಿಪಡಿಸಿ.

❖ ಮಕ್ಕಳು ತೆಗೆದುಕೊಳ್ಳುವ ನಿರ್ಧಾರಗಳನ್ನು ಮತ್ತು ಅವರು ಮಾಡುವ ಆಯ್ಕೆಗಳನ್ನು ಬೆಂಬಲಿಸಿ. ಅವರು ಬೆಳೆದಂತೆ, ಅವರು ತಮ್ಮ ದಾರಿಯಲ್ಲಿ ಅನೇಕ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಎದುರಿಸುತ್ತಾರೆ. ಆ ಸಮಯದಲ್ಲಿ ಅವರು ಮಾರ್ಗದರ್ಶನ ಮತ್ತು ಬೆಂಬಲಕ್ಕಾಗಿ ತಮ್ಮ ತಂದೆಯ ಕಡೆಗೆ ನೋಡುತ್ತಾರೆ. ಅದನ್ನು ಕೊಡಿ. ಅವರು ತಮ್ಮ ದಾರಿಯಲ್ಲಿ ಜಾರಿದರೂ ತಂದೆಯ ಪ್ರೀತಿ ಎಂದಿಗೂ ಕಡಿಮೆಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿ.

❖ ನಾವು ಬೆಳೆದ ಪರಿಸರ ಬೇರೆ ಮತ್ತು ಆ ಕಾಲ ಬೇರೆ. ನಮ್ಮ ಮಕ್ಕಳು ಮತ್ತೊಂದು ಪೀಳಿಗೆಯ ಸಂಕೇತಗಳು. ಅವರು ಈ ಪೀಳಿಗೆಯ ಪ್ರಭಾವವನ್ನು ಹೊಂದಿರುತ್ತಾರೆ. 'ನಾವು ಆ ಕಾಲದಲ್ಲಿ...' ಎಂದು ಒಂದಾನೊಂದು ಕಾಲದ ಕಥೆಯನ್ನು ಅವರ ಮುಂದೆ ಪ್ರಾರಂಭಿಸಬೇಡಿ ಮತ್ತು ಹಿತ ಸಲಹೆ ನೀಡಬೇಡಿ. ಆಧುನಿಕ ಕಾಲದ ಮೌಲ್ಯಗಳೊಂದಿಗೆ ಅವರನ್ನು ಅರ್ಥ ಮಾಡಿಕೊಳ್ಳಿ.

❖ ನಾವು ಕೂಡ 100% ಪರಿಪೂರ್ಣರಲ್ಲ ಮತ್ತು ನಮ್ಮ ಮಕ್ಕಳೂ ಅಲ್ಲ. ನಮ್ಮಲ್ಲಿಲ್ಲದ ಪರಿಪೂರ್ಣತೆಯನ್ನು ಅವರಲ್ಲಿ ನಿರೀಕ್ಷಿಸಬೇಡಿ. ಅವರೂ ತಪ್ಪು ಮಾಡುವರು. 'ತಪ್ಪುಗಳಿಂದ ಅವರನ್ನು ರಕ್ಷಿಸುತ್ತೇನೆ' ಎಂದು ಭಾವಿಸಿ ಅವರನ್ನು ನಿಷ್ಕ್ರಿಯರನ್ನಾಗಿಸಬೇಡಿ ಅಥವಾ ಅವರನ್ನು ಮೊಟಕುಗೊಳಿಸಬೇಡಿ. ಅವರು ತಪ್ಪುಗಳನ್ನು ಮಾಡುವ ಮೂಲಕ ಪಾಠಗಳನ್ನು ಕಲಿಯುತ್ತಾರೆ. ಅವರನ್ನು ಚುಚ್ಚಿ ಮಾತನಾಡಬೇಡಿ. ಬದಲಿಗೆ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಮಾರ್ಗಗಳನ್ನು ಅವರಿಗೆ ತೋರಿಸಿ.

❖ ಬೆಳೆಯುವ ಪರ್ವದಲ್ಲಿ ಅವರು ಅನೇಕ ಕಷ್ಟಕರ ಕ್ಷಣಗಳನ್ನು ಎದುರಿಸುತ್ತಾರೆ. ಭಾವನಾತ್ಮಕ ಅಡಚಣೆಗಳು ಕೂಡ ಉಂಟಾಗುತ್ತವೆ. ಪರಿಸರ ಮತ್ತು ಸ್ನೇಹಿತರು ಕೂಡ ಅವರಿಗೆ ಅನೇಕ ಸವಾಲುಗಳನ್ನು ಒಡ್ಡಬಹುದು. ಅವರು ಅದನ್ನು ತಮ್ಮ ಕಾರ್ಯಗಳು ಮತ್ತು ಪದಗಳಲ್ಲಿ ತೋರಿಸುತ್ತಾರೆ. ಆದ್ದರಿಂದ ಕೋಪಗೊಳ್ಳಬೇಡಿ. ಅವರ ಸಮಸ್ಯೆಗಳನ್ನು ಅವರ ದೃಷ್ಟಿಕೋನದಿಂದ ನೋಡಿ. "ನಾನು ನಿನ್ನ ಜೊತೆಯಲ್ಲಿದ್ದೇನೆ" ಎಂದು ಅವರನ್ನು ಅಪ್ಪಿಕೊಳ್ಳಿ. ಅವರು ಮನಸ್ಸಿನಲ್ಲಿರುವುದನ್ನು ತೆರೆದುಕೊಳ್ಳುವಷ್ಟು ಅವರಿಗೆ ಹತ್ತಿರದಲ್ಲಿರಿ.

❖ ಶಾಲೆಗೆ ಹೋಗಲು ಆರಂಭಿಸಿದ ದಿನದಿಂದ ಕಾಲೇಜು ಮುಗಿಸುವವರೆಗೂ ಮಗು ಹಲವು ಒತ್ತಡಗಳನ್ನು ಎದುರಿಸಬೇಕಾಗುತ್ತದೆ. ಇನ್ನು ಕೆಲಸಕ್ಕೆ ಹೋಗಲು ಪ್ರಾರಂಭಿಸಿದಾಗ ವಿಭಿನ್ನ ರೀತಿಯ ಒತ್ತಡ ಬರುತ್ತದೆ. ಇದೆಲ್ಲದರ ನಡುವೆ ನಿಮ್ಮ ಮಕ್ಕಳ ಮೇಲೆ ಅನಗತ್ಯ ನಿರೀಕ್ಷೆಗಳನ್ನು ಹೇರಬೇಡಿ, ಅವರು ಸಾಧಿಸಬಹುದಾದ ಗುರಿಗಳನ್ನು ಅವರೇ ನಿರ್ಣಯಿಸಲಿ. ಅವರು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಂಡು ಅದನ್ನು ಸಾಧಿಸಲು ಅವರಿಗೆ ಮಾರ್ಗದರ್ಶನ ನೀಡಿ. ●

## ಓದುಗರ ಪತ್ರಗಳು!

'ಬಿಳುಪು' ಪತ್ರಿಕೆಯ 'ಹೆಮ್ಮೆ ವಿಶೇಷಾಂಕ'ದ ಎಲ್ಲಾ ಲೇಖನಗಳೂ ಅತ್ಯುತ್ತಮವಾಗಿದ್ದವು. 'ಮನೆಗೂ ದೇಶಕ್ಕೂ ಹೆಮ್ಮೆ ತರುವುದು ಹೇಗೆ?' ಎಂಬುದನ್ನು ಮುಂದಿನ ತಲೆಮಾರಿನವರಿಗೆ ಹೇಳಿಕೊಡೋಣ ಎನ್ನುವ ಸಂಸ್ಥಾಪಕರಾದ ಕೆ.ಆರ್.ನಾಗರಾಜನ್ ಅವರ ನುಡಿಗಳು ಅರ್ಥಪೂರ್ಣವಾದವು.

*– ಕೆ.ರಮೇಶ್, ಐಮಂಗಲ, ಚಿತ್ರದುರ್ಗ.*

ಪ್ರತಿಯೊಬ್ಬರೂ ಹೆಮ್ಮೆಯ ವ್ಯಕ್ತಿಗಳಾಗುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟ 'ಹೆಮ್ಮೆ ವಿಶೇಷಾಂಕ'ದ ಪ್ರತಿ ಪುಟವೂ ಅಭಿನಂದನಾರ್ಹವಾಗಿವೆ. ಒಳ್ಳೆಯ ಚಿಂತನೆಗಳನ್ನು ಬಿತ್ತುವುದರಲ್ಲಿ ರಾಮ್‌ರಾಜ್ ಕಾಟನ್ ಸಂಸ್ಥೆ ವೈಶಿಷ್ಟಪೂರ್ಣವಾದ ಕೆಲಸ ಮಾಡುತ್ತಿದೆ.

*– ಜೀವಾನಂದ, ಚಾಮರಾಜನಗರ.*

ನಾನು ನಿರಂತರವಾಗಿ 'ಬಿಳುಪು' ಸಂಚಿಕೆಗಳನ್ನು ಓದುತ್ತಿದ್ದೇನೆ. ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಈ ಪತ್ರಿಕೆಯ ನಿರಂತರ ಓದುಗಳು ನಾನು ಎಂಬುದೇ ನನಗೆ ಹೆಮ್ಮೆ. ಸಂಪಾದಕರ ನುಡಿ, ಕಥಾ ಸಮಯ, ಹೆಮ್ಮೆಯ ಮೂರು ಜನರು, ಹೆಮ್ಮೆಯ ನುಡಿಗಳು, ಹೆಮ್ಮೆಯೊಳಗೂ ವಿಧೇಯತೆ ಇರಲಿ, ಹೆಮ್ಮೆಯ ಕೆಲಸಗಾರರಾಗಿರಿ ಇತ್ಯಾದಿಯಾದ 'ಹೆಮ್ಮೆ ವಿಶೇಷಾಂಕ'ದಲ್ಲಿರುವ ಎಲ್ಲ ಲೇಖನಗಳೂ ತುಂಬಾ ಚೆನ್ನಾಗಿವೆ. ನಿಮ್ಮೆಲ್ಲರ ಶ್ರಮಕ್ಕೆ ಧನ್ಯವಾದಗಳು.

*– ಕೆ.ಸರಳಾಕುಮಾರಿ, ಗುಮ್ಮಳಾಪುರ.*

'ಹೆಮ್ಮೆ ವಿಶೇಷಾಂಕ'ವನ್ನು ಓದಿ ರೋಮಾಂಚನಗೊಂಡಿದ್ದೇನೆ. ಹೇಗೆ ಹೆಮ್ಮೆಯ ಕೆಲಸಗಾರನಾಗಿಯೂ, ಹೆಮ್ಮೆಯ ಜೀವನ ಸಂಗಾತಿಯಾಗಿಯೂ, ಹೆಮ್ಮೆಯ ಪೋಷಕರಾಗಿಯೂ ಇರಬೇಕೆನ್ನುವುದನ್ನು ತುಂಬಾ ಸ್ಪಷ್ಟವಾಗಿ ವಿವರಿಸಿದ್ದೀರಿ. ಈ ಎಲ್ಲ ಲೇಖನಗಳೂ ಆಕರ್ಷಕವಾಗಿ ಮೂಡಿ ಬಂದಿವೆ. ಈ ನಿಯತಕಾಲಿಕೆಯನ್ನು ಸಿದ್ಧಪಡಿಸುವ ಸಂಪಾದಕ ಮಂಡಳಿಯ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು!

– ಸವಿತಾ ***ಹೊಸಮನಿ***, ಗದಗ್.



# ತಂದೆಯ ಜವಾಬ್ದಾರಿಗಳು!

ಮಗುವನ್ನು ಬೆಳೆಸುವಲ್ಲಿ ತಾಯಿಯಂತೆ ತಂದೆಗೂ ಹಲವಾರು ಜವಾಬ್ದಾರಿಗಳಿವೆ. ತಂದೆ-ತಾಯಿ ಇಬ್ಬರೂ ಕೆಲಸಕ್ಕೆ ಹೋಗುವ ಈ ಆಧುನಿಕ ಯುಗದಲ್ಲಿ ಅಪ್ಪನ ಜವಾಬ್ದಾರಿ ಇನ್ನೂ ಸ್ವಲ್ಪ ಹೆಚ್ಚೇ ಇದೆ. ಸಂಸಾರಕ್ಕೆ ಹಣ ಖರ್ಚು ಮಾಡುವುದನ್ನೂ, ಮಕ್ಕಳಿಗೆ ಶಿಸ್ತು ಕಲಿಸುವುದನ್ನೂ ಮೀರಿ ಅವರ ಕಾಳಜಿ ಬೆಳೆದಿದೆ. ಮಕ್ಕಳೊಂದಿಗೆ ಸಮಯ ಕಳೆಯುವುದು, ಅವರ ಮಾತುಗಳನ್ನು ಕೇಳುವುದು ಮತ್ತು ಅವರಿಗೆ ಉತ್ತಮ ಆದರ್ಶ ವ್ಯಕ್ತಿಯಾಗಿರುವುದು ಇವೆಲ್ಲ ತಂದೆಯ ಜವಾಬ್ದಾರಿಗಳಾಗಿವೆ.

ದೈಹಿಕವಾಗಿ, ಭಾವನಾತ್ಮಕವಾಗಿ ಮತ್ತು ಮಾನಸಿಕವಾಗಿ ಮಕ್ಕಳಿಗೆ ಸಹಾಯ ಮಾಡಬೇಕಾದ ಜವಾಬ್ದಾರಿ ತಂದೆಯ ಮೇಲಿದೆ. ಇದರಿಂದಾಗುವ ಪ್ರಯೋಜನಗಳು ಹಲವು :

❖ ತಾಯಿ ಮತ್ತು ತಂದೆ ಇಬ್ಬರೂ ಪ್ರೀತಿ ತೋರಿಸುವಾಗ, ಮಗು ಬೇಗ ಮಾತನಾಡುವುದು ಮತ್ತು ಇತರರು ಮಾತನಾಡುವುದನ್ನು ಕೇಳುವುದು, ಗಮನಿಸುವುದು... ಎಲ್ಲವನ್ನೂ ಉತ್ತಮವಾಗಿ ಕಲಿಯುತ್ತದೆ. ಅವರ ಇಂದ್ರಿಯಗಳೂ ಚುರುಕಾಗುತ್ತವೆ. ಎಲ್ಲರೊಂದಿಗೂ ಸುಲಭವಾಗಿ ಬೆರೆಯುವ ಗುಣವನ್ನೂ ಕಲಿಯುತ್ತದೆ.

❖ ಮಕ್ಕಳ ಪಾಲನೆಯಲ್ಲಿ ತಂದೆ ಹೆಚ್ಚಿನ ಕಾಳಜಿ ವಹಿಸಿದರೆ, ಮಕ್ಕಳು ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡುತ್ತಾರೆ. ತಂದೆಯ ಮಾರ್ಗದರ್ಶನದಲ್ಲಿ ಬೆಳೆಯುವ ಮಕ್ಕಳು ತಪ್ಪು ದಾರಿ ಹಿಡಿಯುವ ಸಾಧ್ಯತೆ ಕೂಡ ಕಡಿಮೆ.

❖ ಕುಟುಂಬದ ಎಲ್ಲರೊಂದಿಗೆ ದಯೆಯಿಂದ ನಡೆದುಕೊಳ್ಳುವ ಮತ್ತು ಯಾವುದೇ ಸಮಸ್ಯೆಯನ್ನು ಕೋಪಗೊಳ್ಳದೆ ಪರಿಹರಿಸುವ ತಂದೆಯನ್ನು ನೋಡುತ್ತಾ ಬೆಳೆಯುವ ಮಕ್ಕಳು ಮನೋ ನಿಯಂತ್ರಿತ ಮತ್ತು ಉತ್ಸಾಹಭರಿತ ಸ್ವಭಾವವನ್ನು ಹೊಂದಿರುತ್ತಾರೆ. ಅವರು ತಮ್ಮ ಸ್ನೇಹಿತರೂ ಸೇರಿದಂತೆ ಎಲ್ಲರೊಂದಿಗೂ ಚೆನ್ನಾಗಿ ಬೆರೆಯುತ್ತಾರೆ ಮತ್ತು ಖ್ಯಾತಿಯನ್ನು ಗಳಿಸುತ್ತಾರೆ.

❖ ಆರೋಗ್ಯಕರ ಆಹಾರವನ್ನು ಸೇವಿಸುವುದು, ತಮ್ಮ ದೇಹವನ್ನು ಚೆನ್ನಾಗಿ ನೋಡಿಕೊಳ್ಳುವ ಮತ್ತು ಎಲ್ಲರಿಗೂ ಒಳ್ಳೆಯವರಾಗಿರುವ ತಂದೆಯನ್ನು ಮಾದರಿಯಾಗಿ ಹೊಂದಿರುವ ಮಕ್ಕಳು ಕೂಡ ಆರೋಗ್ಯಕರ ಜೀವನವನ್ನು ರೂಢಿಸಿಕೊಳ್ಳುತ್ತಾರೆ. ಅವರ ನಡವಳಿಕೆಯೂ ಅತ್ಯುತ್ತಮವಾಗಿರುತ್ತದೆ.

❖ ತಂದೆ ಸಂಸಾರಕ್ಕಾಗಿ ದುಡಿಯುವುದು ಮಾತ್ರವಲ್ಲದೆ ಮನೆಗೆಲಸವನ್ನೂ ಹಂಚಿಕೊಳ್ಳುವುದನ್ನು ನೋಡುವ ಮಕ್ಕಳು ಎಲ್ಲಾ ಕೆಲಸಗಳ ಕಷ್ಟಗಳನ್ನು ತಿಳಿದಿರುತ್ತಾರೆ. ಅವರು ಕೆಲಸದ ಮಹತ್ವವನ್ನು ಅರ್ಥ ಮಾಡಿಕೊಳ್ಳುತ್ತಾರೆ. ಅವರು ಹಣ ಮತ್ತು ಶ್ರಮವನ್ನು ಗೌರವಿಸಲು ಕಲಿಯುತ್ತಾರೆ. ಅವರು ಎಲ್ಲ ಜನರನ್ನೂ ಸಮಾನವಾಗಿ ಕಾಣುತ್ತಾರೆ ಮತ್ತು ಎಲ್ಲರಿಗೂ ಗೌರವವನ್ನು ನೀಡುತ್ತಾರೆ.

❖ ಒಂದು ನಾಣ್ಯಕ್ಕೆ ಎರಡು ಬದಿಗಳಿರುವಂತೆಯೇ, ಯಾವುದೇ ವಿಷಯ ಅಥವಾ ಸನ್ನಿವೇಶಕ್ಕೆ ಒಂದಕ್ಕಿಂತ ಹೆಚ್ಚು ಕೋನಗಳಿರಬಹುದು. ಒಬ್ಬ ವ್ಯಕ್ತಿಯು ತಪ್ಪು ಎಂದು ನೋಡುವುದು ಇನ್ನೊಬ್ಬರಿಗೆ ಸರಿ ಎಂದು ತೋರಬಹುದು. ಅಂತಹ ಕೋನಗಳಿಂದ ಎಲ್ಲವನ್ನೂ ವಿಶ್ಲೇಷಿಸಲು ತಿಳಿದಿರುವ ತಂದೆಯಿಂದ ಮಾರ್ಗದರ್ಶನ ಪಡೆದ ಮಕ್ಕಳು ಜೀವನದ ನಿಯಮಗಳನ್ನು ಸುಲಭವಾಗಿ ಕಲಿಯುತ್ತಾರೆ. ಯಾವುದೇ ಸಮಸ್ಯೆಗೆ ಅವರು ಸುಲಭವಾಗಿ ಪರಿಹಾರ ಕಂಡುಕೊಳ್ಳುತ್ತಾರೆ.

❖ ಜಾಗರೂಕತೆಯಿಂದ ಜೋಪಾನ ಮಾಡುವ ಪ್ರೀತಿ ತಾಯಿಯದು. ಮಕ್ಕಳು ಏನಾದರೂ ಹೊಸದನ್ನು ಪ್ರಯತ್ನಿಸಿದಾಗ, 'ಅದು ಬೇಡ' ಎಂದು ತಾಯಿ ತಡೆಯಲು ಕಾರಣ, ಮಗುವಿಗೆ ಏನೂ ಆಗಬಾರದು ಎಂಬ ಕಾಳಜಿಯೇ ಆಗಿದೆ. ಆದರೆ ಕಷ್ಟಪಟ್ಟು ಪ್ರಯತ್ನ ಮಾಡಿದರೆ ಮಾತ್ರವೇ ಎಲ್ಲವನ್ನೂ ಕಲಿಯಬಹುದು ಎಂಬುದು ಅಪ್ಪನ ಧೋರಣೆ. ಮಕ್ಕಳ ಪ್ರಯತ್ನ ಮತ್ತು ಆಸಕ್ತಿಗೆ ಅಣೆಕಟ್ಟು ಕಟ್ಟಬಾರದ ಜವಾಬ್ದಾರಿಯೂ ತಂದೆಯೇ ಆಗಿದೆ.

❖ ತಂದೆ ತನ್ನ ಮಕ್ಕಳಿಗೆ ಮೊದಲು ವಿಶ್ವಾಸಾರ್ಹ ಸ್ನೇಹಿತನಾಗಿರ ಬೇಕು. ಯಾವುದನ್ನೇ ಆಗಲಿ ತಾಳ್ಮೆಯಿಂದ ಕೇಳುವ, ಅವರ ಗೊಂದಲಗಳನ್ನು ಪರಿಹರಿಸುವ, ಅವರಿಗೆ ಮಾರ್ಗದರ್ಶನ ಮಾಡುವ ತಂದೆಯನ್ನು ಸ್ನೇಹಿತನನ್ನಾಗಿ ಪಡೆದವರೇ ಧನ್ಯರು. ●

# ಅಕ್ಕರೆಯ ಅಪ್ಪ!

ಅಮ್ಮ, ಅಪ್ಪ, ಸಹೋದರ, ಸಹೋದರಿ, ಅಜ್ಜ, ಅಜ್ಜಿ, ಚಿಕ್ಕಮ್ಮ, ಚಿಕ್ಕಪ್ಪ ಹೀಗೆ ಎಲ್ಲಾ ಸಂಬಂಧಗಳು ಮತ್ತು ಆ ಸಂಬಂಧಗಳಿಗೆ ತಕ್ಕ ಭಾವನೆಗಳೇ ನಮ್ಮ ಜೀವನದ ಮೂಲವಾಗಿದೆ. ಗರ್ಭದಲ್ಲಿರುವ ತಾಯಿ ಮತ್ತು ಮಗುವಿನ ನಡುವಿನ ಬಂಧವು ಹೊಕ್ಕುಳ ಬಳ್ಳಿ ಸಂಬಂಧವನ್ನು ಹೊಂದಿದ್ದರೆ, ತಂದೆ ಮತ್ತು ಮಗುವಿನ ನಡುವಿನ ಬಂಧವು ಭಾವನೆಗಳಿಂದ ಬಂಧಿಸಲ್ಪಟ್ಟಿರುತ್ತದೆ.

ತಂದೆ ಎನ್ನುವ ಸಂಬಂಧ ಸರಿಯಾಗಿದ್ದರೆ ಮಕ್ಕಳ ಬದುಕು ಪ್ರಕಾಶಮಾನವಾಗಿರುತ್ತದೆ. ಮಕ್ಕಳ ಗುಣಲಕ್ಷಣಗಳು ಮತ್ತು ನಡವಳಿಕೆಗೆ ತಂದೆಯೇ ಮಾದರಿಯಾಗಿರುತ್ತಾರೆ. ತಂದೆಯೊಂದಿಗೆ ಕೈ ಹಿಡಿದು ನಡೆಯುವ ಅನುಭವವನ್ನು ಅವರು ನೀಡುವ ಬೇರೆ ಯಾವುದೇ ಉಡುಗೊರೆಯೊಂದಿಗೆ ಹೋಲಿಸಲಾಗುವುದಿಲ್ಲ. ತಂದೆ ಉಪ್ಪಿನ ಮೂಟೆಯಂತೆ ಮಗುವನ್ನು ಬೆನ್ನ ಮೇಲೆ ಹೊತ್ತುಕೊಂಡಾಗ ಮಗುವಿನ ಮುಖದಲ್ಲಿ ಸಂತಸ ಮೂಡುತ್ತದೆ. ಅಪ್ಪನ ಕೈ ಹಿಡಿದು ನಡೆದರೆ ಮಗುವಿನ ಚಿಂತೆಗಳೆಲ್ಲ ಮರೆತು ಹೋಗುತ್ತವೆ. ಮಕ್ಕಳು ಅಳುತ್ತಿದ್ದರೆ ನಾನಿದ್ದೇನೆ, ಯಾವುದಕ್ಕೂ ಚಿಂತಿಸಬೇಡಿ ಎಂದು ಅಪ್ಪ ಭರವಸೆ ನೀಡುತ್ತಾರೆ. ಅಪ್ಪ ಮಕ್ಕಳಿಗಾಗಿ ತಾನು ನೆರಳಾಗುತ್ತಾನೆ, ಗಾಳಿಯ ವಿರುದ್ಧ ಹೋರಾಡಲು ಅವನು ಶಕ್ತಿಯನ್ನು ನೀಡುತ್ತಾನೆ. ಕಾಳಜಿಯುಳ್ಳ ತಂದೆ ಸಮಸ್ಯೆಗಳ ವಿರುದ್ಧ ಈ ಜಿ ಜಯಿಸುವುದು ಹೇಗೆ ಎಂಬುದನ್ನು ಕಲಿಸುತ್ತಾನೆ.

ಕಾಳಜಿಯುಳ್ಳ ತಂದೆ ತನ್ನ ಮಗುವನ್ನು ಅನುದಿನವೂ ಮುದ್ದಿಸಲೇ ಬೇಕೆಂದೇನೂ ಇಲ್ಲ. ಅವರು ಒಂದು ಮುತ್ತು ಕೂಡ ಕೊಡದಿರಬಹುದು, ತಾಯಿಯಂತೆ ಮುದ್ದಾಡದಿರಬಹುದು. ಆದರೆ ಅವರ ಹೃದಯದಲ್ಲಿ ಪ್ರೀತಿ ತುಂಬಿರುತ್ತದೆ. ಆ ಪ್ರೀತಿ ಆಳವಾದದ್ದು. ಬಹುಪಾಲು ಅದು ರಹಸ್ಯವಾಗಿಯೇ ಇರುತ್ತದೆ. ಕೆಲವೊಮ್ಮೆ ಅಪ್ಪ ಕಟ್ಟುನಿಟ್ಟಾಗಿದ್ದರೂ, ಅದು ಮಗುವಿನ ಹಿತದೃಷ್ಟಿಯಿಂದ ಕೂಡಿರುತ್ತದೆ. ಆದರೆ ಮಕ್ಕಳು ಅನಾರೋಗ್ಯದಿಂದ ಬಳಲುತ್ತಿದ್ದರೆ, ಅವರು ಗಾಭರಿಯಾಗುತ್ತಾರೆ. ಊಟ ಮಾಡದೆ ನಿದ್ದೆ ಮಾಡಿದರೆ ಮತ್ತೆ ಮಕ್ಕಳನ್ನು ಎಬ್ಬಿಸಿ ಊಟ ಮಾಡಿಸಿ ಮಲಗಿಸುವಂತೆ ಅಮ್ಮನಿಗೆ ತಾಕೀತು ಮಾಡುತ್ತಾರೆ.

ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಪುಸ್ತಕದಲ್ಲಿರುವ ಪಾಠ ಹೇಳಿಕೊಟ್ಟರೆ, ತಂದೆ ಮಕ್ಕಳಿಗೆ ಜೀವನದ ಎಲ್ಲಾ ಪಾಠಗಳನ್ನೂ ಹೇಳಿಕೊಡುತ್ತಾರೆ. ಮಕ್ಕಳಿಗೆ ಅವರಲ್ಲಿರುವ ಪ್ರತಿಭೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ಮುನ್ನಡೆಯಲು ಮಾರ್ಗದರ್ಶನ ನೀಡುತ್ತಾರೆ. ನೀವು ವೈಫಲ್ಯದಿಂದ ಬೇಸತ್ತಾಗ, ಅವರು ನಿಮ್ಮನ್ನು ಹುರಿದುಂಬಿಸುತ್ತಾರೆ ಮತ್ತು ನಿಮ್ಮನ್ನು ಗೆಲುವಿನ ಹಾದಿಯಲ್ಲಿ ಮುಂದೆ ಸಾಗುವಂತೆ ಮಾಡುತ್ತಾರೆ. ಅವರು ಗೆಲ್ಲಲು ಅಪ್ಪನ ಒಂದು ಮಾತು ಸಾಕು. ತಂದೆ ಯಾವಾಗಲೂ ತಮ್ಮ ಮಕ್ಕಳಿಗೆ ಒಳ್ಳೆಯದನ್ನೇ ಬಯಸುತ್ತಾರೆ.

ಮಗುವಿನ ರಕ್ಷಣೆಯ ಮೊದಲ ಕವಚ ತಂದೆಯದೇ ಆಗಿರುತ್ತದೆ. ದೇಶದ ಪ್ರಧಾನಿಗೆ ಒದಗಿಸುವ ಪೊಲೀಸ್ ರಕ್ಷಣೆಗಿಂತ ಇದು ಬಲಿಷ್ಠವಾಗಿರುತ್ತದೆ. 'ಇದು ನನ್ನ ಮಗುವಿಗೆ ಸರಿಯಾಗಿರುತ್ತದೆ' ಎಂದು ತಂದೆ ಭಾವಿಸುವ ವಿಷಯಗಳು ಮಾತ್ರ ಆ ಸುರಕ್ಷತಾ ವಲಯವನ್ನು ದಾಟಬಹುದು. ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದ್ದು ಎಂಬುದನ್ನು ಗುರುತಿಸಿ ತಂದೆ ಅವರಿಗೆ ಮಾರ್ಗದರ್ಶನ ಮಾಡುವರು. ತಪ್ಪು ಆಯ್ಕೆಗಳನ್ನು ಮಾಡುವ ಅಪಾಯಗಳನ್ನು ನಿಮಗೆ ಅರ್ಥ ಮಾಡಿಕೊಳ್ಳುವರು. ಮಗುವಿಗೆ ಮಕ್ಕಳಿಗೆ ಒಳ್ಳೆಯ ಹೆಸರು ಬರಲು ತಂದೆಯ ಮಾರ್ಗದರ್ಶನವೇ ಮೊದಲ ಕಾರಣ.

ತಂದೆಯುಷ್ಟು ಪ್ರೋತ್ಸಾಹದಾಯಕ ಒಡನಾಟವನ್ನು ನೀವು ಬೇರಾರಲ್ಲೂ ಕಾಣಲು ಸಾಧ್ಯವಿಲ್ಲ. ಮಕ್ಕಳ ಯಶಸ್ಸಿನ ಹೆಮ್ಮೆ ಅವರ ಮುಖದಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತದೆ. ತಂದೆ ಹೇಳಿದ್ದು ಸರಿ ಎಂದು ನಂಬುವ ಮಕ್ಕಳು ಯಾವುದೇ ಅನುಮಾನ ಬಂದರೂ ಅವರ ಬಳಿಗೆ ಓಡುತ್ತಾರೆ. ಏನೇ ಸಮಸ್ಯೆ ಇದ್ದರೂ ಅವರ ಸಲಹೆ ಕೇಳುತ್ತಾರೆ. ಒಬ್ಬ ಒಳ್ಳೆಯ ತಂದೆ ಯಾವಾಗಲೂ ಮಕ್ಕಳಲ್ಲಿ ಭರವಸೆಯ ಬೆಳಕನ್ನು ಹರಡುತ್ತಾರೆ.



# ಮುದ್ದು ಮಗಳ ತಂದೆ!

ಹರಿಣಿ ಅತ್ತಿತ್ತ ತಲೆಯನ್ನು ಆಡಿಸುತ್ತಾ ಏನೇನೋ ಹೇಳುತ್ತಿದ್ದಳು. 'ತಲೆ ಆಡಿಸದೆ ಸುಮ್ಮನೆ ನಿಂತ್ಕೋಮ್ಮಾ. ನಾನು ಬೇಗ ಜಡೆ ಹಾಕಿ ರಿಬ್ಬನ್ ಕಟ್ಟಿಬಿಡ್ತೀನಿ' ಎಂದರು ಅಪ್ಪ. ಅವಳೂ ಗೊಂಬೆಯಂತೆ ಅಲುಗಾಡದೆ ಸುಮ್ಮನೆ ನಿಂತುಕೊಂಡಳು. ಅಮ್ಮ ಇಂದು ಮುಂಜಾನೆಯೇ ಎದ್ದು ಬೇಗ ಕೆಲಸಕ್ಕೆ ಹೋಗಬೇಕಾಗಿತ್ತು. ಇಂದು ಮನೆಗೆಲಸದಾಕೆಯೂ ರಜೆ ತೆಗೆದ್ದುಕೊಂಡಿದ್ದಳು. ಹೀಗಾಗಿ ಐದು ವರ್ಷದ ಹರಿಣಿಯನ್ನು ಶಾಲೆಗೆ ರೆಡಿ ಮಾಡುವ ಜವಾಬ್ದಾರಿ ತಂದೆಯದಾಗಿತ್ತು.

ಜಡೆ ಹಾಕಿ ರಿಬ್ಬನ್ ಕಟ್ಟಿ ಮುಗಿಸಿ, 'ಹೂಂ, ಜಡೆ ಹಾಕಿ ಮುಗೀತು. ಇನ್ನು ಹರಿಣಿ ಕಂದಾ ರೆಡಿ...!' ಎಂದು ಹೇಳುತ್ತಾ ಮುಂದೆ ಬಂದು ನೋಡಿದರು. ಒಂದಷ್ಟು ಕೂದಲು ಮುಂದೆ ಇಣುಕಿ ನೋಡುತ್ತಿತ್ತು. 'ಅಯ್ಯೋ ಜಡೆ ಸರಿಯಾಗಿ ಬಂದಿಲ್ಲ' ಎಂದು ಅಪ್ಪ ಬೇಸರದಿಂದ ಹೇಳಿದರು. ಹರಿಣಿ ಕನ್ನಡಿಯಲ್ಲಿ ತನ್ನ ಮುಖ ಮತ್ತು ತಲೆ ನೋಡಿಕೊಂಡು 'ಇಲ್ಲಪ್ಪಾ, ಈಗ ಇದೇ ಸ್ಟೈಲ್. ಚೆನ್ನಾಗಿಯೇ ಇದೆ" ಎಂದಳು. ಅಪ್ಪನ ಕಣ್ಣುಗಳು ಮಿನುಗಿದವು. ಹರಿಣಿಯನ್ನು ಶಾಲೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದರು.

ಸಾಯಂಕಾಲ ಮಗಳನ್ನು ಕರೆದುಕೊಂಡು ಬರಲು ಶಾಲೆಗೆ ಹೋದ ತಾಯಿ, 'ಇದೇನು ಅವತಾರ ಇದು? ಅಪ್ಪ ಜಡೆ ಹಾಕಿದ್ದು ಹೀಗೇನಾ?' ಎಂದು ಕೋಪದಿಂದ ಕೇಳಿದಳು. ಹರಿಣಿ ನಗುತ್ತಾ, 'ಅಪ್ಪನಿಗೆ ಏನೂ ಅನ್ನಬೇಡ. ಅವರಿಗೆ ತಿಳಿದಂತೆ ಹಾಕಿದ್ದಾರೆ. ನೀನೇನಾದರೂ ಹೇಳಿದರೆ ಅವರಿಗೆ ಬೇಸರವಾಗುತ್ತದೆ' ಎಂದಳು.

ಮಗಳಂದಿರು ತಂದೆಯ ಮೇಲೆ ತೋರಿಸುವ ಪ್ರೀತಿಯಲ್ಲಿ ಸ್ವಲ್ಪ ಅಧಿಕಾರ ಮತ್ತು ಹಕ್ಕು ಬೆರೆತೇ ಇರುತ್ತದೆ. 'ನೀನು ನನಗಿಂತ ಹೆಚ್ಚು ಪ್ರೀತಿಯನ್ನು ಬೇರೆ ಯಾರಿಗೂ ತೋರಿಸಬಾರದು' ಎಂಬ ಅಧಿಕಾರ. 'ನೀನು ಏನು ಮಾಡಿದರೂ ಮೊದಲು ನನಗೇ ಮಾಡಬೇಕು' ಎಂಬ ಹಕ್ಕನ್ನು ಅವರು ಚಲಾಯಿಸುತ್ತಾರೆ.

ಹೆಣ್ಣುಮಕ್ಕಳು ಯಾವಾಗಲೂ ತಂದೆಯ ಮುದ್ದಿನ ಮಕ್ಕಳಾಗಿರುತ್ತಾರೆ. ಅವರು ತಮ್ಮ ಹೆಂಡತಿಗಿಂತ ಹೆಚ್ಚಾಗಿ ತಮ್ಮ ಹೆಣ್ಣುಮಕ್ಕಳನ್ನು ಪ್ರೀತಿಸುತ್ತಾರೆ. ಹೆಣ್ಣು ಮಕ್ಕಳ ಮೇಲೆ ತಾಯಿಯ ಪ್ರೀತಿ ಸ್ವಲ್ಪ ಕಟ್ಟುನಿಟ್ಟಾಗಿರುತ್ತದೆ. ಇದು ಮಗಳ ಯೋಗಕ್ಷೇಮದ ಕಾಳಜಿ. ಆದರೆ ಆ ಕಟ್ಟುನಿಟ್ಟಿನಿಂದಲೇ ಹೆಣ್ಣು ಮಕ್ಕಳು ತಂದೆಯ ಕಡೆ ವಾಲುತ್ತಾರೆ.

ಪುರುಷರು ತಮ್ಮ ಜೀವನದಲ್ಲಿ ಮೂರು ತಾಯಂದಿರನ್ನು ಭೇಟಿಯಾಗುತ್ತಾರೆ. ಮೊದಲನೆಯದು ಜನ್ಮ ನೀಡಿದ ತಾಯಿ, ಎರಡನೆಯದು ತಾಯಿಯಂತೆಯೇ ನೋಡಿಕೊಳ್ಳುವ ಅವರ ಸಹೋದರಿ ಮತ್ತು ಮೂರನೆಯದು ಮಗಳ ರೂಪದಲ್ಲಿರುವ ತಾಯಿ. ಮಗಳ ರೂಪದಲ್ಲಿರುವ ತಾಯಿ ತನ್ನ ತಂದೆಯನ್ನು ಹೆಚ್ಚು ಪ್ರೀತಿಸಲು ಹಲವು ಕಾರಣಗಳಿವೆ.

ತಮ್ಮ ತಂದೆಯೇ ತಾವು ತಮ್ಮ ಜೀವಿತಾವಧಿಯಲ್ಲಿ ಪಡೆದ ಅತ್ಯಂತ ಪ್ರಾಮಾಣಿಕ ಸ್ನೇಹಿತ ಎಂದು ಹೆಣ್ಣುಮಕ್ಕಳು ಭಾವಿಸುತ್ತಾರೆ. ಅವರು ಜಗತ್ತಿಗೆ ಪರಿಚಯವಾದ ದಿನದಿಂದ ಹಿಡಿದು ಅವರ ಬೆಳೆವಣಿಗೆಯ ಪ್ರತಿ ಹಂತದಲ್ಲೂ ಜಗತ್ತನ್ನು ಅವರಿಗೆ ಪರಿಚಯಿಸುವುದು ತಂದೆಯೇ. ಈ ಅವಕಾಶ ಪುತ್ರರಿಗೂ ಇರುತ್ತದೆ. ಆದರೆ ಅಪ್ಪಂದಿರು





ತಮ್ಮ ಮಗನ ಮೇಲೆ ತೋರುವ ಕೋಪವನ್ನು ತಮ್ಮ ಹೆಣ್ಣು ಮಕ್ಕಳ ಮೇಲೆ ತೋರಿಸುವುದಿಲ್ಲ. ಏಕೆಂದರೆ ಹೆಣ್ಣುಮಕ್ಕಳು ತಂದೆ ಹೇಳಿದ್ದನ್ನು ಕೇಳುತ್ತಾರೆ. ಅಪ್ಪಂದಿರು ಕೂಡ ಮಗಳು ಕೇಳಿದ ಯಾವುದನ್ನೂ 'ಸಾಧ್ಯವಿಲ್ಲ' ಎನ್ನುವುದಿಲ್ಲ. ತಂದೆಯಂದಿರು ತಮ್ಮ ಹೆಣ್ಣು ಮಕ್ಕಳನ್ನು ಎಷ್ಟು ಸಾಧ್ಯವೋ ಅಷ್ಟು ಸಂತೋಷದಿಂದ ಬೆಳೆಸುತ್ತಾರೆ.

ಹೆಣ್ಣುಮಕ್ಕಳು ತಮ್ಮ ತಂದೆಯೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಲು ಬಯಸುತ್ತಾರೆ. ಯಾವುದೇ ಪರಿಸ್ಥಿತಿಯಲ್ಲೂ ತಮ್ಮನ್ನು ರಕ್ಷಿಸುವ ಏಕೈಕ ವ್ಯಕ್ತಿ ತಂದೆ ಎಂದು ಹುಡುಗಿಯರು ನಂಬುತ್ತಾರೆ. ಹೊರಗೆಲ್ಲಾದರೂ ಹೋದಾಗ ಎಷ್ಟೇ ತಡವಾದರೂ ಎಷ್ಟು ಸಮಯವಾದರೂ ತಮ್ಮೊಂದಿಗೇ ಕಾದಿದ್ದು, ಮರಳಿ ಮನೆಗೆ ಕರೆತರುವ ರಕ್ಷಕ ತಂದೆ ಎಂದು ಅವರು ನಂಬುತ್ತಾರೆ.

ಹೆಣ್ಣುಮಕ್ಕಳು ಬೆಳೆದಂತೆಲ್ಲಾ ಎದುರಿಸುವ ಗೊಂದಲಗಳನ್ನು ನಿವಾರಿಸಿ, ಏನನ್ನು ತೆಗೆದುಕೊಳ್ಳಬೇಕು ಎಂಬ ಗೊಂದಲದಲ್ಲಿ ಅವರಿಗೆ ಸೂಕ್ತ ಸಲಹೆಗಳನ್ನು ನೀಡುವ ಮಾರ್ಗದರ್ಶಿ ತಂದೆ. ಯಾವುದೇ ಕೆಟ್ಟ ಪರಿಸ್ಥಿತಿಯಿಂದ ಆತ್ಮವಿಶ್ವಾಸದಿಂದ ಪುಟಿದೇಳುವ ಸೂಪರ್ ಹೀರೋ ತಂದೆ.

ತಾಯಂದಿರು ತಮ್ಮ ಮಕ್ಕಳ ಬಗ್ಗೆ ಯಾವಾಗಲೂ ಒಂದು ರೀತಿಯ ಭಯವನ್ನು ಹೊಂದಿರುತ್ತಾರೆ. ಇದು ಕಾಳಜಿಯ ಅಭಿವ್ಯಕ್ತಿಯಾಗಿದೆ. ಆದರೆ ತಂದೆ ಮಾತ್ರ ಧೈರ್ಯ ಕೊಡಬಲ್ಲರು. ಹೆಣ್ಣಿನ ಜೀವನದಲ್ಲಿ ಅನೇಕ ಸಂಬಂಧಗಳು ಬರಬಹುದು ಮತ್ತು ಹೋಗಬಹುದು. ಪ್ರತಿಯೊಬ್ಬರೂ ಪ್ರತಿಯೊಂದು ಸನ್ನಿವೇಶಕ್ಕೆ ತಕ್ಕಂತೆ ಬದಲಾಗುತ್ತಾರೆ. ಆದರೆ ತಾಯಿ ಮತ್ತು ತಂದೆ ತಮ್ಮ ಮಗಳನ್ನು ಕೊನೆಯವರೆಗೂ ಬೇಷರತ್ತಾಗಿ ಪ್ರೀತಿಸುತ್ತಾರೆ.

ತಂದೆ ಎಂದರೆ ಮಗಳ ಜೀವನದಲ್ಲಿ ಒಂದು ಸಂಬಂಧವಷ್ಟೇ ಅಲ್ಲ. ಅವರು ಸಹವರ್ತಿ, ಮಾರ್ಗದರ್ಶಕ, ಶಿಕ್ಷಕ, ರಕ್ಷಕ ಮತ್ತು ಇಂತಹ ಅಸಂಖ್ಯಾತ ಪಾತ್ರಗಳನ್ನು ಹೊಂದಿರುತ್ತಾರೆ. ಅದಕ್ಕಾಗಿಯೇ ಹುಡುಗಿಯರು ತಮ್ಮ ತಂದೆಯನ್ನು ಹೆಚ್ಚು ಪ್ರೀತಿಸುತ್ತಾರೆ. ಹೆಣ್ಣು ಮಗುವಿಗೆ ತನ್ನ ತಂದೆಯಿಂದ ಸರಿಯಾದ ಮಾರ್ಗದರ್ಶನ ಮತ್ತು ಪ್ರೀತಿ ಸಿಗಬೇಕು. ಹುಡುಗಿ ಭೇಟಿಯಾಗುವ ಮೊದಲ ವ್ಯಕ್ತಿ ಅವಳ ತಂದೆ. ಪ್ರತಿಯೊಬ್ಬ ಹುಡುಗಿಯೂ ತನ್ನ ತಂದೆಯಿಂದ ಪುರುಷ ಹೇಗಿರುತ್ತಾನೆ ಎಂಬುದನ್ನು ಕಲಿಯುತ್ತಾಳೆ. ಆದ್ದರಿಂದ ಮಗಳು ಮಗುವಾಗಿರುವಾಗಲೇ ಎಲ್ಲ ರೀತಿಯಲ್ಲೂ ಮಾದರಿ ಜೀವನ ನಡೆಸುವುದು ತಂದೆಯ ಕರ್ತವ್ಯವಾಗಿರುತ್ತದೆ.

'ನಾವು ಕೇಳಿದ್ದು ಸರಿಯೆನಿಸಿದರೆ ಅಪ್ಪ ಒಪ್ಪುತ್ತಾರೆ' ಎಂಬ ಭಾವನೆಯನ್ನು ಮಗಳಲ್ಲಿ ಮೂಡಿಸಬೇಕು. 'ಏನೇ ಹೇಳಿದರೂ, ಎಷ್ಟು ಸಲ ಹೇಳಿದರೂ ನಿನಗೆ ಅರ್ಥವಾಗುವುದಿಲ್ಲ' ಎಂದು ಮಗಳ ಮೇಲೆ ಸಿಟ್ಟಾಗಬೇಡಿ. ಮೊದಲನೆಯದಾಗಿ, ನಿಮ್ಮ ಮಗಳು ಮಾತನಾಡುವುದನ್ನು ನೀವು ಗಮನವಿಟ್ಟು ಕೇಳಬೇಕು. ಅದು ಎಲ್ಲಕ್ಕಿಂತ ಮುಖ್ಯವಾದುದು.

ಹೆಣ್ಣು ಮಕ್ಕಳು ಬೆಳೆದು ದೊಡ್ಡವರಾದಂತೆಲ್ಲಾ ಭಾವುಕರಾಗುತ್ತಾರೆ. ಸಂತೋಷ, ಆತಂಕ, ಕಿರಿಕಿರಿ, ದುಃಖ ಮತ್ತು ಉತ್ಸಾಹದಂತಹ ಭಾವನೆಗಳ ಮಿಶ್ರಣವು ಅವರಲ್ಲಿ ವ್ಯಕ್ತವಾಗುತ್ತದೆ. ಅವರು ಎದುರಿಸುವ ವಿವಿಧ ಅನುಭವಗಳು ಅವರನ್ನು ಗೊಂದಲಗೊಳಿಸುತ್ತವೆ. 'ಏನೇ ಆಗಲಿ ನಮ್ಮ ತಂದೆ ಜೊತೆಗಿರುತ್ತಾರೆ' ಎಂಬ ನಂಬಿಕೆಯನ್ನು ಮಗಳಿಗೆ ಮೂಡಿಸಬೇಕು.

ಯಾವುದೇ ಕಾರಣಕ್ಕೂ ಮಗಳ ಮೇಲೆ ಅಸಮಾಧಾನಗೊಳ್ಳಬೇಡಿ ಮತ್ತು ನಿಮ್ಮ ಕೋಪ ಮತ್ತು ಬೇಸರವನ್ನು ಅವಳ ಮೇಲೆ ಪ್ರದರ್ಶಿಸಬೇಡಿ. ಅವಳು ಎಷ್ಟೇ ದೊಡ್ಡ ತಪ್ಪು ಮಾಡಿದರೂ ಭಾವುಕರಾಗಬೇಡಿ. ಸಮಸ್ಯೆಯ ಪರಿಣಾಮ ಏನು ಮತ್ತು ಪರಿಹಾರ ಏನು ಎಂದು ಯೋಚಿಸಿ ಅದರಂತೆ ನಡೆದುಕೊಳ್ಳಿ. 'ನನ್ನ ತಂದೆಯಂತಹ ಒಳ್ಳೆಯ ಗುಣಗಳುಳ್ಳ ವ್ಯಕ್ತಿ ನನಗೆ ಬೇಕು' ಎಂದು ಮಗಳು ಯೋಚಿಸುವುದೇ ತಂದೆಯ ಯಶಸ್ಸು!



# ಶಾಲೆಯನ್ನು ಪರಿಚಯಿಸಿ!

ಹಲವು ವರ್ಷಗಳಿಂದ ಶಾಲೆಗೆ ಹೋಗುವುದು ಅಭ್ಯಾಸವಾಗಿದ್ದರೂ ಕೂಡ ಬೇಸಿಗೆ ರಜೆ ಮುಗಿದ ಮೇಲೆ ಮತ್ತೆ ಮರಳಿ ಶಾಲೆಗೆ ಹೋಗಲು ಕೆಲವು ಮಕ್ಕಳು ಕಷ್ಟಪಡುತ್ತಾರೆ. ಹೀಗಿರುವಾಗ ಮೊದಲ ಬಾರಿಗೆ ಶಾಲೆಗೆ ಹೋಗುವ ಮಕ್ಕಳ ಬಗ್ಗೆ ಹೇಳುವಂತೆಯೇ ಇಲ್ಲ ಬಿಡಿ. ಅವರ ಭಯವನ್ನು ಹೋಗಲಾಡಿಸುವ ಮತ್ತು ಶಾಲೆಯನ್ನು ಸಂತೋಷದ ಸ್ಥಳವಾಗಿ ಪರಿಚಯಿಸುವ ಜವಾಬ್ದಾರಿ ಪೋಷಕರ ಮೇಲಿದೆ, ಶಿಕ್ಷಕರಿಗೂ ಆ ಜವಾಬ್ದಾರಿ ಇದೆ. ಸಮವಸ್ತ್ರ, ಬ್ಯಾಗ್, ಊಟದ ಡಬ್ಬಿ ಹೀಗೆ ಎಲ್ಲವೂ ಸಿದ್ಧವಾಗಿದ್ದರೂ ಕೆಲವು ತಾಯಂದಿರಿಗೆ ತಮ್ಮ ಮಗುವಿಗೆ ಶಾಲೆ ಇಷ್ಟವಾಗುತ್ತದೋ, ಅದು ಹೊಸ ಗೆಳೆಯರೊಂದಿಗೆ ಬೆರೆಯುತ್ತದೋ, ಅಲ್ಲಿ ಸರಿಯಾಗಿ ಊಟ ಮಾಡುತ್ತದೋ ಇಲ್ಲವೋ ಎಂಬ ಚಿಂತೆ ಕಾಡುತ್ತದೆ. ಇಂತಹ ಭಯಗಳನ್ನು ಪರಿಹರಿಸಲು ಕೆಲವು ಮಾರ್ಗಗಳು ಇದೋ ಇಲ್ಲಿವೆ:

❖ ಮಕ್ಕಳಿಗೆ ಆಹಾರ ನೀಡುವಾಗ, ಅವರು ಹಠ ಹಿಡಿದಾಗ, ಮೊಂಡುತನ ಮಾಡಿದಾಗ ಅಥವಾ ಅವರು ಏನಾದರೂ ಕೆಲಸವನ್ನು ಮಾಡುವಾಗ ನಾಯಿಮರಿಯಂತೆ ನಟಿಸುವ ಮೂಲಕವೋ ಅಥವಾ ಬೇರೇನಾದರೂ ಹೇಳಿಯೋ ಅವರನ್ನು ಹೆದರಿಸಬೇಡಿ. ಮಕ್ಕಳನ್ನು ಬೇರೆಯವರೊಂದಿಗೆ ಆಟವಾಡಲು ಬಿಡದೆ ಬೆಳೆಸುವುದು ಮತ್ತು ಗುಮ್ಮ ಬರುತ್ತದೆ ಎಂದು ಹೆದರಿಸಿ ಅವರ ಮನಸ್ಸಿನಲ್ಲಿ ಯಾವುದೋ ಒಂದು ಭಯದ ಚಿತ್ರಣವನ್ನು ಮೂಡಿಸುವುದು ಇತ್ಯಾದಿಗಳೆಲ್ಲ ಸೇರಿಕೊಂಡು ಅವರ ಮನಸ್ಸಿನಲ್ಲಿ ಶಿಕ್ಷಕರ ಬಗ್ಗೆ ಒಂದು ಭಯ ಮೂಡುತ್ತದೆ.

❖ ತಮಾಷೆಗೂ ಕೂಡ ಶಾಲೆಯ ಬಗ್ಗೆ ಭಯ ಮೂಡುವಂತಹ ಮಾತುಗಳನ್ನು ಅವರ ಬಳಿ ಹೇಳಬೇಡಿ. ಶಾಲೆಯ ಬಗ್ಗೆ ಬೇಸರ ಅಥವಾ ಭಯಾನಕವಾದ ಯಾವ ವಿಷಯವನ್ನೂ ಹೇಳಬೇಡಿ. 'ನೀನು ಹೀಗೇ ಹಠ ಮಾಡುತ್ತಿದ್ದರೆ ನಿನ್ನನ್ನು ಈಗಲೇ ಶಾಲೆಗೆ ಕರೆದುಕೊಂಡು ಹೋಗಿ ಬಿಟ್ಟು ಬಿಡುತ್ತೇನೆ, ನೋಡು. ಅಲ್ಲಿ ಟೀಚರ್ ನಿನಗೆ ಸರಿಯಾಗಿ ಹೊಡೆಯುತ್ತಾರೆ' ಎಂದು ಹೇಳುವುದು ತುಂಬಾ ಅಪಾಯಕಾರಿ. 'ಶಾಲೆಯು ಟಾರ್ಚರ್ ಚೇಂಬರ್‌ನಂತಿದ್ದು, ಶಿಕ್ಷಕರೆಲ್ಲರೂ ಅಲ್ಲಿ ಎಲ್ಲರಿಗೂ ಹೊಡೆಯುತ್ತಾರೆ' ಎಂಬ ಅಭಿಪ್ರಾಯ ಅವರಲ್ಲಿ ಮೂಡುತ್ತದೆ. ಶಿಕ್ಷಕರನ್ನು ಭೇಟಿಯಾಗುವ ಮೊದಲೇ ಅವರ ಬಗ್ಗೆ ಭಯವನ್ನು ಮಕ್ಕಳಲ್ಲಿ ಹುಟ್ಟಿಸಬಾರದು.

❖ ಮಕ್ಕಳು ಶಾಲೆಯ ಬಗ್ಗೆ ಸಂತೋಷದ ಆಲೋಚನೆಗಳನ್ನು ಹೊಂದಿರಬೇಕು. ಅದಕ್ಕಾಗಿ ಅವರಿಗೆ ಶಿಕ್ಷಣದ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳುತ್ತಲೇ ಇರಬೇಕು. 'ಶಾಲೆಗೆ ಹೋಗುವುದು ಒಂದು ಮೋಜಿನ ಹೊಸ ಅನುಭವ. ನಿಮಗೆ ಅಲ್ಲಿ ಅನೇಕ ಸ್ನೇಹಿತರು ಸಿಗುತ್ತಾರೆ. ನೀವು ಅವರೊಂದಿಗೆ ಕುಣಿಯಬಹುದು, ಹಾಡಬಹುದು, ಆಟವಾಡಬಹುದು. ಶಾಲೆಗೆ ಹೋದ ನಂತರ ನೀವು ಬೇಗನೆ ಬೆಳೆಯುತ್ತೀರಿ. ನಾವು ಬೆಳೆದದ್ದು ಕೂಡ ಶಾಲೆಯಲ್ಲೇ. ನೀವು ಸಹ ನಮ್ಮಂತೆ ಬೆಳೆಯುತ್ತೀರಿ' ಎಂಬಂತಹ ಉತ್ಸಾಹದ ಮಾತುಗಳನ್ನು ಅವರಲ್ಲಿ ತುಂಬಬೇಕು.

❖ ಶಾಲೆಯ ಮೊದಲ ದಿನ, ಮಗುವನ್ನು ತರಾತುರಿಯಲ್ಲಿ ಎತ್ತಿಕೊಂಡು ಹೋಗಿ, ಶಾಲೆಯ ಬಾಗಿಲಲ್ಲಿ ಬಿಟ್ಟು, 'ಒಳಗೆ ಹೋಗು' ಎಂದು ಹೇಳಿದರೆ ಹೇಗೆ? ಮಗುವನ್ನು ಬಲವಂತ ಮಾಡಿದಂತಿರುತ್ತದೆ. ಹೆದರಿ ನಿರಾಕರಿಸುತ್ತಾರೆ. ಶಾಲೆ ಆರಂಭವಾಗುವ ಮುನ್ನವೇ ಆಗಾಗ ಶಾಲೆಯ ಬಳಿಗೆ ಕರೆದುಕೊಂಡು ಹೋಗಿ ಅಭ್ಯಾಸ ಮಾಡಿಸಿ. ಆಗ ಶಾಲೆಯ ಬಗ್ಗೆ ಅವರಿಗಿರುವ ಹಿಂಜರಿಕೆ ದೂರವಾಗುತ್ತದೆ ಮತ್ತು ಆಸಕ್ತಿ ಉಂಟಾಗುತ್ತದೆ.

❖ ಮಕ್ಕಳು ಸಾಮಾನ್ಯವಾಗಿ ತಾಯಿಯ ಹತ್ತಿರ ಆತ್ಮೀಯವಾಗಿ ಇರುತ್ತವೆ. ಸ್ವಲ್ಪ ಕಾಲ ತಾಯಿಯಿಂದ ದೂರ ಇರುವುದು ಅವರಿಗೆ ಕಷ್ಟದ ಅನುಭವ. ಅದಕ್ಕಾಗಿಯೇ ಶಾಲೆಯ ಮೊದಲ ದಿನಗಳಲ್ಲಿ, ಅವರು ಇಂತಹ ಅಗಲಿಕೆಯಿಂದ ಅಳುತ್ತಾರೆ. ಅವರನ್ನು ಶಾಲೆಗೆ ಸೇರಿಸುವ ಮೊದಲು ಹೀಗೆ ದೂರ ಇರುವುದನ್ನು ಸ್ವಲ್ಪ ಅಭ್ಯಾಸ ಮಾಡಿಸಿ. ಮಗುವನ್ನು ಜವಾಬ್ದಾರಿಯುತ ವ್ಯಕ್ತಿಯ ಆರೈಕೆಯಲ್ಲಿ ಬಿಟ್ಟು ಕೆಲವು ಗಂಟೆಗಳ ಕಾಲ ಎಲ್ಲಾದರೂ ಹೋಗಿಬನ್ನಿ. 'ಈ ರೀತಿ ಅಗಲುವುದರಿಂದ ಪ್ರೀತಿ ಕಡಿಮೆಯಾಗುವುದಿಲ್ಲ, ಹೆಚ್ಚುತ್ತದೆ' ಎಂಬ ವಿಷಯವನ್ನು ಮಕ್ಕಳಿಗೆ ತಿಳಿಸಿಕೊಡಿ.

❖ ಶಾಲೆ ತೆರೆಯುವ ಮುನ್ನ ಮಕ್ಕಳನ್ನು ಶಾಲಾ ಸಮಯಕ್ಕೆ ಒಗ್ಗಿಸಿ. ಇಷ್ಟಕ್ಕೆ ಮಲಗಿ ತಮಗಿಷ್ಟವಾದ ಸಮಯಕ್ಕೆ ಎದ್ದೇಳುವ ಮಕ್ಕಳನ್ನು ಶಾಲೆಗೆ ಕಳಿಸುವಾಗ ಪಾಲಕರು ಹೆಚ್ಚಿನ ಒತ್ತಡಕ್ಕೆ ಒಳಗಾಗುತ್ತಾರೆ.

❖ ಶಾಲೆಗೆ ಹೋಗುವ ಮೊದಲ ದಿನ ಮಗು ಅತ್ತರೆ ಅದಕ್ಕಾಗಿ ಚಿಂತಿಸಬೇಡಿ, ದಿನವೂ ಅಳುತ್ತದೆ ಎಂದು ತಪ್ಪು ಲೆಕ್ಕಾಚಾರ ಹಾಕಬೇಡಿ. ಸ್ವಲ್ಪ ಹೊತ್ತು ಅತ್ತು ಆಮೇಲೆ ತಾನಾಗಿಯೇ ಸುಮ್ಮನಾಗುತ್ತದೆ. ಶಾಲೆಗೆ ಹೋಗುವಾಗ ಮಗು ಅಳುವುದನ್ನು ದೊಡ್ಡ ವಿಷಯವೆಂಬಂತೆ ಮನೆಯಲ್ಲಿ ಚರ್ಚಿಸಬೇಡಿ. ಹೀಗೆ ದಿನವೂ ಅತ್ತರೆ ನಿನ್ನನ್ನು ಶಿಕ್ಷಿಸುತ್ತೇನೆ ಎಂದು ಮಗುವನ್ನು ಬೆದರಿಸಬೇಡಿ. ಅತ್ತರೂ ಪರವಾಗಿಲ್ಲ, ಮಗುವಿಗೆ ಶಾಲೆಯ ಮೇಲಿನ ಆಸಕ್ತಿ ಕಡಿಮೆಯಾಗದಂತೆ ನೋಡಿಕೊಳ್ಳಿ, ಅಷ್ಟು ಸಾಕು.

❖ ಯಾವುದೋ ಒಂದು ಶಾಲೆಗೆ ಸೇರಿಸಿದರಾಯಿತು, ಎಲ್ಲ ಮಕ್ಕಳಂತೆ ನಮ್ಮ ಮಗುವನ್ನೂ ಶಾಲೆಗೆ ಕಳುಹಿಸಿದರೆ ಆಯಿತು ಎಂಬಂತೆ ಇರಬೇಡಿ. ಜೀವನಶೈಲಿ ಮತ್ತು ಸುರಕ್ಷತೆಯೂ ಮಗುವಿಗೆ ಶಿಕ್ಷಣದಷ್ಟೇ ಮುಖ್ಯವಾಗಿರುತ್ತದೆ. ಮಗುವಿನ ಬಗ್ಗೆ ಹೆಚ್ಚು ಕಾಳಜಿ ವಹಿಸುವ ಶಾಲೆಗೆ ಸೇರಿಸುವುದು ನಿಮ್ಮ ಜವಾಬ್ದಾರಿಯಾಗಿದೆ.

❖ ನಿಮ್ಮ ಮಗು ಶಾಲೆಗೆ ಮೊದಲ ದಿನಕ್ಕೆ ಕಾಲಿಟ್ಟ ಕ್ಷಣದಿಂದಲೇ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಓಡಲು ಆರಂಭಿಸಿದಂತೆ. ಅಲ್ಲಿ ಹೋರಾಡಲು ದೃಢ ಮನಸ್ಸು, ತಾಳ್ಮೆ, ಕಠಿಣ ಪರಿಶ್ರಮ, ಬಿಟ್ಟುಕೊಡುವ ಮನೋಭಾವ, ಅರ್ಥ ಮಾಡಿಕೊಳ್ಳುವ ಮತ್ತು ಸಮಯಕ್ಕೆ ಸರಿಯಾಗಿ ಕಾರ್ಯ ನಿರ್ವಹಿಸುವ ಶಕ್ತಿ, ವೈಫಲ್ಯವನ್ನು ಎದುರಿಸುವ ದೃಢತೆ ಎಲ್ಲವೂ ಇರಬೇಕು. ನೈಸರ್ಗಿಕವಾಗಿಯೇ ಹೀಗೆ ಬೆಳೆಯಲು ನೀವು ಅವರಿಗೆ ಸಹಾಯ ಮಾಡಿ.

❖ ಪ್ರತಿ ದಿನ ಪುಸ್ತಕದ ಚೀಲದಲ್ಲಿ ಸಂಗ್ರಹವಾಗುವ ಅನಗತ್ಯ ಕಸ ಕಾಗದಗಳನ್ನು ಸ್ವಚ್ಛಗೊಳಿಸುವ ಅಭ್ಯಾಸವನ್ನು ಕಲಿಸಿ. ವಾರಕ್ಕೊಮ್ಮೆ ಮಕ್ಕಳ ಪುಸ್ತಕ ಚೀಲಗಳನ್ನು ಖಾಲಿ ಮಾಡಿ ತೊಳೆಯಿರಿ. ಆಹಾರದ ಚೀಲವನ್ನು ಸಾಬೂನು ನೀರಿನಿಂದ ಆಗಾಗ್ಗೆ ತೊಳೆಯಿರಿ.

❖ ನೀರಿನ ಬಾಟಲಿಯನ್ನು ಬ್ರಷ್‌ನಿಂದ ದಿನವೂ ಸ್ವಚ್ಛಗೊಳಿಸಿ ಮತ್ತು ಬೆಚ್ಚಗಿನ ನೀರಿನಿಂದ ತೊಳೆಯಿರಿ. ಕುದಿಯುವ ನೀರಿನಲ್ಲಿ ಮುಚ್ಚಳವನ್ನು ಹಾಕಿ ತೊಳೆಯಿರಿ.

❖ ತೊಳೆಯದ ಸಾಕ್ಸ್‌ಗಳಲ್ಲಿರುವ ಕೊಳಕು ಮತ್ತು ಬೆವರು ಮಗುವಿಗೆ ಸೋಂಕನ್ನು ಉಂಟು ಮಾಡಬಹುದು. ಎಚ್ಚರಿಕೆ ಇರಲಿ. ●


RAMRAJ

# ಬಿಳುಪು

ಭಾವನೆಗಳು

**ಸಂಚಿಕೆ 8 ಸಂಪುಟ 1**
**ಜೂನ್ 2025**

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
**ಕೆ.ಆರ್. ನಾಗರಾಜನ್**

ಲೇಖಕರು
**ತ.ಸೆ. ಜ್ಞಾನವೇಲ್**

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ
**ಡಾ. ತಮಿಳ್ ಸೆಲ್ವಿ**
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
**ತರು ಮೀಡಿಯಾ (ಪ್ರೈ) ಲಿ.,**
10/55, ರಾಜು ಸ್ಟ್ರೀಟ್
ವೆಸ್ಟ್ ಮಾಂಬಳಂ
ಚೆನ್ನೈ 600 033



ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಮುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.



Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604.
Ph: 0421-4304106

# ತಂದೆಯ ಹಿರಿಮೆ!

- ತಾಯಿಯ ಪ್ರೀತಿ ಸಾಗರದ ಅಲೆಯಂತಹುದು. ಅದು ಸದಾ ಕಣ್ಣಿಗೆ ಕಾಣಿಸುತ್ತಲೇ ಇರುತ್ತದೆ. ತಂದೆಯ ಪ್ರೀತಿ ಸಾಗರದ ಮಧ್ಯದಲ್ಲಿರುವ ನಡುಗಲ್ಲಿನಂತಹುದು. ಅದು ಹೊರಗೆ ಕಾಣಿಸುವುದಿಲ್ಲ. ಆದರೆ ಅದರ ಆಳ ಹೆಚ್ಚು.

- ಮಗುವಿಗೆ, ಜಗತ್ತಿನಲ್ಲೇ ಅತ್ಯಂತ ಸುರಕ್ಷಿತ ಸ್ಥಳವೆಂದರೆ ತಂದೆಯ ತೋಳುಗಳ ಪ್ರೀತಿಯ ಅಪ್ಪುಗೆ!

- ಸಾವಿರಾರು ರೂಪಾಯಿಯ ಹಾಸಿಗೆಯ ಮೇಲೆ ಉರುಳಿದರೂ ಬಾರದ ನಿದ್ದೆ ಅಪ್ಪನ ಎದೆಗೆ ಒರಗಿಕೊಂಡರೆ ಸಾಕು, ಬಂದು ಬಿಡುತ್ತದೆ.

- ತಂದೆಯು ದೇವರ ಕೊಟ್ಟ ವರವಲ್ಲ, ದೇವರೇ ತಂದೆಯ ರೂಪದಲ್ಲಿ ದೊರೆತಿರುವ ವರ. ಜೀವ ನೀಡಿದ ತಂದೆಗಿಂತ ದೊಡ್ಡವರು ಈ ಜಗತ್ತಿನಲ್ಲಿ ಯಾರೂ ಇಲ್ಲ.

- ಒಳಗೆ ಸಾವಿರ ಪಟ್ಟು ಪ್ರೀತಿಯನ್ನು ಇಟ್ಟುಕೊಂಡೂ ಹೊರಗೆ ಕಟುವಾಗಿ ವರ್ತಿಸುವ ಏಕೈಕ ಜೀವಿ ತಂದೆ.

- ಕಣ್ಣುಗಳಲ್ಲಿ ಕೋಪ ಮತ್ತು ಹೃದಯದಲ್ಲಿ ವಾತ್ಸಲ್ಯ ಇರುವ ಏಕೈಕ ಬಂಧು ತಂದೆ!

- ಸಾವಿರ ಸಂಬಂಧಗಳಿದ್ದರೂ ತಂದೆ ಎಂಬ ಒಂದು ಸಂಬಂಧವಿಲ್ಲದಿದ್ದರೆ ಅನಾಥರೇ.

- ಅಪ್ಪ ಒಂದು ಅದ್ಭುತ ಪುಸ್ತಕವಿದ್ದಂತೆ. ಅದು ಲಭ್ಯವಿರುವ ವಯಸ್ಸಿನಲ್ಲಿ ನೀವು ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ನೀವು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದಾಗ, ನಿಮಗೆ ಅದು ಅರ್ಥವಾಗುವುದಿಲ್ಲ.

- ದೇವರಿಗೆ ತಂದೆ ಎನ್ನುವುದಕ್ಕಿಂತ ಪವಿತ್ರವಾದ ಹೆಸರು ಬೇರೊಂದು ಇರಲಾರದು.

- ತಂದೆಯೆನ್ನುವ ಚಕ್ರ ತಿರುಗುವುದನ್ನು ನಿಲ್ಲಿಸಿದರೆ, ಕುಟುಂಬದ ರಥ ಚಲಿಸುವುದು ಕಷ್ಟ.

- ತಂದೆ ತಾನು ಬಡವನಾಗಿದ್ದರೂ ಮಕ್ಕಳನ್ನು ಬಡವರಾಗಿ ಬೆಳೆಸುವ ಯೋಚನೆಯೇ ಅವರಿಗಿರುವುದಿಲ್ಲ.

- ತಂದೆ ನಮ್ಮ ಅತ್ಯಂತ ವಿಶ್ವಾಸಾರ್ಹ ಮೊದಲ ಸ್ನೇಹಿತ.

- ಅಪ್ಪ ಎನ್ನುವುದೇ ಒಂದು ಮಾಂತ್ರಿಕ ಪದ. ನಮ್ಮ ಮುಖದಲ್ಲಿ ಸಂತೋಷವನ್ನು ನೋಡಿ ತಾನು ಜಗತ್ತನ್ನೇ ಗೆದ್ದಿದ್ದೇನೆ ಎಂದು ಭಾವಿಸುವ ಒಳ್ಳೆಯ ಹೃದಯ ಅದು.

- ನಟನೆ ಗೊತ್ತಿಲ್ಲದ ಅಪ್ಪನೇ ನಿಜವಾದ ಹೀರೋ. ತಂದೆ ಎಂದರೆ ಅದು ಬರೀ ಪದವಲ್ಲ. ತಂದೆಯೇ ಶಕ್ತಿ, ತಂದೆಯೇ ಭರವಸೆ.



- ತಂದೆಯ ಪ್ರೀತಿಯಲ್ಲಿ ಬೆಳೆಯುವ ಮಗನೇ ತನ್ನ ಮಗನ ಪ್ರೀತಿಗೂ ಪಾತ್ರನಾಗುತ್ತಾನೆ.

- ಹೆಚ್ಚು ವಾತನಾಡದ ಸುಂದರವಾದ ಸಂಬಂಧವೇ ತಂದೆ. ಸಾವಿರ ಸಂಬಂಧಗಳಲ್ಲಿ ತಂದೆಯದ್ದೇ ಶ್ರೇಷ್ಠ ಸಂಬಂಧ.

- ಮಗನು ತನ್ನ ಮೇಲೆ ನಂಬಿಕೆಯಿಲ್ಲದೆ ಅಲೆದಾಡಿದರೂ, ತಂದೆ ಅವನ ಮೇಲೆ ನಂಬಿಕೆ ಇಟ್ಟು ಅವನನ್ನು ವಿಜಯಶಾಲಿಯನ್ನಾಗಿ ಮಾಡಬಹುದು.



- ನಾವು ಬಯಸಿದ ಎಲ್ಲವನ್ನೂ ನೀಡುವ ಏಕೈಕ ಸಂಬಂಧ ತಂದೆ!

- ನೋವಾಗದ ಹಾಗೆ ಹೊಡೆದು ನಿದ್ದೆ ಮಾಡಿಸುವವಳು ಅಮ್ಮ. ನೋವಾಗುವಂತೆ ಹೊಡೆದು ನಿದ್ರೆ ಮಾಡದೆ ತವಕಿಸುವವರು ಅಪ್ಪ.

- ಎಲ್ಲ ಅಪ್ಪಂದಿರೂ ರಾಜರಲ್ಲ. ಆದರೆ ಎಲ್ಲಾ ಮಕ್ಕಳು ತಮ್ಮ ತಂದೆಯ ರಾಜಕುಮಾರ ಮತ್ತು ರಾಜಕುಮಾರಿಯಾಗಿಯೇ ಬೆಳೆಯುತ್ತಾರೆ.

- ನಮ್ಮ ಕಾಲ ಮೇಲೆ ನಾವು ನಿಂತಾಗ ಮಾತ್ರ ತಿಳಿಯುತ್ತದೆ, ಇಷ್ಟು ದಿನ ನಮ್ಮನ್ನು ಹೊತ್ತು ಕೊಂಡಿದ್ದ 'ಅಪ್ಪ'ನಿಗೆ ಹೇಗೆ ನೋವಾಗಿರಬಹುದು ಎಂಬುದು.

- ತಾನು ಅನುಭವಿಸಿದ ಕಷ್ಟಗಳನ್ನು ತನ್ನ ಮಕ್ಕಳು ಎಂದೂ ಅನುಭವಿಸಬಾರದು ಎಂದು ತಂದೆಯ ಹೃದಯ ತವಕಿಸುತ್ತದೆ.

- ನಿನಗಾಗಿ ನಾನಿದ್ದೇನೆ ಎಂದು ಎಷ್ಟು ಜನ ಹೇಳಿದರೂ ತಂದೆ ಹೇಳುವ ಆ ಮಾತಿಗೆ ಈಡಾಗಿರುವುದಿಲ್ಲ.

- ಕುಟುಂಬದ ಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡು, ತನ್ನ ಮಗ ಮತ್ತು ಮಗಳ ಬಗ್ಗೆ ಮಾತ್ರ ಯೋಚಿಸುತ್ತಾ ತಿರುಗುವ ಪ್ರತಿಯೊಬ್ಬ ತಂದೆಯೂ ಈ ಜಗತ್ತಿನಲ್ಲಿ ಪ್ರೀತಿಯನ್ನು ಹರಡುತ್ತಾರೆ.

- ಒಬ್ಬ ಹುಡುಗಿಯ ಜೀವನದಲ್ಲಿ ಅತ್ಯಂತ ಸಂತೋಷದ ದಿನಗಳು ಅವಳ ತಂದೆಯೊಂದಿಗೆ ಕಳೆದ ದಿನಗಳೇ ಆಗಿರುತ್ತವೆ!

- ತಂದೆಯಂದಿರು ಯಾವಾಗಲೂ ತಮ್ಮ ಮಗಳ ವಾತ್ಸಲ್ಯಕ್ಕೆ ಗುಲಾಮರು. ಹೆಣ್ಣು ಮಕ್ಕಳು ಯಾವಾಗಲೂ ತಂದೆಯ ವಾತ್ಸಲ್ಯಕ್ಕಾಗಿ ಹಂಬಲಿಸುತ್ತಾರೆ.

- ಪ್ರತಿಯೊಬ್ಬ ಮಹಿಳೆ ತನ್ನ ಗಂಡನಿಗೆ ರಾಣಿಯಾಗದಿರಬಹುದು, ಆದರೆ ಪ್ರತಿ ಹುಡುಗಿಯೂ ತನ್ನ ತಂದೆಗೆ ರಾಜಕುಮಾರಿಯೇ ಆಗಿರುತ್ತಾಳೆ.

- ತನ್ನ ತಲೆಯ ಮೇಲೆ ಹೊತ್ತುಕೊಂಡು ಸಂತೋಷ ಪಡುವ ತಂದೆ ತಲೆ ತಗ್ಗಿಸುವಂತೆ ನಾವು ಒಮ್ಮೆಯೂ ನಡೆದುಕೊಳ್ಳಬಾರದು!

- ತಾಯಿ ತಾನು ಕಂಡ ಜಗತ್ತನ್ನು ತನ್ನ ಮಕ್ಕಳೂ ನೋಡಬೇಕೆಂದು ಬಯಸುತ್ತಾಳೆ, ಆದರೆ ಒಬ್ಬ ತಂದೆ ತನ್ನ ಮಗು ತಾನು ನೋಡದ ಜಗತ್ತನ್ನು ನೋಡಬೇಕೆಂದು ಬಯಸುತ್ತಾನೆ.

- ಅಪ್ಪಾ... ಅದು ಬರೀ ಪದವಲ್ಲ, ನಮ್ಮ ಬದುಕು!

- ತನ್ನ ಹೆಂಡತಿಗೆ ಅದು ಇಷ್ಟ, ಮಗನಿಗೆ ಇದು ಇಷ್ಟ, ಮಗಳಿಗೆ ಅದು ಇಷ್ಟ... ಎಂದೆಲ್ಲ ಯೋಚಿಸುವ ತಂದೆಗೆ ತನಗೇನು ಇಷ್ಟ ಎಂಬುದೆ ಮರೆತು ಹೋಗಿರುತ್ತದೆ!

- ಪ್ರಕೃತಿಯ ಸೃಷ್ಟಿಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದದ್ದು ತಂದೆಯ ಹೃದಯ!



# ಮೊದಲ ಸಲ ತಂದೆಯಾಗುವಾಗ...!

ಪ್ರಸವ ಕೋಣೆಯ ಬಾಗಿಲಲ್ಲಿ ತಪಸ್ಸಿನಿಂದ ಕಾಯುತ್ತಾ ನಿಂತಿದ್ದು, ಮೊದಲ ಬಾರಿಗೆ ತನ್ನ ಮಗುವಿನ ಅಳುಗೊರಳನ್ನು ಕೇಳಿ, ಕೆಲವೇ ನಿಮಿಷಗಳಲ್ಲಿ ಎಳೆಯ ಚಿಗುರಿನಂತಹ ತನ್ನ ಹಸುಗೂಸನ್ನು ಕೈಗಳಲ್ಲಿ ಹಿಡಿದು ಕೊಳ್ಳುವ ಆ ಕ್ಷಣದಲ್ಲಿ ಒಬ್ಬ ವ್ಯಕ್ತಿ ತಂದೆ ಎನ್ನುವ ಭಾವನೆಯನ್ನು ಮೊದಲ ಸಲ ಅನುಭವಿಸುತ್ತಾನೆ. ಆದರೆ ಸತ್ಯವೇನೆಂದರೆ ಪ್ರತಿಯೊಬ್ಬ ಪುರುಷನೂ ತನ್ನ ಹೆಂಡತಿ ಗರ್ಭಿಣಿಯಾದಾಗಲೇ ತಂದೆಯಾಗಿರುತ್ತಾನೆ. ಮೊದಲ ಬಾರಿಗೆ ತಂದೆಯಾದಾಗ ಅನೇಕ ಜನರು ಭಯ ಮತ್ತು ಆತಂಕವನ್ನು ಅನುಭವಿಸುತ್ತಾರೆ. ಹೊಸ ಮತ್ತು ಆಸಕ್ತಿದಾಯಕ ಜಗತ್ತನ್ನು ಪ್ರವೇಶಿಸುವ ಭಾವನೆ ಅವರಲ್ಲಿ ಇರುತ್ತದೆ. ಇವೆಲ್ಲಾ ಅನಗತ್ಯ ಭಯಗಳು. ನಿಮಗಿಂತ ಮೊದಲು ಈ ಜಗತ್ತಿನಲ್ಲಿ ಲಕ್ಷಾಂತರ ಜನರು ತಂದೆಯಾಗಿದ್ದಾರೆ ಮತ್ತು ತಮ್ಮ ಮಕ್ಕಳನ್ನು ಬೆಳೆಸಿದ್ದಾರೆ. ನೀವೂ ಅವರ ಸಾಲಿನಲ್ಲಿ ಸೇರುತ್ತೀರಿ, ಅಷ್ಟೇ. ಯಾರೂ ಮಾಡದ ಕೆಲಸವನ್ನೇನೂ ನೀವು ಮಾಡುತ್ತಿಲ್ಲ.

ಮಕ್ಕಳನ್ನು ಬೆಳೆಸುವುದು ಹೇಗೆ ಎಂಬುದಕ್ಕೆ ಯಾವ ಗೈಡ್ ಪುಸ್ತಕಗಳೂ ಇಲ್ಲ. ಪ್ರತಿ ಮಗುವೂ ತನ್ನದೇ ಆದ ವೈಯಕ್ತಿಕತೆಯನ್ನು ಹೊಂದಿರುತ್ತದೆ. ಹಾಗಾಗಿ ಪ್ರತಿ ಮಗುವನ್ನೂ ಪ್ರತ್ಯೇಕ ಅನುಭವದಲ್ಲೇ ಬೆಳೆಸಬೇಕು. ಆದಾಗ್ಯೂ, ಕೆಲವು ಸಾಮಾನ್ಯ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬಹುದು.

❖ ಗರ್ಭಾವಸ್ಥೆಯ ಮೊದಲ ತ್ರೈಮಾಸಿಕದಲ್ಲಿ ಯಾವ ವೈದ್ಯರನ್ನು ಸಂಪರ್ಕಿಸಬೇಕು ಎಂಬುದನ್ನು ಮೊದಲು ನಿರ್ಧರಿಸಬೇಕು. ಪೌಷ್ಠಿಕಾಂಶದ ಸ್ಥಿತಿ ಮತ್ತು ಹೆಂಡತಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಹೆರಿಗೆಗೆ ಯಾವ ಆಸ್ಪತ್ರೆಗೆ ಹೋಗುತ್ತೀರಿ ಎಂಬುದನ್ನು ಮೊದಲೇ ಯೋಜಿಸಿಕೊಳ್ಳುವುದು ಉತ್ತಮ. ಪ್ರತಿ ಬಾರಿ ವೈದ್ಯರನ್ನು ನೋಡಲು ನಿಮ್ಮ ಹೆಂಡತಿಯೊಂದಿಗೆ ನೀವೂ ಹೋಗುವುದು ಒಳ್ಳೆಯದು.

❖ ಯಾರ ಸಲಹೆಯನ್ನು ಕೇಳಬೇಕು ಎಂದು ತೀರ್ಮಾನಿಸುವಂತೆಯೇ, ಯಾರ ಸಲಹೆಯನ್ನು ತೆಗೆದುಕೊಳ್ಳಬಾರದು ಎಂಬುದನ್ನೂ ಸ್ಪಷ್ಟಪಡಿಸಿಕೊಳ್ಳುವುದು ಒಳ್ಳೆಯದು. ಮೊದಲ ಬಾರಿಗೆ ತಾಯಿಯಾಗುವವರಿಗೆ ಸಲಹೆ ನೀಡಲು ಯಾರಾದರೂ ಇದ್ದೇ ಇರುತ್ತಾರೆ. ಅವರು ಕಾಳಜಿಯಿಂದ ಹೇಳಿದರೂ ಅದರಲ್ಲಿ ಅನೇಕ ತಪ್ಪು ವಿಷಯಗಳಿರಬಹುದು. ಅನುಭವಿ ವೈದ್ಯರ ಸಲಹೆಯನ್ನು ಅನುಸರಿಸುವುದು ಉತ್ತಮ.

❖ ಮಗುವಿನ ಬಗ್ಗೆ ನನಗೆ ಏನೂ ತಿಳಿದಿಲ್ಲವಲ್ಲ, ಮಗುವನ್ನು ಸುರಕ್ಷಿತವಾಗಿ ಎತ್ತಿಕೊಳ್ಳುವುದು ಹೇಗೆ ಎಂಬುದು ಕೂಡ ನನಗೆ ತಿಳಿದಿಲ್ಲವಲ್ಲ ಎಂದೆಲ್ಲ ಚಿಂತಿಸಬೇಡಿ. ತಂದೆಯಾದ ನಂತರವೇ ಎಲ್ಲರೂ ಅದನ್ನು ಕಲಿಯುವುದು. ನೀವೂ ಹಾಗೆಯೇ ಕಲಿಯುವಿರಿ, ಚಿಂತಿಸಬೇಡಿ.

❖ ಗರ್ಭಾವಸ್ಥೆಯಿಂದ ಪ್ರಾರಂಭವಾಗಿ, ಮಗು ಹುಟ್ಟಿ ಬೆಳೆಯುವವರೆಗೂ ಸಾಕಷ್ಟು ಖರ್ಚುಗಳಿರುತ್ತವೆ. ಅನಿರೀಕ್ಷಿತ ಖರ್ಚುಗಳೂ ಬರುತ್ತವೆ. ಎಲ್ಲದಕ್ಕೂ ಹಣ ಹೊಂದಿಸಿಟ್ಟುಕೊಳ್ಳಲು ಯೋಜನೆ ರೂಪಿಸಿ.



❖ ಅನೇಕ ಜನರು ಮಗು ಹುಟ್ಟುವ ಮುಂಚಿತವಾಗಿಯೇ ಅನೇಕ ವಸ್ತುಗಳನ್ನು ಖರೀದಿಸಿಟ್ಟುಕೊಳ್ಳುತ್ತಾರೆ. ಅವರು ಬಟ್ಟೆಗಳನ್ನು ಸಹ ಖರೀದಿಸುತ್ತಾರೆ. ಪ್ರತಿಯೊಂದು ಕುಟುಂಬವೂ ಕೆಲವು ನಂಬಿಕೆಗಳು ಮತ್ತು ಸಂಪ್ರದಾಯಗಳನ್ನು ಹೊಂದಿದೆ. ಅವುಗಳನ್ನೂ ಗೌರವಿಸಿ ಮತ್ತು ಕೆಲವೇ ತಿಂಗಳುಗಳಲ್ಲಿ ಮಗು ಮನೆಯ ತುಂಬಾ ತೆವಳಲು ಪ್ರಾರಂಭಿಸುತ್ತದೆ. ನೀವು ತುಂಬಾ ವಸ್ತುಗಳನ್ನು ಖರೀದಿಸಿ ಮನೆಯಲ್ಲೆಲ್ಲಾ ತುಂಬಿಕೊಂಡಿದ್ದರೆ, ಮಗು ಎಡವಿ ಬೀಳುತ್ತದೆ. ಕಡಿಮೆ ಪೀಠೋಪಕರಣಗಳು ಮತ್ತು ಹೆಚ್ಚು ಸ್ಥಳಾವಕಾಶವಿರುವ ಮನೆ ಮಕ್ಕಳಿಗೆ ಸೂಕ್ತವಾಗಿರುತ್ತದೆ.

❖ ಶೈಶವಾವಸ್ಥೆಯಲ್ಲಿ, ಮಗುವಿನ ಆರೈಕೆಯಲ್ಲಿ ತಂದೆಯ ಪಾತ್ರ ಕಡಿಮೆ. ಆಗ ಮಗುವಿನ ಬಗ್ಗೆ ತಾಯಿ

ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಪ್ರಸವಾ ನಂತರದ ಒತ್ತಡ ಮತ್ತು ಪ್ರಕ್ಷುಬ್ಧ ವಾತಾವರಣ, ಇದರಿಂದ ಉಂಟಾಗುವ ಕಿರಿಕಿರಿಯು ತಾಯಂದಿರನ್ನು ಸಹ ಬಳಲುವಂತೆ ಮಾಡುತ್ತದೆ. ಅದನ್ನು ಅರ್ಥ ಮಾಡಿಕೊಳ್ಳಿ ಮತ್ತು ನಿಮ್ಮ ಸಂಗಾತಿಗೆ ಸಹಾನುಭೂತಿಯಿಂದ ಸಹಾಯ ಮಾಡಿ. ಇತರ ದಿನಗಳಲ್ಲಿ ನೀವು ಹೇಗಿದ್ದೀರಿ ಎಂಬುದು ಮುಖ್ಯವಲ್ಲ, ಈ ಕಷ್ಟದ ಸಮಯದಲ್ಲಿ ನೀವು ತೋರಿದ ನಿಮ್ಮ ಬೆಂಬಲವನ್ನು ನಿಮ್ಮ ಹೆಂಡತಿ ತನ್ನ ಜೀವನದುದ್ದಕ್ಕೂ ನೆನಪಿಸಿಕೊಳ್ಳುತ್ತಾರೆ.

❖ ತಾಯಿಗೆ ಈ ದಿನಗಳಲ್ಲಿ ನಿದ್ರೆ ಮುಖ್ಯವಾಗಿ ಕಳೆದು ಹೋಗುತ್ತದೆ. ಮಗುವಿನ ನಿದ್ರೆಯ ಸಮಯವನ್ನು ಅವಲಂಬಿಸಿ ತಾಯಿ ಮತ್ತು ತಂದೆ ಮಲಗಬಹುದು. ದಿನವಿಡೀ ಮಲಗುವ ಮಗು ಮಧ್ಯರಾತ್ರಿಯಲ್ಲಿ ದೀರ್ಘಕಾಲದವರೆಗೆ ಎಚ್ಚರವಾಗಿರಬಹುದು. ಮಗು ನಿದ್ರಿಸುವಾಗ ತಾಯಿ ಮತ್ತು ತಂದೆ ಸರದಿಯಲ್ಲಿ ಮಲಗುವುದು ಒಂದೇ ಇದಕ್ಕಿರುವ ಮಾರ್ಗವಾಗಿದೆ.

❖ ಇಷ್ಟು ದಿನ ಗಂಡ ಹೆಂಡತಿಯರಾಗಿ ಮಾತ್ರ ಬದುಕುತ್ತಿದ್ದ ಜೀವನ ಶೈಲಿಯನ್ನೇ ಮಗು ತಲೆಕೆಳಗಾಗಿ ಮಾಡಿ ಬಿಡುತ್ತದೆ. ಹೆಂಡತಿ ಮಗುವಿನೊಂದಿಗೆ ಹೆಚ್ಚಿನ ಸಮಯವನ್ನು ಕಳೆಯುವುದರಿಂದ, ತಂದೆ ಬಹುಪಾಲು ಸಮಯವನ್ನು ಒಂಟಿಯಾಗಿಯೇ ಕಳೆಯಬೇಕಾಗಿ ಬರಬಹುದು. ಈ ಒಂಟಿತನಕ್ಕೆ ನೀವು ಒಗ್ಗಿಕೊಳ್ಳಲೇಬೇಕು.

❖ ಮಕ್ಕಳು ಯಾವುದೇ ಕಾರಣವಿಲ್ಲದೆ ಇದ್ದಕ್ಕಿದ್ದಂತೆ ಅಳುತ್ತಾರೆ. ಸಾಂತ್ವನ ಮಾಡಿದರೂ ಮಕ್ಕಳು ಅಳು ನಿಲ್ಲಿಸದಿದ್ದರೆ ಏನು ಮಾಡುವುದು ಎಂದು ಗೊಂದಲ ಉಂಟಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ವೈದ್ಯರ ಬಳಿಗೆ ಹೋಗಲು ಯಾವಾಗಲೂ ಸಿದ್ಧರಾಗಿರಿ.

❖ ತಾಯಿ ಮತ್ತು ಮಗುವಿನ ನಡುವೆ ಒಂದು ಬಾಂಧವ್ಯ ಬೆಸೆಯುವಂತೆಯೇ ತಂದೆ ಮತ್ತು ಮಗುವಿನ ನಡುವೆ ಕೂಡ ಒಂದು ಬಂಧ ಬೆಸೆಯಬೇಕಾದುದು ಮುಖ್ಯ. ಶಿಶುವಿಗೆ ಸ್ಪಷ್ಟವಾಗಿ ನೋಡಲು ಸಾಧ್ಯವಾಗದಿದ್ದರೂ, ಅವರು ತಮ್ಮ ಸುತ್ತಲಿನವರ ವಾಸನೆ, ಧ್ವನಿ ಮತ್ತು ಉಷ್ಣತೆಯನ್ನು ಗ್ರಹಿಸುತ್ತಾರೆ. ಮಗುವನ್ನು ಮುದ್ದಿಸುವುದು, ಆಡಿಸುವುದು, ಹಾಡುವುದು, ಅವರನ್ನು ಸುರಕ್ಷಿತವಾಗಿ ಎತ್ತಿಕೊಳ್ಳುವುದು ಇತ್ಯಾದಿಯಾದ ತಂದೆಯ ಕರ್ತವ್ಯಗಳನ್ನು ಮಾಡಿ. ಇವೆಲ್ಲವುಗಳಿಂದ ಮಗು ನಿಮಗೆ ಅಂಟಿಕೊಳ್ಳುತ್ತದೆ.

❖ ಮಕ್ಕಳ ಬಟ್ಟೆಗಳು, ಆಟಿಕೆಗಳು, ಔಷಧಗಳು ಇತ್ಯಾದಿ ಅನೇಕ ವಸ್ತುಗಳು ಮನೆಯಲ್ಲೆಲ್ಲಾ ಹರಡಿರುತ್ತವೆ. ಇವುಗಳ ಮಧ್ಯದಲ್ಲಿಯೇ ಅಪ್ಪ-ಅಮ್ಮ ಇರಬೇಕಾಗುತ್ತದೆ. ಇವುಗಳಿಗೆ ಒಗ್ಗಿಕೊಳ್ಳಿ.





❖ ಮಗು ಸ್ವಲ್ಪ ಬೆಳೆಯಲು ಪ್ರಾರಂಭಿಸುತ್ತಿದ್ದಂತೆ ಮನೆಯಿಡೀ ತೆವಳಲು ಪ್ರಾರಂಭಿಸುತ್ತದೆ. ಆಗ ಮನೆಯನ್ನು ಮಗುವಿಗೆ ಸುರಕ್ಷಿತವಾಗಿರುವಂತೆ ಇಡುವುದು ತಂದೆಯ ಕರ್ತವ್ಯ. ಮಗು ಹಿಡಿದು ಎಳೆಯಬಹುದಾದ ಎತ್ತರದಲ್ಲಿರುವ ವಸ್ತುಗಳನ್ನು ತೆಗೆದಿಡುವುದು, ಚೂಪಾದ ವಸ್ತುಗಳನ್ನು ತೆಗೆದು ಹಾಕುವುದು, ಬಾಯಿಯೊಳಗೆ ಹಾಕಿಕೊಳ್ಳಬಹುದಾದ ವಸ್ತುಗಳನ್ನು ಅವರ ಕೈಗೆಟುಕದಂತೆ ಎತ್ತಿಡುವುದು, ಗಾಯಗಳಾಗದಂತೆ ನೋಡಿಕೊಳ್ಳುವುದು, ನೆಲವನ್ನು ಸ್ವಚ್ಛವಾಗಿಡಲು ಸಹಕರಿಸುವುದು ಇತ್ಯಾದಿಗಳೆಲ್ಲವೂ ಮುಖ್ಯ.

❖ ಮಗುವಿಗೆ ತಿನ್ನಿಸಲು ಸಹಾಯ ಮಾಡುವುದು. ನೀರು ಕುಡಿಸುವುದು ಇತ್ಯಾದಿಗಳಲ್ಲಿ ತಂದೆಯ ಪಾತ್ರವೂ ಬೇಕಾಗುತ್ತದೆ. ತಿನ್ನಲು ನಿರಾಕರಿಸುವ ಮಗುವನ್ನು ತಮಾಷೆಯಾಗಿ ನಟಿಸಿ ತಿನ್ನುವಂತೆ ಮಾಡಬಹುದು. ಊಟದ ನಂತರ ಮಗುವನ್ನು ಸ್ವಚ್ಛಗೊಳಿಸುವುದು ಮತ್ತು ಮಗುವಿಗೆ ಸ್ನಾನ ಮಾಡಿಸುವಲ್ಲಿ ಸಹಾಯ ಮಾಡುವುದು ಮೊದಲಾದ ಕೆಲಸಗಳು ತಂದೆ ಮತ್ತು ಮಗುವಿನ ಬಾಂಧವ್ಯವನ್ನು ಉತ್ತಮಗೊಳಿಸುತ್ತದೆ.

❖ ನಡೆಯಲು ಕಲಿತ ನಂತರ ಮಗುವನ್ನು ಮೊದಲ ಬಾರಿಗೆ ನಡೆಸಿಕೊಂಡು ಹೊರಗೆ ಕರೆದೊಯ್ಯುವುದು ಆಹ್ಲಾದಕರ ಅನುಭವ. ಈ ಪ್ರಯಾಣದಲ್ಲಿಯೇ ತಂದೆ ಮಗುವಿಗೆ ಮನೆಯ ಹೊರಗಿನ ದೊಡ್ಡ ಜಗತ್ತನ್ನು ಪರಿಚಯಿಸಲು ಪ್ರಾರಂಭಿಸುತ್ತಾನೆ. ಇಂತಹ ಹಲವು ಪ್ರಯಾಣಗಳು ಮತ್ತು ಮಗುವಿನ ಪ್ರಶ್ನೆಗಳಿಗೆ ತಂದೆ ನೀಡುವ ಉತ್ತರಗಳು ಮಗುವಿಗೆ ಹೊಸ ಅನುಭವಗಳನ್ನು ನೀಡುತ್ತವೆ. ತಂದೆ-ಯೂ ಇದರಿಂದ ಹೊಸ ಅನುಭವಗಳನ್ನು ಪಡೆಯುತ್ತಾರೆ.



## ಅವನು ಬೆಳೆದು ಬಿಟ್ಟ!

ಅಮ್ಮನಿಗೆ ಎಲ್ಲವೂ ನಿಗೂಢವಾಗಿತ್ತು. ಮಗ ಕೆಲಸಕ್ಕೆ ಹೋಗಿ ದುಡಿಯಲು ಶುರು ಮಾಡಿ ಏಳೆಂಟು ತಿಂಗಳಾಗಿದೆ. ಆದರೆ, ತನ್ನ ಆದಾಯವನ್ನು ಏನು ಮಾಡುತ್ತಿದ್ದಾನೆ ಎಂದು ತಂದೆ ತಾಯಿಗೆ ತಿಳಿಸಿರಲಿಲ್ಲ. ತಾಯಿ ಕೇಳಲು ಹಿಂಜರಿದರು. 'ಅವನು ಏನಾದರೂ ವೃಥಾ ಖರ್ಚು ಮಾಡಬಹುದು, ಅವನನ್ನೊಂದು ಮಾತು ಕೇಳಿ' ಎಂದು ಗಂಡನನ್ನು ಒತ್ತಾಯಿಸಿದಳು. ಆದರೆ ತಂದೆ, 'ಈಗ ಅವನು ದೊಡ್ಡವನಾಗಿದ್ದಾನೆ, ಅವನು ತಪ್ಪು ಮಾಡುವುದಿಲ್ಲ. ನಾವು ಈಗ ಏನನ್ನೂ ಕೇಳಬಾರದು, ಅವನೇ ಬಂದು ನಮಗೆ ಹೇಳುತ್ತಾನೆ, ಅಲ್ಲಿಯವರೆಗೂ ತಾಳ್ಮೆಯಿಂದ ಕಾಯಿ' ಎಂದರು.

ಒಂದು ವಾರಾಂತ್ಯದ ದಿನ ಮಗ ಬೇಗ ಮನೆಗೆ ಬಂದು ಕಾಲಿಂಗ್ ಬೆಲ್ ಮಾಡಿದ. 'ಹೊರಗೆ ಬಂದು ನೋಡಿ' ಎಂದು ಇಬ್ಬರನ್ನೂ ಹೊರಗೆ ಕರೆದ. ಅಪ್ಪ ಅಮ್ಮ ಹೊರಬಂದಾಗ ಹೊಚ್ಚ ಹೊಸ ಕಾರು ಮನೆಯ ಮುಂದೆ ನಿಂತಿತ್ತು. 'ಇದು ನಿನ್ನ ಹೊಸ ಕಾರಾ?' ತಾಯಿ ಸಂತೋಷದಿಂದ ಮಗನನ್ನು ಕೇಳಿದರು. 'ಇಲ್ಲ ಅಮ್ಮಾ! ಇದು ನಿಮ್ಮ ಕಾರು, ನಾನು ಇದನ್ನು ನಿಮಗಾಗಿ ತಂದಿದ್ದೇನೆ' ಎಂದು ಮಗ ಹೇಳಿದ. 'ನೀವು ಹೇಳಿದ್ದು ಸರಿ. ನಮ್ಮ ಹುಡುಗ ದೊಡ್ಡವನಾಗಿದ್ದಾನೆ' ಎಂದು ತಾಯಿ ತಂದೆಗೆ ಹೇಳಿದರು.



## ಪ್ರೀತಿಯ ತಂದೆ ಸಿಂಹ!

ಸಿಂಹಗಳ ವಿಷಯದಲ್ಲಿ ನೋಡಿದರೆ, ಮರಿಗಳಿಗೆ ಆಹಾರ ನೀಡುವುದರಿಂದ ಹಿಡಿದು ಮರಿಗಳ ಆರೈಕೆಯವರೆಗೂ ಎಲ್ಲವೂ ತಾಯಿ ಸಿಂಹದ್ದೇ ಜವಾಬ್ದಾರಿಯಾಗಿದೆ. ತಂದೆ ಸಿಂಹ ಈ ವಿಷಯದಲ್ಲಿ ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ, ತಂದೆ ಸಿಂಹವೇ ತಾಯಿಯ ಪ್ರೀತಿಯನ್ನು ತೋರಿರುವ ಅತಿಶಯವೊಂದು ಗುಜರಾತಿನಲ್ಲಿ ನಡೆದಿದೆ. ಭಾರತದಲ್ಲಿ ಇಂದಿಗೂ ಸಿಂಹಗಳು ಗುಜರಾತಿನ ಕಾಡುಗಳಲ್ಲಿ ಮಾತ್ರ ಹೆಚ್ಚಾಗಿ ವಾಸಿಸುತ್ತವೆ. ಇಲ್ಲಿನ ಬೇತಿಯಾ ಎಂಬ ಗ್ರಾಮದ ಬಳಿಯ ಕಾಡಿನಲ್ಲಿ 'ಬೇತಿಯಾ ನಾರ್' ಎಂಬ ಗಂಡು ಸಿಂಹಗಳು ವಾಸಿಸುತ್ತಿದೆ. ಇವರ ಸಂಗಾತಿಯಾಗಿದ್ದ ಹೆಣ್ಣು ಸಿಂಹಿಣಿ ಎರಡು ವರ್ಷಗಳ ಹಿಂದೆ ಊರೊಳಗಿನ ಜಮೀನು ಪ್ರವೇಶಿಸಲು ಕಾಡು ದಾಟುತ್ತಿದ್ದಾಗ ವಿದ್ಯುತ್ ಬೇಲಿಗೆ ಸಿಕ್ಕಿ ಹೋಯಿತು. ಈ ಸಿಂಹಗಳಿಗೆ ಮೂರು ಮರಿಗಳು ಮೂರು ತಿಂಗಳ ಹಿಂದೆ ಜನಿಸಿದ್ದವು. ಸಾಮಾನ್ಯವಾಗಿ, ಸಿಂಹಗಳು ಕಾಡಿನಲ್ಲಿ ಗುಂಪುಗಳಾಗಿ ವಾಸಿಸುತ್ತವೆ. ಇಂತಹ ಸಮಯದಲ್ಲಿ, ಗುಂಪಿನಲ್ಲಿರುವ ಇತರ ಸಿಂಹಿಣಿಗಳು ಮರಿಗಳನ್ನು ಸಾಕುತ್ತವೆ. ಆದರೆ ಈ ಗುಂಪಿನಲ್ಲಿ ಬೇರೆ ಸಿಂಹಿಣಿಗಳಿರಲಿಲ್ಲ. ಹಾಗಾಗಿ ಬೆಡಿಯಾ ನಾರ್ ತಾನೇ ಸ್ವತಃ

## ಈಗಲೂ ಅವರು ಕೊಟ್ಟರು!

ತಂದೆ ಕಷ್ಟಪಟ್ಟು ತನ್ನನ್ನು ಓದಿಸುತ್ತಿದ್ದುದರಿಂದ, ಮಗ ಯಾವಾಗಲೂ ತನ್ನ ಇತರ ಅಗತ್ಯಗಳಿಗಾಗಿ ಅಪ್ಪನ ಬಳಿ ಹಣವನ್ನು ಕೇಳಲು ಹಿಂಜರಿಯುತ್ತಿದ್ದ. ತನಗೆ ಸಾವಿರ ರೂಪಾಯಿ ಅಗತ್ಯವಿದ್ದಾಗಲೂ, '500 ರೂಪಾಯಿಗಳಾದರೂ ಸಿಗಬಹುದೇ?' ಎಂದು ಯೋಚಿಸಿ ಯೋಚಿಸಿ ಹಿಂಜರಿಕೆಯಿಂದಲೇ ಕೇಳುತ್ತಿದ್ದ. ಅಪ್ಪ ತನ್ನ ಅಗತ್ಯವನ್ನು ಮನಗಂಡು ಹೇಗೆ ಕೊಡುತ್ತಾರೆ ಎಂದು ಅವನು ಆಶ್ಚರ್ಯ ಪಡುತ್ತಿದ್ದ. ತನಗೆ ಅಗತ್ಯವಿರುವುದನ್ನು ಅರಿತು, ತಾನು ಕೇಳದೆಯೇ ಆಗಾಗ್ಗೆ ಹಣ ನೀಡುವ ತಂದೆಯನ್ನು ನೋಡಿ ಅವನು ಆಶ್ಚರ್ಯಚಕಿತನಾಗುತ್ತಿದ್ದ. ಒಮ್ಮೆ ಅದು ಅವನಿಗೆ ಅರ್ಥವಾಯಿತು. ಅಪ್ಪ ಎಂದೂ ತನಗೆ ಲೆಕ್ಕ ಹಾಕಿ ಹಣ ಕೊಡುವುದಿಲ್ಲ, ಪ್ರೀತಿಯಿಂದ ಕೊಡುತ್ತಿದ್ದಾರೆ ಎಂದು!

ಮಗ ಕೆಲಸಕ್ಕೆ ಸೇರಿಕೊಂಡ ಮೇಲೆ ಮೊದಲ ಸಲ ಊರಿಗೆ ಹಿಂದಿರುಗಿ ಬಂದಿದ್ದ. ರಜೆ ಮುಗಿಸಿ ಹೊರಡುವಾಗ ಅಪ್ಪ 'ಹಣ ಇದೆಯಾ? ಮಗನೇ?' ಎಂದು ಕೇಳಿದರು ಅವನು ತನ್ನ ಪರ್ಸ್ ತೆಗೆದು ಒಳಗಿದ್ದ 500 ರೂಪಾಯಿ ನೋಟುಗಳನ್ನು ತೋರಿಸಿ, ಹೂಂ ಇದೆ ಅಪ್ಪಾ ಎಂದ!. 'ಇರಲಿ, ದಾರಿಯಲ್ಲಿ ಚಿಲ್ಲರೆ ಬೇಕಾಗಬಹುದು. ಇಟ್ಟುಕೋ' ಎಂದು ಹೇಳಿ ತಂದೆ 100 ರೂಪಾಯಿಯ ನೋಟುಗಳನ್ನು ನೀಡಿದರು.

## ಅಪ್ಪ ಬದಲಾಗಲೇ ಇಲ್ಲ!

ಕಾಲೇಜು ಮುಗಿಸಿದ ಮಗ ಕೆಲಸಕ್ಕೆ ಸೇರಿ ಮೊದಲ ತಿಂಗಳ ಸಂಬಳ ತೆಗೆದುಕೊಂಡಿದ್ದ. 40 ಸಾವಿರ ರೂಪಾಯಿಗಳು. ಅಪ್ಪ ಜೀವನ ಪೂರ್ತಿ ಕಷ್ಟ ಪಟ್ಟು ದುಡಿದು ಈಗಷ್ಟೇ ಈ ಮೊತ್ತದ ಸಂಬಳಕ್ಕೆ ತಲುಪಿದ್ದಾರೆ. ಅವನು ಅದನ್ನು ತನ್ನ ಮೊದಲ ತಿಂಗಳಲ್ಲೇ ತೆಗೆದುಕೊಂಡಿದ್ದ. ಅವನು ತನ್ನ ತಂದೆಗೆ ಇದನ್ನು ತಿಳಿಸಲು ಬಯಸಿದ. 'ನಿನಗೆ ಜವಾಬ್ದಾರಿಯೇ ಇಲ್ಲ, ಯಾವಾಗಲೂ ಊರು ಸುತ್ತುತ್ತೀಯಾ', 'ಯಾಕೆ ಇಷ್ಟು ವೇಗವಾಗಿ ಕಾರು ಓಡಿಸುವುದು?' 'ಹೀಗೆ ರಾತ್ರಿ ಲೇಟಾಗಿ ಮನೆಗೆ ಬರುವುದು ಸರಿಯೇ?' ಇತ್ಯಾದಿಯಾಗಿ ಸದಾ ಬೈಯುವ ಅಪ್ಪನಿಗೆ ಈಗ ತನ್ನ ಹಿರಿಮೆ ಏನೆಂಬುದು ತಿಳಿಸಬೇಕು ಅನ್ನಿಸಿತು.

ತಂದೆಗೆ ಕರೆ ಮಾಡಿ ಸಂಬಳ ಬಂದಿರುವುದಾಗಿ ತಿಳಿಸಿದ. 'ನಾನು ನಿಮಗಾಗಿ ಏನು ಕೊಂಡು ತರಲಿ?' ಎಂದು ಕೇಳಿದರು. 'ನನಗೇನೂ ಬೇಡ, ನಿನ್ನ ಅಮ್ಮನ ಹತ್ತಿರ ಕೇಳು' ಎಂದು ಅಮ್ಮನ ಕೈಗೆ ಫೋನ್ ಕೊಟ್ಟರು. 'ನೋಡಮ್ಮಾ, ಅಪ್ಪಾ ಎಂದಿಗೂ ಬದಲಾಗುವುದೇ ಇಲ್ಲವೇ?' ಎಂದು ಅಮ್ಮನ ಮೇಲೆ ಸಿಡುಕಿದ.

20ನೇ ತಾರೀಖು ದಾಟುವ ವೇಳೆಗೆ ಅವನ ಕೈಯಲ್ಲಿದ್ದ ಹಣವೆಲ್ಲ ಮುಗಿದು ಹೋಗಿತ್ತು. ಮೊದಲ ಸಲ ಸಂಬಳ ಪಡೆದ ಖುಷಿಯಲ್ಲಿ ಮನಸಾರೆ ಖರ್ಚು ಮಾಡಿದ್ದ. ಕಚೇರಿಯ ಸಂಬಳ ಜಮಾ ಮಾಡಲು ತೆರೆಯಲಾದ ಬ್ಯಾಂಕ್ ಖಾತೆಯ ಹೊರತಾಗಿ, ಕಾಲೇಜು ದಿನಗಳಿಂದಲೂ ಅವನ ಹೆಸರಿನಲ್ಲಿ ಮತ್ತೊಂದು ಬ್ಯಾಂಕ್ ಖಾತೆ ಇತ್ತು. ತಂದೆ ಅದರಲ್ಲಿ ಇವನ ಮಾಸಿಕ ಖರ್ಚಿಗೆ ಹಣ ಹಾಕುತ್ತಿದ್ದರು. ಕೆಲಸಕ್ಕೆ ಸೇರಿದ್ದರಿಂದ ಇನ್ನು ಮುಂದೆ ಅಪ್ಪ ತನಗೆ ಹಣ ಹಾಕುವುದಿಲ್ಲ ಎಂದು ಅವನು ಅಂದುಕೊಂಡಿದ್ದ. ಆದರೆ, ಪ್ರತಿ ತಿಂಗಳಂತೆ ಈ ಸಲವೂ ಒಂದನೇ ತಾರೀಖಿನಂದೇ ಇವನ ಖಾತೆಗೆ ಅಪ್ಪ ಹಣ ಹಾಕಿದ್ದರು. ಅದು ಈ ತಿಂಗಳ ಕೊನೆಯಲ್ಲಿ ಅವನಿಗೆ ತುಂಬಾ ಸಹಾಯಕವಾಗಿತ್ತು.

ನಂತರದ ತಿಂಗಳುಗಳಲ್ಲಿ ಕೂಡ ತಂದೆ ಹಣ ನೀಡುವುದನ್ನು ನಿಲ್ಲಿಸಲಿಲ್ಲ. ಆ ವರ್ಷವೂ ಅವನಿಗೆ ಎಂದಿನಂತೆಯೇ ದೀಪಾವಳಿ, ಪೊಂಗಲ್ ಮತ್ತು ಅವನ ಹುಟ್ಟುಹಬ್ಬಕ್ಕೆ ಹೊಸ ಬಟ್ಟೆಗಳನ್ನು ಖರೀದಿಸಿದರು. ನನ್ನ ಕೈಗೆ ಹಣ ಸಿಕ್ಕಿದ ತಕ್ಷಣ ನಾನು ಬದಲಾದೆ. ಆದರೆ ಅಪ್ಪ ಸ್ವಲ್ಪವೂ ಬದಲಾಗಲಿಲ್ಲ ಎಂದು ಅವನು ತನ್ನ ಬಗ್ಗೆಯೇ ನಾಚಿಕೆ ಪಟ್ಟುಕೊಂಡ.

ತನ್ನ ಮರಿಗಳನ್ನು ತಾಯಿಯಂತೆ ನೋಡಿಕೊಳ್ಳಲು ಪ್ರಾರಂಭಿಸಿತು. ಮರಿಗಳಿಗೆ ಆಹಾರ ತಂದು ಕೊಡುತ್ತಿತ್ತು. ಅವು ಸ್ವಲ್ಪ ಬೆಳೆದ ನಂತರ ಅವುಗಳಿಗೆ ಸ್ವತಃ ಬೇಟೆಯಾಡುವುದನ್ನು ಕಲಿಸಿಕೊಟ್ಟಿತು. ಅವುಗಳಿಗೆ ಅಗತ್ಯ ರಕ್ಷಣೆಯನ್ನೂ ಅದು ನೀಡುತ್ತಿತ್ತು. ಹೀಗೆ ಎರಡು ವರ್ಷಗಳ ಕಾಲ ತಂದೆಯೇ ಸ್ವತಃ ತಾಯಿಯೂ ಆಗಿ ಮರಿಗಳನ್ನು ಸಾಕಿತು. ಈಗ ಆ ಮರಿಗಳು ಒಂಟಿಯಾಗಿ ಬೇಟೆಯಾಡುವಷ್ಟು ಪ್ರಬುದ್ಧವಾಗಿವೆ.

ಸಾಮಾನ್ಯವಾಗಿ ಗಂಡು ಸಿಂಹಗಳು ತಮ್ಮ ಸಂಗಾತಿಯನ್ನು ಕಳೆದುಕೊಂಡಾಗ ಬೇರೆ ಹೆಣ್ಣು ಸಿಂಹಗಳನ್ನು ಹುಡುಕಿಕೊಂಡು ಹೋಗುತ್ತವೆ. ಆದರೆ ಬೆಡಿಯಾ ನಾರ್ ಸಿಂಹ ತನ್ನನ್ನು ಹುಡುಕಿಕೊಂಡು ಬಂದ ಇತರ ಸಿಂಹಿಣಿಗಳನ್ನು ಓಡಿಸಿ ಬಿಟ್ಟಿತು. 'ಮರಿಗಳು ಸಾಕು ತಾಯಿಯಿಂದ ಹಿಂಸೆ ಅನುಭವಿಸಬಹುದು' ಎಂಬ ಚಿಂತನೆಯೇ ಇದಕ್ಕೆ ಕಾರಣ. ಇದನ್ನು ವಿಶ್ವದ ಅಪರೂಪದ ಘಟನೆ ಎಂದು ಪರಿಗಣಿಸಲಾಗಿದೆ!



# ತಂದೆಗೆ ಗೌರವ ನೀಡಿ!

ವೃದ್ಧಾಪ್ಯದಲ್ಲಿ ಒಂಟಿತನ ಕ್ರೂರವಾಗಿರುತ್ತದೆ. ಅದರಲ್ಲೂ ತಂದೆ ಒಬ್ಬರೇ ಇರುವುದು ಇನ್ನೂ ಬೇಸರದ ಸಂಗತಿ. ತಂದೆ ಬೇಗ ತೀರಿಹೋದರೆ, ತಾಯಿ ವೃದ್ಧಾಪ್ಯದಲ್ಲಿ ಒಬ್ಬಂಟಿಯಾಗಿ ಉಳಿದರೂ ತನ್ನ ಮಗ ಅಥವಾ ಮಗಳ ಜೊತೆಯಲ್ಲಿ ಇದ್ದುಕೊಂಡು ಹೇಗೋ ಜೀವನ ಕಳೆಯುತ್ತಾಳೆ. ಅಪ್ಪನಿಗೆ ಇದು ಅಷ್ಟೊಂದು ಸುಲಭವಾಗಿರುವುದಿಲ್ಲಲ್ಲ. ಕೊನೆಯವರೆಗೂ ಅವರಿಗೆ ಒಂಟಿತನ ಕಾಡುತ್ತಲೇ ಇರುತ್ತದೆ.

ತಮ್ಮ ಎಲ್ಲ ಬೇಕು ಬೇಡಗಳಿಗೂ ಪತ್ನಿಯನ್ನೇ ಅವಲಂಬಿಸುವುದು ಅಪ್ಪಂದಿರ ಸಹಜ ಸ್ವಭಾವ. ಹೆಂಡತಿ ತನಗೆ ಬೇಕಾದುದು ಏನು ಎಂಬುದನ್ನು ತಿಳಿದಿರುತ್ತಾಳೆ ಮತ್ತು ಅದನ್ನು ಸರಿಯಾಗಿ ಮಾಡುತ್ತಾಳೆ. ಕಡೆಗಾಲದಲ್ಲಿ ತನ್ನ ಸಂಗಾತಿಯನ್ನು ಕಳೆದುಕೊಂಡ ದುಃಖಿತ ತಂದೆಯ ಕೊನೆಯ ದಿನಗಳು ಸಾಮಾನ್ಯವಾಗಿ ಮೌನ, ಏಕಾಂತ, ಒಂಟಿತನ, ಕೆಲವೊಮ್ಮೆ ಪ್ರತ್ಯೇಕತೆ ಮತ್ತು ನಿರ್ಲಕ್ಷ್ಯದಲ್ಲಿ ಕಳೆಯುತ್ತದೆ. ಅದಕ್ಕಾಗಿಯೇ ಅನೇಕ ಜನರು ತಾವು ಕೆಲಸ ಮಾಡುತ್ತಲೇ ಇರಬೇಕು ಎಂದೂ ಮತ್ತು ನಿವೃತ್ತರಾಗುವ ಮೊದಲೇ ತಮ್ಮ ಜೀವನ ಮುಗಿದು ಹೋಗಬೇಕು ಎಂದೂ ಭಾವಿಸುತ್ತಾರೆ.

ಹೆಂಡತಿಯನ್ನು ಕಳೆದುಕೊಂಡ ತಂದೆಯ ಒಂಟಿತನ ಅತ್ಯಂತ ನೋವಿನಿಂದ ಕೂಡಿರುತ್ತದೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಕುಟುಂಬದ ಮುಖ್ಯಸ್ಥನಾದವನು ಅಧಿಕಾರದಿಂದ ಮತ್ತು ಇತರರ ಗೌರವಕ್ಕೆ ಅರ್ಹನಾಗಿ ಬದುಕಿದವನು ಇದ್ದಕ್ಕಿದ್ದಂತೆ ಈಗ ಎಡವಿ ಬೀಳುತ್ತಾನೆ. ಅಲ್ಲಿಯವರೆಗೂ ಬೇರೆಯವರಿಂದ ಏನನ್ನೂ ಕೇಳದ ಕುಟುಂಬದ ಮುಖ್ಯಸ್ಥನಿಗೆ, ಇತರರಿಗೆ ಕೊಡುವುದಷ್ಟೇ ಗೊತ್ತಿತ್ತು. ಹಾಗಾಗಿ ಈಗ ವೃದ್ಧಾಪ್ಯದಲ್ಲಿ ಇತರರ ಬಳಿ ಕೇಳಲು ಬಾಯಿ ಕೂಡ ಬರುವುದಿಲ್ಲ. ಆದುದರಿಂದ ಕುಟುಂಬವೇ ಅವರ ಅಗತ್ಯಗಳನ್ನು ತಿಳಿದುಕೊಂಡು ನಡೆದುಕೊಳ್ಳಬೇಕು.

ಗಂಡುಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಇರುವ ತುಂಬು ಸಂಸಾರವಿದ್ದರೂ ಹೀಗೆ ಒಂಟಿತನ ಅನುಭವಿಸುವ ಅಪ್ಪಂದಿರು ಹಲವರಿದ್ದಾರೆ. ವೃದ್ಧಾಪ್ಯದಲ್ಲಿ ಒಂಟಿತನವು ಸಾವಿಗೆ ಬೇಗ ಆಹ್ವಾನ ನೀಡುತ್ತದೆ. ಕಾರ್ಟಿಸಾಲ್‌ನಂತಹ ಒತ್ತಡದ ಹಾರ್ಮೋನ್‌ಗಳು ಹೆಚ್ಚಾಗಿ ಸ್ರವಿಸುವುದರಿಂದ ಅವರ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತದೆ. ಇದು ಅವರ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಇದು ಮಧುಮೇಹ ಮತ್ತು ಹೃದ್ರೋಗದ ಅಪಾಯವನ್ನು ಹೆಚ್ಚಿಸುತ್ತದೆ.

ವೃದ್ಧಾಪ್ಯದಲ್ಲಿ ಒಂಟಿತನವನ್ನು ತಪ್ಪಿಸಲು ತಂದೆ ಏನು ಮಾಡಬೇಕು : ಪ್ರೀತಿಪಾತ್ರರು ನಿಮಗೆ ಹೇಳುವುದನ್ನು ಕಿವಿಗೊಟ್ಟು ಆಲಿಸಿ. ಅವರು ನಿಮಗಿಷ್ಟವಾಗುವ ಏನನ್ನಾದರೂ ಮಾಡಿದಾಗ ಅವರನ್ನು ಪ್ರಶಂಸಿಸಿ. ಇದರಿಂದ ಅವರು ನಿಮಗೆ ಹತ್ತಿರವಾಗುತ್ತಾರೆ. ಏನಾದರೂ ಹೊಸದನ್ನು ಕಲಿಯಿರಿ. ಕಿರಿಯರೊಂದಿಗೆ ಹೆಚ್ಚು ಮಾತನಾಡಿ. ನಿಮಗೆ ತಿಳಿದಿರುವುದನ್ನು ಇತರರಿಗೆ ಕಲಿಸಿ. ಸಮಾಜ ಸೇವಾ ಸಂಸ್ಥೆಗಳೊಂದಿಗೆ ಸೇರಿ ಸಾಮಾಜಿಕ ಕೆಲಸಗಳನ್ನು ಮಾಡಿ. ಸಾಕುಪ್ರಾಣಿಗಳನ್ನೂ ಸಾಕಬಹುದು.

ತಂದೆಯ ಒಂಟಿತನವನ್ನು ತಪ್ಪಿಸಲು ಕುಟುಂಬಗಳು ಏನು ಮಾಡಬಹುದು : ಅವರಿಗೆ ನಿಮ್ಮ ಬಳಿ ಹೇಳಿಕೊಳ್ಳಲಾಗದಂತಹ ವೆಚ್ಚಗಳಿರಬಹುದು. ಅವರ ಅಗತ್ಯಗಳೇನೆಂದು ಕೇಳದೆಯೇ ಅವರಿಗೆ ಆಗಾಗ ಸ್ವಲ್ಪ ಹಣವನ್ನು ನೀಡಿ. ಅವರಿಗೆ ಓದುವ ಅಭ್ಯಾಸವಿದ್ದರೆ, ಅವರಿಗೆ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಖರೀದಿಸಿ ಕೊಡಿ. ಅವರ ಸೆಲ್ ಫೋನ್ ಅನ್ನು ರೀಚಾರ್ಜ್ ಮಾಡಿಸಿ ಕೊಡಿ. ಅವರಿಗಾಗಿ ಪ್ರತ್ಯೇಕ ಟಿವಿ ಖರೀದಿಸಿ ಕೊಡುವುದು ಕೂಡ ಒಳ್ಳೆಯದು. ಇದರಿಂದ ಅವರು ತಾವು ಬಯಸಿದ ಚಾನಲ್‌ಗಳನ್ನು ವೀಕ್ಷಿಸುತ್ತಾರೆ ಅಥವಾ ಅವರು ನಿಮ್ಮೊಂದಿಗೆ ಕುಳಿತು ಅವರು ಬಯಸಿದ ಟಿವಿ ಕಾರ್ಯಕ್ರಮಗಳನ್ನು ವೀಕ್ಷಿಸಲು ಅನುವು ಮಾಡಿಕೊಡಿ. ಅವರನ್ನು ಮೂಲೆಯಲ್ಲಿ ಕೂರಿಸಿ ಲಾಕ್ ಮಾಡುವ ಬದಲಿಗೆ, ಅವರಿಗೆ ಸಣ್ಣಸಣ್ಣ ಕೆಲಸಗಳನ್ನು ನೀಡಿ, ಅವರಿಂದ ಮಾಡಲು ಸಾಧ್ಯವಾಗುವ ಕೆಲವು ಜವಾಬ್ದಾರಿಗಳನ್ನೂ ಅವರಿಗೆ ನೀಡಬಹುದು. ಆಗ ಅವರು ತಾವೂ ಕುಟುಂಬದ ಒಂದು ಭಾಗವೆಂದು ಭಾವಿಸುತ್ತಾರೆ. ಅವರಿಂದ ಅವರ ಮೊಮ್ಮಗ ಮತ್ತು ಮೊಮ್ಮಗಳನ್ನು ಬೇರ್ಪಡಿಸಬೇಡಿ. ಮಕ್ಕಳ ಪ್ರೀತಿಯೇ ಅವರ ದುಃಖಗಳಿಗೆ ಸಮಾಧಾನ ನೀಡುವ ಔಷಧಿಯಾಗಿರುತ್ತದೆ.

ತಂದೆಯನ್ನು ಗೌರವಿಸಿ... ಅವರು ಗೌರವಕ್ಕೆ ಅರ್ಹರಾದವರು!





Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 & Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL


RAMRAJ
mithu®
TOWELS
ತಾಜಾತನದ ಮೊದಲ
ಸ್ಪರ್ಶದೊಂದಿಗೆ
ಪ್ರತಿದಿನವನ್ನೂ ಪ್ರಾರಂಭಿಸಿ.
VARIETIES
Bamboo Towels | Terry Towels
Signature Towels
Striped & Chequered Towels
Shop Online at
www.ramrajcotton.in
Premium Cotton
High Absorption
Quick Drying
Super Soft
Non-Allergic to Skin
Range of Colours & Patterns

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-06-2025 Posted at Tirupur BPC on 5th of every month.

Back To School

RAMRAJ
INNERWEAR

ಶಾಲೆಗೆ ಹೋಗುವ ಪ್ರತಿ
ದಿನವೂ ನಿಮಗೆ ನೆಮ್ಮದಿಯಾದ
ಅನುಭವವನ್ನು ನೀಡುತ್ತದೆ.

ಮೃದುವಾದ ಮತ್ತು ಗಾಳಿಯಾಡುವಂತಹ ಹತ್ತಿಯಲ್ಲಿ
ತಯಾರಿಸಲಾದ ರಾಮ್‌ರಾಜ್ ಒಳಉಡುಪುಗಳು,
ನಿಮ್ಮ ಮಕ್ಕಳ ಇಡೀ ದಿನವನ್ನು ಉಲ್ಲಾಸಬರಿತವಾಗಿಸುತ್ತದೆ,

CONFIDENCE
FOR
STUDENTS




SUKRA SUPER FINE COTTON VESTS | ROMEX SUPERIOR BANIANS | RISE-UP PREMIUM BANIANS | ACOSTE LUXURY INNERWEARS | Breeze Eye Let Vests | WinStripe STRIPED BANIANS | ARCHERY GYM VEST | COMPACT PREMIUM COTTON RIB VESTS | LITTLE STARS KIDS INNERWEARS

Available at Ramraj Showrooms and All Leading Textile Shops | Shop Online at www.ramrajcotton.in